ಕನ್ನಡ ವಿಶ್ವವಿದ್ಯಾಲಯ

ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಆಯ್ದ ಸಣ್ಣ ಕಥೆಗಳಲ್ಲಿ ಮುಸ್ಲಿಂ ಸಂವೇದನೆ

೨೦೦೭-೦೮ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಮಾರ್ಗದರ್ಶಕರು

ಡಾ. ಕೆ.ಮಾಲತಿ

ಕನ್ನಡ ಪ್ರಾಧ್ಯಾಪಕರು

ಜೆ.ಎಸ್.ಎಸ್.ಮಹಿಳಾ ಕಾಲೇಜು

ಸರಸ್ವತಿಪುರಂ, ಮೈಸೂರು-೨೩

ನಿಬಂಧಕಾರರು

ನಾಸಿರಾ ಬಾನು.ಎಂ.ಎ.

ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೦೭-೦೮

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯ

ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಆಯ್ದ ಸಣ್ಣ ಕಥೆಗಳಲ್ಲಿ ಮುಸ್ಲಿಂ ಸಂವೇದನೆ

೨೦೦೭-೦೮ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಮಾರ್ಗದರ್ಶಕರು

ಡಾ. ಕೆ.ಮಾಲತಿ

ಕನ್ನಡ ಪ್ರಾಧ್ಯಾಪಕರು
ಜೆ.ಎಸ್.ಎಸ್.ಮಹಿಳಾ ಕಾಲೇಜು
ಸರಸ್ವತಿಪುರಂ, ಮೈಸೂರು-೨೩

ನಿಬಂಧಕಾರರು

ನಾಸಿರಾ ಬಾನು.ಎಂ.ಎ.

ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೭-೦೮

ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣಪತ್ರ

೨೦೦೭–೦೮ನೇ ಸಾಲಿನಲ್ಲಿ ಕ್ರಮ ಸಂಖ್ಯೆ KVTM - ೦೦೧೫೦೮ ಹಂಪಿ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ನಾಸಿರಾಬಾನು.ಎಂ.ಎ. ಅವರು ೨೦೦೭–೦೮ರ ಪರೀಕ್ಷಾ ಭಾಗವಾಗಿ ನನ್ನ ಮಾರ್ಗದರ್ಶನದಲ್ಲಿ **"ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಆಯ್ದ ಸಣ್ಣ ಕಥೆಗಳಲ್ಲಿ ಮುಸ್ಲಿಂ ಸಂವೇದನೆ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಕೆ. ಮಾಲತಿ)
ಕನ್ನಡ ಪ್ರಾಧ್ಯಾಪಕರು
ಜೆ.ಎಸ್.ಎಸ್. ಮಹಿಳಾ ಕಾಲೇಜು
ಸರಸ್ವತಿಪುರಂ, ಮೈಸೂರು –೨೩.

ಮೈಸೂರು
ದಿನಾಂಕ: ೧೫/೧೨/೨೦೦೮

ಅಭ್ಯರ್ಥಿಯ ಘೋಷಣಾಪತ್ರ

“ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಆಯ್ದ ಸಣ್ಣ ಕಥೆಗಳಲ್ಲಿ ಮುಸ್ಲಿಂ ಸಂವೇದನೆ” ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ KVTM - ೦೦೧೫೦ರ ವಿದ್ಯಾರ್ಥಿಯಾದ ನಾನು ೨೦೦೭-೦೮ನೇ ಸಾಲಿನ ಪರೀಕ್ಷೆಗಾಗಿ **ಡಾ. ಕೆ.ಮಾಲತಿ, ಕನ್ನಡ ಪ್ರಾಧ್ಯಾಪಕರು, ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು** ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: 15/12/2008

(ನಾಸಿರಾಬಾನು ಎಂ.ಎ.)
೨೦೦೭-೦೮ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿನಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಪರಿವಿಡಿ

ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಆಯ್ದ ಸಣ್ಣ ಕಥೆಗಳಲ್ಲಿ ಮುಸ್ಲಿಂ ಸಂವೇದನೆ

*****

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಹಿತ್ಯವು ಹಿಂದಿನಿಂದಲೂ ಬೆಳೆದುಬಂದಿರುವ ರೀತಿಯನ್ನು ಗಮನಿಸಿದಾಗ 'ಸಾಹಿತ್ಯ ನಿಂತ ನೀರಲ್ಲ, ಅದು ಸದಾ ಬೆಳೆಯುತ್ತಿರುವ ಜೀವಂತಿಕೆಯ ಸೆಲೆ' ಎನ್ನುವುದು ತಿಳಿಯುತ್ತದೆ. ಸಾಹಿತ್ಯದಲ್ಲಿ ಅನೇಕ ಪ್ರಕಾರಗಳು ಹುಟ್ಟಿಕೊಂಡಿವೆ. ಕಥೆ, ಕಾದಂಬರಿ, ನಾಟಕ, ತೌಲನಿಕ ಇತ್ಯಾದಿ ಹೊಸ ಹೊಸ ರೂಪಗಳು ತಳೆದಂತೆ ಸಾಹಿತ್ಯದ ಸೊಬಗು ವಿಸ್ತೃತವಾಗುತ್ತಾ ಹೋಗುತ್ತದೆ.

ತೌಲನಿಕ ಸಾಹಿತ್ಯವು ಇತ್ತೀಚೆಗೆ ಬಂದ ಸಾಹಿತ್ಯ ಪ್ರಕಾರವಾಗಿದೆ. ಈ ಸಾಹಿತ್ಯಾಧ್ಯಯನವು ಜ್ಞಾನ ಸಂಪಾದನೆಯ ಪ್ರಮುಖ ಮಾರ್ಗಗಳಲ್ಲೊಂದು. ಉತ್ತಮ-ವಾದ ಜ್ಞಾನಾರ್ಜನೆಯನ್ನು ಪಡೆಯಲು ಇದೊಂದು ರಾಜ ಮಾರ್ಗವಿದ್ದಂತೆ. ಜಗತ್ತಿನ ಎಲ್ಲಾ ಕವಿಗಳನ್ನು ಸಾಲಾಗಿ ನಿಲ್ಲಿಸಿದರೆ ''ಒಬ್ಬನ ಕೈ ಮತ್ತೊಬ್ಬನ ಜೇಬಿನಲ್ಲಿರುತ್ತದೆ' ಎಂಬ ಮಾತು ಸತ್ಯವಾದುದು. ಇದು ತೌಲನಿಕ ಅಧ್ಯಯನದಿಂದ ತಿಳಿದುಬರುತ್ತದೆ. ಒಬ್ಬ ಕವಿಯ ಪ್ರಭಾವ ಮತ್ತೊಬ್ಬನ ಮೇಲೆ ಎಷ್ಟರಮಟ್ಟಿಗಿರುತ್ತದೆ ಎಂಬುದು ಭಾಷೆ, ಆಶಯ, ಧೋರಣೆ, ಶೈಲಿ, ಕಥಾವಸ್ತು ಇವೆಲ್ಲವೂ ಬೇರೊಬ್ಬ ಕವಿಯ, ಕೃತಿಯ ಪ್ರೇರಣೆ ಹೇಗಾಗಿದೆ ಎಂಬುದನ್ನು ತೌಲನಿಕ ಸಾಹಿತ್ಯಾಧ್ಯಯನದಿಂದ ತಿಳಿಯಬಹುದು.

ತೌಲನಿಕ ಅಧ್ಯಯನದಿಂದ ಅಧ್ಯಯನ ಮಾಡುವವರ ಮತ್ತು ಓದುಗರ ಜ್ಞಾನ ದಿಗಂತ ವಿಸ್ತಾರವಾಗುತ್ತದೆ. ಇದು ಇತ್ತೀಚೆಗೆ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಇದು ವಿಮರ್ಶೆಯ ಒಂದು ಯಶಸ್ವಿ ಮಾಧ್ಯಮವಾಗಿದೆ.

ಕೃತಿಯೊಂದರ ಮೌಲ್ಯವನ್ನು ನಿರ್ಣಯಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ತೌಲನಿಕ ಅಧ್ಯಯನ ವಿಧಾನವು ಅಂತರ್‌ಶಿಸ್ತೀಯ ಸಂಬಂಧವನ್ನು ನಿರ್ಣಯಿಸುವಲ್ಲಿ ಜ್ಞಾನಿಕ ಸಮಸ್ಯೆಗಳನ್ನು ಬಡಿಸುವಲ್ಲಿ ಭೂತ, ವರ್ತಮಾನಗಳಿಗೆ ಸೇತುವೆಯನ್ನು ನಿರ್ಮಿಸುವಲ್ಲಿ ತೌಲನಿಕ ಅಧ್ಯಯನಕ್ಕೆ ಮಹತ್ವಪೂರ್ಣ ಸ್ಥಾನವಿದೆ ಎಂಬುದರಲ್ಲಿ ಸಂದೇಹವಿಲ್ಲ ಎಂಬುದು ಗೊತ್ತಾಗುತ್ತದೆ. ಇದು ಯಶಸ್ವಿಯಾಗಿ ಸಾಗಬೇಕಾದರೆ ಮೌಲ್ಯೀಕತೆಯನ್ನು ಅರಿಯಲು ಸಮಾನವೆಂದು ತೋರುವ ಕೃತಿಗಳ ತುಲನೆ ಹೊರತು ಬೇರೆ ಮಾರ್ಗವೇ ಇಲ್ಲ.

ಶ್ರೇಷ್ಠ ಸಾಹಿತಿ, ಹಿರಿಯ ಕಥೆಗಾರ್ತಿಯರಲ್ಲಿ ''ಸಾರಾ ಅಬೂಬಕ್ಕರ್''ರವರು ಹಲವಾರು ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ಕಥೆಗಳನ್ನು ಬರೆದಿದ್ದಾರೆ. ಅದರಲ್ಲಿ ''ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು'' ಎಂಬ ಕಥೆ ಮಹಿಳೆಯನ್ನು ಕೇಂದ್ರವಾಗಿರಿಸಿ ಆ ಮೂಲಕ ಅವಳ ಸಾಮಾಜಿಕ ಬದುಕನ್ನು ಕುರಿತು ಬರೆದಂತಹ ಕೃತಿಯಾಗಿದೆ. ಇದು ಇವರ ಮೂರನೆಯ ಕಥಾಸಂಕಲನವಾಗಿದೆ. ಅದೇ ರೀತಿ ಒಂದೇ ಬಗೆಯ

ಸಮಸ್ಯೆಯನ್ನು ಒಳಗೊಂಡ ಬಾನು ಮುಷ್ತಾಕ್ ಅವರ ಎರಡನೆಯ ಕಥಾಸಂಕಲನ "ಬೆಂಕಿಮಳೆ" ಕಾಲಾಂತರ ವ್ಯತ್ಯಾಸದಿಂದ ಕೂಡಿದ್ದರೂ ಕೂಡ ಬಹುತೇಕ ಒಂದೇ ರೀತಿಯ ಆಶಯವನ್ನು ಹೊಂದಿ ರಚಿತವಾಗಿದೆ. ಈ ಎರಡು ಕಥೆಗಳನ್ನು ಪರಸ್ಪರ ತುಲನೆಗೆ ಒಳಪಡಿಸಿ ಅಲ್ಲಿರುವ ವಿಚಾರಗಳನ್ನು ಆದಷ್ಟು ಹೊರತೆಗೆಯುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

'ಬಾನುಮುಷ್ತಾಕ್'ರವರ 'ಬೆಂಕಿಮಳೆ', 'ಸಾರಾ ಅಬೂಬಕ್ಕರ್'ರವರ ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು ಕಥೆಗಳನ್ನು ಆರಿಸಿಕೊಳ್ಳಲು ಕಾರಣ ಅದರೊಳಗಿರುವ ಮಹಿಳೆಯರ ಸಾಮಾಜಿಕ ಸಮಸ್ಯೆ ಈ ಸಾಮಾಜಿಕ ಸಮಸ್ಯೆಗೆ ಪ್ರಮುಖ ಕಾರಣವೇನು? ಅದರ ಆಂತರಿಕ, ಬಾಹ್ಯ ನೋಟಗಳ ಕುರಿತು ಚಿಂತಿಸಿ ವೈಜ್ಞಾನಿಕವಾಗಿ ವಿವೇಚಿಸುವ, ವಿಶ್ಲೇಷಿಸುವ ಉದ್ದೇಶ ನನ್ನದಾಗಿದೆ.

ಇವೆರೆಡು ಕಥಾಸಂಕಲನಗಳನ್ನು ತೌಲನಿಕವಾಗಿ ನೋಡುವುದರಿಂದ ಅವುಗಳಲ್ಲಿ ಕಾಣಬರುವ ಸಾಮ್ಯ, ವೈಷಮ್ಯಗಳನ್ನು ಗುರುತಿಸಬಹುದು. ತೌಲನಿಕ ಅಧ್ಯಯನವು ಇಂದು ವಿಶ್ವವ್ಯಾಪಕವಾದುದಾಗಿದೆ.

ಒಂದು ಸಾಹಿತ್ಯ ಕೃತಿಯನ್ನು ಮತ್ತೊಂದು ಕೃತಿಯೊಡನೆ ಹೋಲಿಕೆ ಮಾಡಿದಾಗ ಪ್ರಪಂಚದಲ್ಲಿನ ಎಲ್ಲಾ ಜನರ ಮೂಲಭೂತ ಭಾವನೆಗಳು, ವಿಚಾರಗಳು ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಎಂಬುದು ಗೊತ್ತಾಗುತ್ತದೆ. ಪಂಪನ ಭಾರತಕ್ಕೂ ಕುಮಾರವ್ಯಾಸನ ಭಾರತಕ್ಕೆ ಅವುಗಳದ್ದೇ ಆದ ಕೆಲವು ಸಾಮ್ಯ ಅಂಶಗಳನ್ನು ಗಮನಿಸಬಹುದು. ಯಾವುದೇ ಒಂದು ಕೃತಿಯನ್ನು ಶ್ರೇಷ್ಠ ಎಂದು ಪರಿಗಣಿಸಬೇಕಾದರೆ ಅಷ್ಟೇ ಮೌಲ್ಯಯುತ ಹೊಂದಿರುವ ಇನ್ನೊಂದು ಕೃತಿಯೊಂದಿಗೆ ಹೋಲಿಸಿ ನೋಡಿದಾಗ ಮಾತ್ರ ಅವುಗಳ ಹಿರಿಮೆ ಗೊತ್ತಾಗುತ್ತದೆ.

ಒಂದು ಸಾಹಿತ್ಯ ಕೃತಿಯನ್ನು ಪ್ರಚಲಿತ ವಿದ್ಯಾಮಾನಗಳಿಗೆ ಹತ್ತಿರವಾದುದೆಂದು ಗುರುತಿಸುವಾಗ ವಿಮರ್ಶಕನು ಈ ಕೃತಿಯನ್ನು ಹಲವು ಅಂಶಗಳೊಂದಿಗೆ, ವಿಭಾಗಗಳೊಂದಿಗೆ ಓರೆ ಹಚ್ಚಿ ನೋಡಬೇಕಾಗುತ್ತದೆ. ಈ ರೀತಿಯ ನೋಟದಿಂದ ಕೃತಿಯ ಮಹತ್ವಕ್ಕೆ ಕಾರಣವಾದ ಅಂಶಗಳು ಪರಿಚಿತವಾಗುತ್ತವೆ. ಇದಲ್ಲದೆ ಆಶಯ, ಮೌಲ್ಯಗಳು, ಧ್ವನಿಗಳು ಇಲ್ಲಿಂದ ಜೀವವನ್ನು ಪಡೆಯುತ್ತವೆ.

ಇದರ ವ್ಯಾಪ್ತಿಯನ್ನು ಕುರಿತು ಹೇಳುವುದಾದರೆ ಪ್ರಪಂಚದ ಬೇರೆ-ಬೇರೆ ಭಾಷೆಗಳ ಆಯಾಯ ಕಾಲಮಾನದ ಕವಿಕೃತಿಯನ್ನು ತೌಲನಿಕ ಸಾಹಿತ್ಯ ಅಧ್ಯಯನ ಮಾಡುತ್ತದೆ. ಈ ಪ್ರಬಂಧದ ವ್ಯಾಪ್ತಿ ತುಂಬ ವಿಶಾಲವೂ ಅಲ್ಲದೆ, ಅತೀ ಕಡಿಮೆಯೂ ಅಲ್ಲದೆ ತನ್ನದೇ ಆದ ಪರಿಮಿತಿಯನ್ನು ಒಳಗೊಂಡಿದೆ. ನನ್ನ ಸಂಶೋಧನಾ ನಿಬಂಧ

"ಸಾರಾ ಅಬೂಬಕ್ಕರ್ ಮತ್ತು ಬಾನುಮುಷ್ತಾಕ್"ರವರ ಆಯ್ದ ಸಣ್ಣಕಥೆಗಳಲ್ಲಿ ಮುಸ್ಲಿಂ ಸಂವೇದನೆ"ಯನ್ನು ಒಟ್ಟು ೭ ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದೇನೆ.

- ಮೊದಲನೆ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ.
- ಎರಡನೆ ಅಧ್ಯಾಯದಲ್ಲಿ ಆಧುನಿಕ ಸಣ್ಣ ಕಥೆಯ ಸ್ವರೂಪ, ಇತಿಹಾಸ.
- ಮೂರನೆಯ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ.
- ನಾಲ್ಕನೆ ಅಧ್ಯಾಯದಲ್ಲಿ ಸಣ್ಣ ಕಥೆಯ ಪ್ರಕಾರದಲ್ಲಿ ಮಹಿಳಾ ಸಂವೇದನೆ.
- ಐದನೆ ಅಧ್ಯಾಯದಲ್ಲಿ ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಜೀವನ ಮತ್ತು ಸಾಧನೆ.
- ಆರನೆ ಅಧ್ಯಾಯದಲ್ಲಿ ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಮತ್ತು ಬೆಂಕಿಮಳೆ ಕಥಾವಸ್ತುಗಳ ವಿಶ್ಲೇಷಣೆ.
- ಏಳನೆ ಅಧ್ಯಾಯದಲ್ಲಿ ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಮತ್ತು ಬೆಂಕಿಮಳೆ ಕಥೆಗಳ ತೌಲನಿಕ ಅಧ್ಯಯನ.

ನಂತರ ನಿಬಂಧದ ಸಮಾರೋಪವನ್ನು ಕುರಿತು ಪ್ರಸ್ತಾಪಿಸಿರುತ್ತೇನೆ.

ಹೀಗೆ ಏಳು ಅಧ್ಯಾಯಗಳನ್ನೊಳಗೊಂಡ ನನ್ನ ಸಂಶೋಧನ ನಿಬಂಧದ ಪರಿವಿಡಿಯ ಚಿತ್ರಣವನ್ನು ಕಾಣಬಹುದಾಗಿದೆ.

ಇಲ್ಲಿನ ಎರಡು ಕಥೆಗಳನ್ನು ಒಂದರೊಳಗೊಂದು ಇಟ್ಟು ಹಿನ್ನೆಲೆ, ವಸ್ತು, ಪಾತ್ರ, ಮೌಲ್ಯಗಳನ್ನು ವಿವೇಚಿಸಿ, ಭಿನ್ನತೆ, ಆಶಯ, ಧೋರಣೆ, ಸಮಸ್ಯೆ ಹಾಗೂ ಇವುಗಳ ಅಧ್ಯಯನದಿಂದ ನಾವು ತಾಳಬಹುದಾದ ನಿಲುವುಗಳು ಮತ್ತು ಪ್ರಯೋಜನಗಳನ್ನು ವಿವರಿಸುವ ವ್ಯಾಪ್ತಿಯನ್ನು ಒಳಗೊಂಡಿದೆ. ಇವಿಷ್ಟು ಅಂಶಗಳನ್ನು ಸಾಕಷ್ಟು ವೈಜ್ಞಾನಿಕ ವಿವೇಚನೆಯ ನೆಲೆಯಲ್ಲಿ ನಿಂತು ಯೋಚಿಸುವ ಮೂಲಕ ಪ್ರಾಮಾಣಿಕವಾದ ಅಭಿಪ್ರಾಯ ಗಳನ್ನು ಆಧಾರಗಳೊಂದಿಗೆ ಚರ್ಚಿಸಿ ದಾಖಲಿಸಬೇಕಾಗಿದೆ.

--

ಅಧ್ಯಾಯ : ಒಂದು

ಆಧುನಿಕ ಕನ್ನಡ ಸಣ್ಣಕಥೆಯ ಸ್ವರೂಪ, ಇತಿಹಾಸ ಮತ್ತು ತಾತ್ವಿಕತೆ

ಸಣ್ಣಕಥೆಯ ಹಿನ್ನೆಲೆ:

ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲಿ ನಡೆದ ಸಾಂಸ್ಕೃತಿಕ ಹಾಗೂ ಸಾಹಿತ್ಯದ ಪುನರುತ್ಥಾನದ ಹಲವಾರು ಆವಿಷ್ಕಾರಗಳಲ್ಲಿ ಸಣ್ಣಕಥೆಯೂ ಒಂದು. ಅಜ್ಜಿ ಮೊಮ್ಮಗನಿಗೆ ಹೇಳಿದ ಕಥೆ, ಸಾಹಸಿ ತನ್ನ ಜೊತೆಗಾರರಿಗೆ ಹೇಳಿದ ಕಥೆಯಷ್ಟೇ ಸಣ್ಣ ಕಥೆಯಲ್ಲ. ಮನುಷ್ಯರಲ್ಲಿ ಅಪರಿಚಿತ ಸಂಗತಿಗಳನ್ನು ಕೇಳಿ ತಿಳಿಯುವ ಕುತೂಹಲ ಬೆಳದಂದಿನಿಂದ ಆ ಕುತೂಹಲವನ್ನು ಕಾಯ್ದಿರಿಸಿಕೊಳ್ಳುವ ಪ್ರಯತ್ನದಿಂದ 'ಕಥೆ' ಹೇಳುವ ಪ್ರವೃತ್ತಿ ಬೆಳೆದಿರಬೇಕು. 'ಕಥೆ' ಎಂದರೆ ಹೇಳುವುದು ಎಂದರ್ಥ. ತನ್ನ ಅನುಭವ–ಗಳನ್ನು ಹೇಳಬೇಕು ಎನ್ನುವ ವ್ಯಕ್ತಿಯ ಹಂಬಲ. ಕೇಳಬೇಕು ಎನ್ನುವ ಕುತೂಹಲ ಎಂದಿನಿಂದ ಆರಂಭವಾಯಿತೋ ಅಂದಿನಿಂದಲೇ ಕಥನ ಮಾದರಿಗಳು ಸಿದ್ಧವಾದವೆಂದು ಊಹಿಸಬಹುದು. 'ಕಥೆ' ಎಂದರೆ ಒಂದು ಸಂಗತಿಯನ್ನು ಸ್ವಾರಸ್ಯಪೂರ್ಣವಾಗಿ ಹೇಳುವುದು ಮತ್ತು ಕೇಳುವವನ ಕುತೂಹಲವನ್ನು ಪೋಷಿಸುವುದಾಗಿದೆ. 'ಪಾಣಿನಿ'ಯ ಪ್ರಕಾರ ಕಥೆ ಎಂದರೆ "ಅಲ್ಪ ಸತ್ಯವನ್ನು ಹೇಳುವ ಕಲ್ಪನಾ ಪ್ರಬಂಧ"[೧].

ಈ ಸಣ್ಣಕಥೆ ಹುಟ್ಟಿಕೊಳ್ಳಲು ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೇ ಕಾರಣ–ವಾದರೋ, ಅದು ಪೂರ್ಣವಾಗಿ ಹೊರಗಿನಿಂದಲೇ ಬಂದದ್ದಲ್ಲ. ವೇದೋಪನಿಷತ್ತು, ರಾಮಾಯಣ, ಮಹಾಭಾರತ, ಇಂತಹ ಇತಿಹಾಸದ ಕಥೆಗಳಲ್ಲಿ ಬೃಹತ್ಕಥೆ, ಜಾತಕ ಕಥೆಗಳು, ಪಂಚತಂತ್ರದ ಕಥೆಗಳು ಭಾರತದಾದ್ಯಂತ ಎಲ್ಲಾ ಭಾಷೆಗಳಲ್ಲಿ ದೊರೆಯುವ ಜಾನಪದ ಕಥೆಗಳಲ್ಲ. ವ್ಯಾಪಕವಾಗಿ, ಜೀವಂತವಾಗಿ, ಈ ಕಥನ ಪರಂಪರೆ ಆಧುನಿಕ ಕಾಲದವರೆಗೂ ಹರಿದುಬಂದಿದೆ.

೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಮತ್ತು ಮುದ್ರಣ ಸೌಲಭ್ಯದಿಂದಾಗಿ ಕಥೆಗಳ/ಸಣ್ಣಕಥೆಗಳ ಪ್ರಕಟಣೆ ಆರಂಭವಾಯಿತು. ೧೯೦೦ ರವರೆಗೆ ಸಂಸ್ಕೃತ ಮೂಲದ ಕಥೆಗಳ ಅನುವಾದ ಹೆಚ್ಚು ನಡೆಯಿತು. ಇಂಗ್ಲಿಷ್ ಕಥೆಗಳ ಅನುವಾದ ಕಡಿಮೆ. ಈ ಸೋಪನ ಕಥೆಗಳು, ಅರೇಬಿಯನ್ ನೈಟ್ಸ್, ಬೇತಾಳ ಪಂಚವಿಂಶತಿಕಥೆ, ತೆನಾಲಿರಾಮನ ಹಾಸ್ಯಕಥೆ ಇತ್ಯಾದಿ ಬಂದವು. ಆ ಸಂದರ್ಭದಲ್ಲಿ ಕಥೆಗಳು ಹೆಚ್ಚು ಪ್ರಕಟವಾಗಲು ಅಂದಿನ ಪತ್ರಿಕೆಗಳು ಅವಕಾಶವನ್ನು ಕಲ್ಪಿಸಿದವು. ಸಣ್ಣಕಥೆಗಳಿಗಿದ್ದ ಬೇಡಿಕೆಯಿಂದ ನಾಟಕಗಳನ್ನು ಕಥಾ ರೂಪದಲ್ಲಿ ಅನುವಾದಿಸಿದ್ದುಂಟು.

---

೧. ಕನ್ನಡ ಸಣ್ಣ ಕಥೆಗಳು– ಜಿ.ಹೆಚ್.ನಾಯಕ್, ಪು. ೧

ಸ್ವತಂತ್ರ ಕಥೆಗಳ ರಚನೆಯ ಪ್ರಯತ್ನ ೧೯ನೆಯ ಶತಮಾನದ ಮಧ್ಯಭಾಗದಲ್ಲೇ ಆಯಿತು. ೧೮೬೧ರಲ್ಲಿ 'ಮಾನವಿ ವೀರಪ್ಪ'ನ 'ಕಥಾಸಾಗರ' ಪ್ರಕಟಗೊಂಡಿತು. ಅವು-ಗಳನ್ನು ಲೇಖಕರೇ 'ಚಮತ್ಕಾರದ ಕಥೆಗಳು' ಎಂದಿದ್ದಾರೆ. ಅದು ಪಂಚತಂತ್ರದ ಕಥಾ-ತಂತ್ರವನ್ನು ಒಳಗೊಂಡಿದ್ದು ಆಡು ಭಾಷೆಯಿಂದ ಕೂಡಿವೆ. ೧೮೯೯ರಲ್ಲಿ ಪ್ರಕಟಗೊಂಡ 'ಮಾಲೂರು ಎಸ್.ಕೃಷ್ಣಯ್ಯ'ನವರ "ಮರ್ಯಾದೆ ರಾಮಣ್ಣನ ಕಥೆಗಳು" ಎಂಬುದು ಈ ಬಗೆಯ ಎರಡನೆಯ ಪ್ರಯತ್ನ ಎನ್ನಬಹುದು.

ಹೀಗೆ ೧೯ನೆಯ ಶತಮಾನದಲ್ಲಿ ಅಪರೂಪವಾಗಿ ಸ್ವತಂತ್ರ ರಚನೆಯ ಪ್ರಯತ್ನ-ಗಳು ನಡೆದವು. ಆದರೆ ಅನುವಾದಗಳ ಸಂಖ್ಯೆ ಹೇರಳವಾಗಿ ಆಯಿತು. ಸಣ್ಣ ಕಥೆಗಳ ಉಗಮ ಮತ್ತು ಬೆಳವಣಿಗೆಗೆ ಇವೆಲ್ಲಾ ಹಿನ್ನೆಲೆಯಾದವು ಎಂಬುದನ್ನು ಮರೆಯುವಂತಿಲ್ಲ.

ಕನ್ನಡದಲ್ಲಿ ದೊರೆತಿರುವ ಮೊತ್ತಮೊದಲ ಕಥಾಸಂಗ್ರಹ 'ವಡ್ಡಾರಾಧನೆ' ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ 'ಸಣ್ಣಕಥೆ' ಎಂಬುದು ಹೊರಗಿನಿಂದ ಆಮದಾಗಿ ಬಂದ ಪ್ರಕಾರ ಕನ್ನಡದಲ್ಲಿ 'ಸಣ್ಣಕಥೆ' ಎಂಬ ಶಬ್ದವೇ ಇಂಗ್ಲಿಷಿನ `short story' ಎಂಬುದರ ನೇರ ಭಾಷಾಂತರವಾಗಿದೆ. 'ಎನ್‌ಸೈಕ್ಲೋಪಿಡಿಯಾ ಆಫ್ ಬ್ರಿಟಾನಿಕಾ"ದಲ್ಲಿ ಹೇಳುವಂತೆ "ಒಂದು ನಿರ್ದಿಷ್ಟ ಕಾಲ ಮತ್ತು ಸ್ಥಳಗಳಲ್ಲಿ ಪಾತ್ರಗಳ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಮೂಲಕ ಭಾವನೆಗಳನ್ನು ತೆರೆದಿಡುವಂತದ್ದು" ಎನ್ನಲಾಗಿದೆ.

ಇಂದಿನ ಜೀವನ ಗಡಿ-ಬಿಡಿಯಿಂದ ಕೂಡಿದೆ. ಅತೀವೇಗಶೀಲವಾದ ಈ ಜೀವನಕ್ರಮದಲ್ಲಿ ಕಾದಂಬರಿಗಳನ್ನು ಓದುವಷ್ಟು ಕಾಲಾವಕಾಶ ಜನರಿಗಿಲ್ಲ. ಮನರಂಜನೆಗೆ ಸಾಹಿತ್ಯಬೇಕು. ಸ್ವಲ್ಪ ವೇಳೆಯಲ್ಲಿ ಓದಿ ಮುಗಿಸಬಲ್ಲ ಈ ಸಣ್ಣ ಕಥೆಗಳು ಪ್ರಚಾರಕ್ಕೆ ಬಂದವು ಎಂದು ಹೇಳಬಹುದು. ಭಾರತದಲ್ಲಿ ಸಣ್ಣಕಥೆಯ ಪ್ರಯೋಗ ಮೊದಲು ನಡೆದದ್ದು ಬಂಗಾಳಿ ಪ್ರಾಂತ್ಯದಲ್ಲಿ. ಅದು ವಿಶ್ವಕವಿ ರವೀಂದ್ರನಾಥ್ ಟಾಗೂರ್‌ರವರಿಂದ ಅವರು ೨೦೦ಕ್ಕೂ ಹೆಚ್ಚು ಕಥೆಗಳನ್ನು ಬರೆದಿದ್ದಾರೆ.

ಕನ್ನಡದಲ್ಲಿ ಸಣ್ಣ ಕಥೆಗಳನ್ನು ಮೊದಲೇ ಬರೆದಿದ್ದು ಪಂಜೆ ಮಂಗೇಶರಾಯರು. 'ಮಾಸ್ತಿ'ಯವರೇ ಹೇಳುವಂತೆ "ಕನ್ನಡದಲ್ಲಿ ಸಣ್ಣಕಥೆಗಳನ್ನು ಮೊದಲು ಬರೆದವರು ಪಂಜೆಯವರೆ ಎಂದು ಕಾಣುತ್ತದೆ" (ಐತಿಹಾಸಿಕ ಕಥಾವಳಿ) ಎಂದಿದ್ದಾರೆ.

ಹೀಗಾಗಿ ಪಂಜೆಯವರ ಕಥೆಗಳಿಗೆ ಐತಿಹಾಸಿಕ ಮಹತ್ವವಿದೆ. ಆದರೂ ಮಹತ್ವದ ಸಣ್ಣಕಥೆಗಳನ್ನು ಬರೆದವರು ಮಾಸ್ತಿಯವರೇ ಎಂಬುದನ್ನು ಅಲ್ಲಗಳೆಯು-ವಂತಿಲ್ಲ. ಏಕೆಂದರೆ ಕನ್ನಡ ಸಣ್ಣಕಥೆಗಳ ವಸ್ತು, ಭಾಷೆ ಪ್ರಬುದ್ಧಗೊಂಡದ್ದು ಮಾಸ್ತಿ-ಯವರಿಂದ ಎಂದು ಹೇಳಬಹುದು.

ಸಣ್ಣಕಥೆ ಒಂದು ರಸಬಿಂದು, ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯ ವೇಗ ಜೂಜಿನ ಕುದುರೆಯ ನಾಗಾಲೋಟ ಅಲ್ಲಿನ ಮಾತುಗಳು ಅತೀ ಸ್ವಲ್ಪ ತೋರಿಸುವ ಸತ್ಯ ಅದ್ಭುತ, ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ ಚಾತುರ್ಯ-ಭಾವದ ಹಿರಿಮೆ ಹೆಚ್ಚು, ವಸ್ತುವಿಗಿಂತ ವಸ್ತುವಿನ ವರ್ಣನೆಗೆ ಹೆಚ್ಚು ಪ್ರಾಧಾನ್ಯವಿದ್ದರೂ ಸ್ವಾಭಾವಿಕತೆಗೆ ಭಂಗ ಬರದಂತೆ ಪರಿಣಾಮ ರಮಣೀಯವಾಗಿರುತ್ತದೆ.

ಸಣ್ಣ ಕಥೆಯ ಅರ್ಥ

ಜನಪ್ರಿಯತೆಯ ದೃಷ್ಟಿಯಿಂದ ನೋಡುವುದಾದರೆ ಕಾದಂಬರಿಯ ನಂತರದ ಸ್ಥಾನ ಸಣ್ಣ ಕಥಾಪ್ರಕಾರಕ್ಕೆ ಲಭಿಸುತ್ತದೆ. 'ಸಣ್ಣಕಥೆ' ಎಂದರೇನು? ಎಂಬುದಕ್ಕೆ ಅನೇಕ ವ್ಯಾಖ್ಯಾನಕಾರರು ಬಗೆ-ಬಗೆಯಾಗಿ ವ್ಯಾಖ್ಯಾನಿಸಿದ್ದಾರೆ.

ಮೊಟ್ಟಮೊದಲು ಸಣ್ಣ ಕಥೆಯ ಬಗ್ಗೆ ವ್ಯಾಖ್ಯೆಯನ್ನು ಕೊಟ್ಟವನು "ಸಣ್ಣಕಥೆಯ ಜನಕನಾದ ಅಮೇರಿಕೆಯ 'ಎಡ್ಗರ್ ಅಲೆನ್ ಪೋ' ಆಗಿದ್ದಾನೆ. ಇವನು ಹೇಳುವಂತೆ "ಸಣ್ಣ ಕಥೆಯೆಂದರೆ ಅರ್ಧತಾಸಿನಿಂದ ಒಂದು ಅಥವಾ ಎರಡು ತಾಸುಗಳಲ್ಲಿ ಓದಿ ಮುಗಿಸಬಹುದಾದ ಗದ್ಯಾತ್ಮಕ ಕಥಾನಕ" ಎಂದಿದ್ದಾನೆ.

ಶ್ರೇಷ್ಠ ಸಣ್ಣಕಥೆಗಾರನಾದ "ಸಾಮರ್‌ಸೆಟ್‌ಮಾಮ್'ನು "ಸಣ್ಣಕಥೆಯೂ ಪ್ರಪ್ರಥಮವಾಗಿ ಕಥೆಯಾಗಿರಬೇಕು. ಪ್ರಾರಂಭ, ಮಧ್ಯ, ಮುಕ್ತಾಯಗಳು ಇರಲೇಬೇಕೆಂದು ಇಚ್ಛಿಸುತ್ತಾನೆ". ಆದರೆ ಮತ್ತೊಂದು ವಿಚಾರಪಂಥದವರಿಗೆ [ಹೆನ್ರಿ ಜೇಮ್ಸ್, ಕ್ಯಾಥರೀನ್, ಮ್ಯಾನ್ಸ್‌ಫೀಲ್ಡ್] ಸಂವಿಧಾನ, ಕಥೆಗಳು, ಸಣ್ಣಕಥೆಗಳಲ್ಲಿ ಮುಖ್ಯವಲ್ಲ. ಮುಖ್ಯವಾದವು-ಗಳೆಂದರೆ ಪಾತ್ರಗಳು ಮತ್ತು ಆವರಣ ಅಥವಾ ವಾತಾವರಣ" ಘಟನೆ, ಪಾತ್ರ, ಆವರಣಗಳ ಪ್ರಾಧಾನ್ಯಕ್ಕನುಸರಿಸಿ ಸಣ್ಣ ಕಥೆಗಳಲ್ಲಿ ವಿಭಾಗಮಾಡಿದ್ದಾರೆ. ಆದ್ದರಿಂದ ಆ ಪಂಥದವರು ಅಂದರೆ ಆಯಾರೀತಿಯ ಕಥೆ ಚೆನ್ನಾಗಿ ಬರೆಯಲು ಬಂದವರು ಮತ್ತೊಂದನ್ನು ಕತೆಯೆಂದು ಒಪ್ಪಿಕೊಳ್ಳಲು ಸಿದ್ದರಿದ್ದಂತೆ ತೋರುವುದಿಲ್ಲ. ಸಣ್ಣಕಥೆ ಎಷ್ಟು ಉದ್ದವಿರಬೇಕು? ಅದರಲ್ಲಿ ಎಷ್ಟು ಪಾತ್ರಗಳಿರಬೇಕು? ಪಾತ್ರಗಳ ಎಷ್ಟು ಮುಖಗಳನ್ನು ಚಿತ್ರಿಸಬೇಕು? ಘಟನೆಗಳ ಅನುಕ್ರಮ ಎಂತು? ಎಂಬ ಅನೇಕ ಪ್ರಶ್ನೆಗಳಿವೆ. ಸಣ್ಣಕಥೆ ಇನ್ನೂ ಬೆಳೆಯುತ್ತಿರುವ ಸಾಹಿತ್ಯರೂಪವಾದ್ದರಿಂದ ಕೊನೆಯದೆನ್ನಬಹುದಾದ ವ್ಯಾಖ್ಯೆಯನ್ನು ಕೊಡುವುದು ಸಾಹಸದ ಮಾತಾದೀತು.

'ಎಡ್ಗರ ಅಲೆನ್ ಪೋ ಸಣ್ಣ ಕಥೆಗಳನ್ನು ಅವನೇ "ವೃತ್ತಪತ್ರಿಕೆಗಳ ಕೂಸು"[೨] ಎಂದು ಕರೆದಿದ್ದಾನೆ. ವೃತ್ತಪತ್ರಿಕೆಗಳು ಒದಗಿಸಿಕೊಟ್ಟಷ್ಟು ಸ್ಥಳದಲ್ಲಿ ಕಥೆ ಮುಗಿಯಬೇಕಾದ ಕಾರಣ ಅದು ಎಷ್ಟು ಪುಟಗಳಷ್ಟಿರಬೇಕು ಎನ್ನುವುದು ಮೊದಲೇ

೨. ಸಾಹಿತ್ಯದ ಪ್ರಕಾರಗಳು - ಪಿ.ವಿ.ಶಾಸ್ತ್ರಿ, ಪು. ೧೨

ನಿಶ್ಚಯಿಸಿದಂತಾಗುತ್ತಿತ್ತು. 'ಸಾಮರ್‌ಸೆಟ್ ಮೂಲತಃ ಮತ್ತೊಂದು ಕಡೆ ಹೀಗೆ ಹೇಳುತ್ತಾನೆ. "ಕೊತಮೆಟ್ಟಿನಲ್ಲಿ ಓದಿ ಮುಗಿಸಬಹುದಾದ ಏಕೈಕ ಕಲಾಪರಿಣಾಮವುಳ್ಳ ಲಿಖಿತ ಸಾಹಿತ್ಯವೇ ಸಣ್ಣಕಥೆ". ಕೊತಮಟ್ಟಿನಲ್ಲಿ ಎನ್ನುವುದು ಮುಖ್ಯವಿಷಯ. ಸಣ್ಣ ಕಥೆ ಆಕಾಶದಲ್ಲಿ ಸಣ್ಣದಾಗಿರಬೇಕೆಂಬ ಅಭಿಪ್ರಾಯವನ್ನು ಇರ್ವಿಂಗ್ ಮಹಾಶಯ ಬಹಳ ಚೆನ್ನಾಗಿ ಹೇಳಿದ್ದಾನೆ. "ನಾನು ಪತ್ರಿಕೆಗಳಿಗೆ ಕಳಿಸಿದ ಕಥೆಗಳು ಕೆಟ್ಟವಾಗಿರಬಹುದು. ಆದರೆ ಕನಿಷ್ಟಪಕ್ಷ ಸಣ್ಣವಿವೆ ಎನ್ನುವುದು ಸಮಾಧಾನದ ಸಂಗತಿ. ಸಮಾಧಾನವೇಕೆಂದರೆ ಒಂದು ವಿಷಯವನ್ನು ಬಹಳ ಹೊತ್ತು ಹೇಳಿ ಬೇಸರ ತರಿಸುವುದಿಲ್ಲ" ಎನ್ನುತ್ತಾನೆ. ಸಣ್ಣಕಥೆ ಓದುಗರಿಗೆ ಬೇಸರ ಬಂದಿತೆಂದು ಅರಿವಾಗುವ ಮೊದಲೆ ಓದಿ ಮುಗಿಸುವಷ್ಟು ಚಿಕ್ಕದಾಗಿರುವುದರಿಂದಲೇ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ.

"ಸಣ್ಣ ಕಥೆಯೆಂದರೆ ಶಕ್ಯವಿದ್ದಷ್ಟು ಕಡಿಮೆ ಪಾತ್ರಗಳ ನೆರವಿನಿಂದ, ಒಳ್ಳೇ ಪರಿಣಾಮಕಾರಿಯಾಗುವಂತೆ, ತೀರ ಸ್ವಲ್ಪ ಪ್ರಸಂಗಗಳಿಂದ ಒಂದು ಸಂಗತಿಯನ್ನು ಹೇಳುವುದು" ಎನ್ನುತ್ತಾರೆ "ಮಿರ್ಜಿ ಅಣ್ಣಾರಾಯ".

ಸಣ್ಣಕಥೆ ಸಣ್ಣದಾಗಿರುವುದರಿಂದ ಆದಷ್ಟು ಕಡಿಮೆ ಘಟನೆಗಳ ಮತ್ತು ಪಾತ್ರಗಳ ಸಹಾಯದಿಂದ ಜೀವನದ ಒಂದು ಭಾಗ ಮತ್ತು ಒಂದು ಒಡೆದು ತೋರುವ ಜೀವನದಂಶವನ್ನು ಮನಂಬುಗುವಂತೆ ಚಿತ್ರಿಸುವುದು ಸಣ್ಣ ಕಥೆಯ ಉದ್ದೇಶ. 'ಕರಿಮೋಡದ ಮೇಲೆ ಬರೆದ ಸೆಳೆಮಿಂಚಿನಂತೆ ಸಣ್ಣ ಕಥೆ ಕಲಾಪ್ರಭಾವಿಯಾಗಿರಬೇಕು. ಪಾತ್ರ ಘಟನೆ, ಅವರ ಶಬ್ದ, ಸಂಭಾಷಣೆ ಈ ಎಲ್ಲವುಗಳಲ್ಲೂ ಇಂದು ಶ್ರೀಮಂತವಾದ (ಆದರೆ ಒಂದು ಕಾಲದಲ್ಲಿ ಬಡವಾಗಿದ್ದು) ವ್ಯಾಪರಿ ಮನೋವೃತ್ತಿ ಸಣ್ಣ ಕಥೆಗಾರನಿಗಿರಬೇಕು.

'ಹ್ಯಾಮಿಲ್ಟನ' ಎಂಬುವವನು "ಹೇಳಲೇಬೇಕಾದುದಕ್ಕೆ ಲೋಪಬರದಂತೆ ಆದಷ್ಟು ಸಂಕ್ಷೇಪ ಸಾಧನದಿಂದ ಏಕೈಕ ಕಲಾಪರಿಣಾಮವನ್ನು ಸಾಧಿಸುವುದೇ ಸಣ್ಣ ಕಥೆಯ ಹೆಗ್ಗುರಿ" ಎಂದಿದ್ದಾನೆ. "ಜೀವನದಲ್ಲಿ ಕಲೆಯಿದೆ, ಕಲಾ ವಿಭಾಗವಿದೆ, ಆದರೆ ಅಲ್ಲಿರುವುದೆಲ್ಲವೂ ಕಲೆಯಲ್ಲ. ಕಲಾವಿದನಾದ ಕಥೆಗಾರನು ಅಲ್ಲಿರುವ ಕಲಾವಿಭಾಗವನ್ನು ಗುರುತಿಸಿ ಸ್ವೀಕರಿಸುತ್ತಾನೆ..... ಕ್ವಚಿತ್ತಾಗಿ ಕಾಣಬಹುದಾದ ರಸನಿಮಿಷಗಳನ್ನು ಮಾತ್ರ ಹಿಡಿದು ಸಣ್ಣಕಥೆಗಳನ್ನು ರಚಿಸಬೇಕಾಗುತ್ತದೆ." ಸಣ್ಣ ಕಥೆಯಲ್ಲಿ ಜೀವನದ ಅಥವಾ ವ್ಯಕ್ತಿಯ ಒಂದು ಮಹತ್ವದ ಅಂಶವನ್ನು ಪರಿಣಾಮಕಾರಿ ರೀತಿಯಲ್ಲಿ ಚಿತ್ರಿಸಲಾಗುತ್ತದೆ. ಕಥೆ ಹೇಳುವುದರಲ್ಲಿ ಎರಡು ದಾರಿಯಿದೆ.

- ಒಂದು ದಾರಿ ಜನತೆಯಲ್ಲಿ ಬೆಳೆದಿರುವುದು.
- ಇನ್ನೊಂದು ದಾರಿ ಸಾಹಿತ್ಯದಲ್ಲಿ ಬೆಳೆದಿರುವುದು.

ಮೊದಲನೆಯದರಲ್ಲಿ ಕಥೆಯ ಸಂಗತಿಗಳು ತಾವಾಗೆ ನಡೆದು ಯಾವುದೋ ಒಂದು ರೀತಿಯಲ್ಲಿ ವ್ಯಕ್ತವಾಗುತ್ತ ಬರುತ್ತದೆ.

ಎರಡನೆಯದರಲ್ಲಿ ಕಥೆಗಾರನು ಪ್ರಯತ್ನಪೂರ್ವಕವಾಗಿ ಅವಕ್ಕೆ ಸೊಗಸು ಕೊಡುವುದು ಕಾಣುತ್ತಿದೆ. ಜೀವನದಲ್ಲಿ ಘಟನೆಗಳು ನಡೆಯುವಂತೆ ಹುಟ್ಟು, ಬೆಳವಣಿಗೆಗೆ, ಸಾವುಗಳ ಅನುಕ್ರಮದಲ್ಲಿ ಕಥೆಯನ್ನು ಸಾಗಿಸಿಕೊಂಡು ಹೋಗುವುದು ಹಳೆಯ ತೆರನಾದ ಸಂವಿಧಾನದ ಕೌಶಲ್ಯವನ್ನು ತೋರಿಸಿ ಹೊಂದಿಕೆಯಾದ ಅಂಶಗಳನ್ನೇ, ಭಾವಸ್ಪಂದಿಯಾದ ಅಂಶಗಳನ್ನೇ ಹೆಕ್ಕಿ ಒಂದಕ್ಕೆ ಮತ್ತೊಂದು 'ಖೋ' ಕೊಡುವ ವಿಧಾನದಲ್ಲಿ ಹೇಳುವುದು ಎರಡನೆಯ ವಿಧ.

ಮೊದಲ ರೀತಿಯನ್ನು ಕುರಿತು "ಸಾಮರ್‌ಸೆಟ್ ಮಾಮ್" ಹೀಗೆ ವಿವರಣೆ ಕೊಡುತ್ತಾನೆ. ಹಿಂದೆ ಸಣ್ಣ ಕಥೆಯನ್ನು ಸಾದಾ ರೀತಿಯಲ್ಲಿ ಬರೆಯಲಾಗುತ್ತಿತ್ತು, ಸಣ್ಣ ಕಥೆಯಲ್ಲಿ ಅನುಕ್ರಮವಾಗಿ

೧. ಚೌಕಟ್ಟು

೨. ಪಾತ್ರಗಳ ಪರಿಚಯ

೩. ಆ ಪಾತ್ರಗಳೇನು ಮಾಡಿದವು ಮತ್ತು ಅವುಗಳಿಗೆ ಏನು ಮಾಡಲ್ಪಟ್ಟಿತು?

೪. ಪರಿಣಾಮವೇನಾಯಿತು?

ಇಷ್ಟು ಯಾಂತ್ರಿಕವಾಗಿ ಕಥೆ ಬರೆಯಲಾಗುತ್ತಿತ್ತು. ಸಂವಿಧಾನದ ತೊಂದರೆ-ಯಿಲ್ಲದ ಕಾರಣ ಕಥೆ ಸುಲಭಸಾಧ್ಯವಾಯಿತು.

ಸಣ್ಣ ಕಥೆ ಬರೆಯುವುದು ಟೆನಿಸ್ ಆಟ ಆಡಿದಂತೆ. ಬಂದ ಚೆಂಡನ್ನು ಯಾವ ಯಾವ ರೀತಿಯಲ್ಲಿ ಹೊಡೆಯಬೇಕೆನ್ನುವುದು ನುರಿತ ಆಟಗಾರನ ಅನುಭವದ ಗತ್ತುಗಳನ್ನು ಅವಲಂಬಿಸಿದರೂ ಅವನ ಆಟವನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವನ ರೀತಿಗಳನ್ನು ಕಲಿಯುವುದು ಲಾಭದಾಯಕವು" ಎಂಬ 'ಪೆಟಿಸನ್'ನ ಈ ಹೇಳಿಕೆಯ ಪ್ರಕಾರ ಸಣ್ಣ ಕಥೆಯೆನ್ನುವುದು ಕೆಲವೊಂದು ದೃಷ್ಟಿಯಲ್ಲಿ ಕೈ ಕಸುಬು ಕೆಲವೊಂದು ದೃಷ್ಟಿಯಲ್ಲಿ ಕಲೆ (Art), ಆಗಿದೆ.

ಕಡಿಮೆ ಸ್ಥಳ, ಕಡಿಮೆ ವಸ್ತು, ಕಡಿಮೆ ತಂತ್ರ, ಆದರೆ ಹೆಚ್ಚು ಸಾಧ್ಯವಾದಷ್ಟೂ ಹೆಚ್ಚು ತೀಕ್ಷ್ಣವಾದ ಕಲಾ ಪರಿಣಾಮ ಉಂಟಾಗಬೇಕು. ದುಃಖವಾದರೆ ಕಾಲುಗಂಟು 'ಕಳಕ್' ಎಂದು ಉಳುಕಿದಾಗ ಆಗುವ ನೋವಿನಂತೆ ಉಗುರೆಜ್ಜೆಯಲ್ಲಿ ಸೂಜಿ ಚುಚ್ಚಿದಾಗ ಆಗುವ ವೇದನೆಯಂತಿರಬೇಕು. ಸಣ್ಣಕಥೆಯ ಅಂತ್ಯ ಮೋಡದಿಂದ ಸಿಡಿದು ನೆಲದೊಲಗಿಳಿದು ಹೋಗುವ ಸಿಡಿಲಿನಂತಿರಬೇಕು. "ಕಥೆಯು ಚಿಕ್ಕದಿರಬೇಕು, ಪಾತ್ರಗಳು ಕಡಿಮೆಯಿರಬೇಕು. ಹಾಗಾದರೆ ಮಾತ್ರ ಅವುಗಳಿಗೆ ನ್ಯಾಯ ಬರಲು ಸಾಧ್ಯ. ಸಣ್ಣ

ಕಥೆಗೆ ಒಂದು ಸುಸ್ಪಷ್ಟವಾದ ಐಕ್ಯಬೇಕು. ಆ ಐಕ್ಯ ಯಾಂತ್ರಿಕವಾಗಿರಕೂಡದು. ಅದು ಕ್ರಿಯೈಕ್ಯ ಉದ್ದೇಶೈಕ್ಯ, ಕಲಾಪರಿಣಾಮೈಕ್ಯ". ಸಂಕೀರ್ಣವಾದ ಘಟನೆಯನ್ನಾಗಲಿ, ಪಾತ್ರವನ್ನಾಗಲಿ ಪೂರ್ಣವಾಗಿ ಚಿತ್ರಿಸಲು ಸ್ಥಳ ಬಹಳ ಬೇಕಾಗುತ್ತದೆ. ಆಗ ಸಂಕ್ಷೇಪ ಮಾಡತೊಡಗಿದರೆ 'ಸಣ್ಣ ಕಾದಂಬರಿ'ಯಾಗುತ್ತದೆ. ಮಹಾಬಂಡೆಯಲ್ಲಿ ಗೊಮ್ಮಟ್ಟೇಶ್ವರ–ನನ್ನು ಕೆತ್ತುವುದು ಒಂದು ಕಲೆ, ಎರಡು ಊರುಗಳ ಮಧ್ಯದ 'ರೋಪ್‌ವೇ (Rope way) ಅದು, ಸಣ್ಣ ಕಥೆ, ಎರಡು ಊರುಗಳ ಮಧ್ಯದ 'ರೇಲ್‌ವೆ' (Railway) ಅದು ಕಾದಂಬರಿ. ಸಣ್ಣ ಕಥೆಯಲ್ಲಿ ಸಂಕ್ಷಿಪ್ತತೆ ಸದ್ಗುಣ, "ಕಲಾ ಪರಿಣಾಮಕ್ಕೆ ಸಹಾಯಕಾರಿ–ಯಲ್ಲದ್ದನ್ನು ಕಿತ್ತು ಬೀಸಾಡಬೇಕು.......... ಒಂದನೇ ಪ್ರಕರಣದಲ್ಲಿ ಒಂದು ಬಂದೂಕು ಗೋಡೆಗೆ ನೇತು ಹಾಕಿದೆಯೆಂದಿದ್ದಾರೆ. ಎರಡನೆಯ ಅಥವಾ ಮೂರನೇ ಪ್ರಕರಣದಲ್ಲಿ ಅದನ್ನು ಮರೆಯದೇ ಕಿತ್ತುಹಾಕಿ ಬಿಡಬೇಕು ಎನ್ನುತ್ತಾನೆ".[೩]

ನಿಜವಾದ ಸಣ್ಣಕಥೆಯೂ ಕಥೆಯಿಂದ ಬೇರೆಯಷ್ಟೆ ಅಲ್ಲ, ಕೇವಲ ಸಣ್ಣದಾದ ಕಥೆಗಿಂತ ದೊಡ್ಡದು... ಸಣ್ಣಕತೆಯೂ ಒಂದೇ ಪಾತ್ರ, ಒಂದೇ ಘಟನೆ, ಒಂದೇ ಭಾವನೆ ಅಥವಾ ಒಂದೇ ಪ್ರಸಂಗದಿಂದ ಉದ್ಭೂತವಾದ ಅನೇಕ ಭಾವನೆಗಳನ್ನು ಕುರಿತು ಹೇಳಲ್ಪಟ್ಟಿರುತ್ತದೆ"ಯೆಂದು "ಮ್ಯಾಥೊಸ್" ಅಭಿಪ್ರಾಯಪಡುತ್ತಾರೆ. ಸಣ್ಣಕಥೆ, ಇದು ಸಾವು ವ್ಯಕ್ತಿಯ ಜೀವನದಲ್ಲಿ ಒಂದೇ ಘಟನೆ, ಆದರೆ ಜೀವನಕ್ಕಿಂತಲೂ ದೊಡ್ಡದು ಇದೇ ಸಣ್ಣ ಕಥೆ.

೧) ಕನ್ನಡದಲ್ಲಿ ಸಣ್ಣಕಥೆ ಬೆಳೆದು ಬಂದ ಬಗೆ:

ಕನ್ನಡದಲ್ಲಿ ಕಥೆ ಎಂಬುದಿತ್ತು, ಸಣ್ಣಕಥೆ (Short story) ಬಂದದ್ದು ಇಂಗ್ಲಿಷ್‌ನಿಂದ. ಈ ಪದವನ್ನು ಮೊದಲೇ ಬಳಸಿದವರು 'ಮಾಸ್ತಿ ವೆಂಕಟೇಶ್ ಅಯ್ಯಂಗಾರ್'ರವರು (ಸಣ್ಣಕಥೆ) ಇದನ್ನು ಪಂಜೆ ಮಂಗೇಶರಾಯರು "ಚಿಕ್ಕ ಕಥೆ" ಎಂದು, "ಕೆರೂರು ವಾಸುದೇವಾಚಾರ್ಯರು" "ಸಂಪೂರ್ಣ ಕಥೆ" ಎಂಬ ಹೆಸರಿನಿಂದ ಕರೆದಿರುವುದು ಉಂಟು. ಸಣ್ಣ ಕಥೆಗಳನ್ನು ಬರೆದ ಕನ್ನಡ ಕಥೆಗಾರರಲ್ಲಿ ಕೆಲವರು ಇಂಗ್ಲಿಷ್‌ನಿಂದ ಪ್ರಭಾವಿತರಾದರೆ, ಮತ್ತೆ ಕೆಲವರು ಇಂಗ್ಲಿಷ್ ಪ್ರಭಾವದಿಂದ ರಚಿತವಾದ ಬಂಗಾಳಿ, ಮರಾಠಿ ಕಥೆಗಳ ನೇರ ಪ್ರಭಾವಕ್ಕೆ ಒಳಗಾದರು.

ಇಪ್ಪತ್ತನೆಯ ಶತಮಾನದ ಆರಂಭದ ದಶಕದ ಕಥೆಗಾರರು ಇಂಗ್ಲಿಷ್ ಕಥೆಗಳಿಂದ ಪ್ರಭಾವಿತರಾಗಿ ಅವುಗಳನ್ನು ಅನುವಾದ/ರೂಪಾಂತರ ಮಾಡಿದ್ದಾರೆ. 'ಎಡ್ಗರ ಅಲೆನ್ ಪೋ' ನ ಕಥೆಗಳ ವಸ್ತು ರಚನಾ ಕ್ರಮದಿಂದ ಪ್ರೇರಣೆಯನ್ನು ಪಡೆದಿದ್ದಾರೆ. ಕನ್ನಡದಲ್ಲಿ 'ಸಣ್ಣಕಥೆ' ಎನ್ನಬಹುದಾದ ಕಥೆಗಳನ್ನು ಮೊದಲೆ ಬರೆದವರು ಪಂಜೆ ಮಂಗೇಶರಾಯರು.

---

೩. ಸಾಹಿತ್ಯದ ಪ್ರಕಾರಗಳು, ಪಿ.ವಿ.ಶಾಸ್ತ್ರಿ, ಪು. ೧೫,

"ಕ್ರಿ.ಶ.೧೯೦೦ರಲ್ಲಿ ಪಂಜೆ ಮಂಗೇಶರಾಯರು 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟಿಸಿದ ಭಾರತ ಶ್ರವಣ, ಕಮಲಾಪುರದ ಹೊಟ್ಲಿನಲ್ಲಿ, ನನ್ನ ಚಿಕ್ಕತಾಯಿ, ನನ್ನ ಚಿಕ್ಕ ತಂದೆಯ ಉಯಿಲ್, ಕತೆಗಳ ಮೂಲಕ ಆಧುನಿಕ ಸಣ್ಣಕಥೆಯ ಚರಿತ್ರೆ ಪ್ರಾರಂಭವಾಯಿತೆನ್ನಬಹುದು. ಕನ್ನಡ ಕಥೆಗಳಿಗೆ ಸಾಹಿತ್ಯ ರೂಪವನ್ನು ಕೊಟ್ಟ ಮೊದಲಿಗರು ಪಂಜೆ ಮಂಗೇಶರಾಯರು. ಕನ್ನಡದ ಮೊತ್ತಮೊದಲ ಸಣ್ಣ ಕಥೆಗಾರರೆನಿಸಿಕೊಂಡ ಪಂಜೆಯವರು ಆ ಪ್ರಕಾರಕ್ಕೆ ಒಂದು ಕಲಾ ರೂಪವನ್ನು ನೀಡುವ ಪ್ರಯತ್ನವನ್ನು ಮಾಡಿದರು. ವಿಶೇಷವಾದ ಮನರಂಜನೆಯ ಅಂಶಗಳ ಕಡೆ ಹೊರಳದೆ, ಹಾಸ್ಯಪ್ರಜ್ಞೆಯುಳ್ಳ ಸಾಮಾಜಿಕ ಮತ್ತು ಐತಿಹಾಸಿಕ ಕಥೆಗಳನ್ನು ಅವರು ಬರೆದರು. ಅಂದಿನ ಕಾಲದಲ್ಲಿ ಕಾದಂಬರಿಗಳ ಬಾಹುಳ್ಯವಿದ್ದರಿಂದ, ಅವರ ಕಥೆಗಳು ಹೆಚ್ಚು ಪ್ರಭಾವವನ್ನು ಬೀರಲಿಲ್ಲ "ಪಂಜೆಯವರ ಕಥೆಗಳು ಸಾಮಾಜಿಕ ಮತ್ತು ಚಾರಿತ್ರಿಕ ವಸ್ತುಗಳನ್ನೊಳಗೊಂಡಿವೆ. ಚಾರಿತ್ರಿಕ ಕಥೆಗಳಲ್ಲಿ ಆದರ್ಶಮಯತೆ ಮುಖ್ಯ-ವಾಗಿದೆ..... ಒಟ್ಟಿನಲ್ಲಿ ಅವರ ಎಲ್ಲ ಕಥೆಗಳಲ್ಲಿಯೂ ಹೊಸಗನ್ನಡ ಗದ್ಯದ ತೇಜಸ್ಸು ತುಂಬಿಕೊಳ್ಳುತ್ತಿರುವುದು ಕಾಣುತ್ತದೆ" ಎಂದು ಜಿ.ಹೆಚ್.ನಾಯಕ್ ಹೇಳಿದ್ದಾರೆ.

ಇದೇ ಅವಧಿಯಲ್ಲಿ ಎಂ.ಎನ್.ಕಾಮತ್, ಕೆರೂರು ವಾಸುದೇವಾಚಾರ್ಯ, ಮಾಸ್ತಿ ಮುಂತಾದವರು ಸಣ್ಣಕಥೆಗಳನ್ನು ಬರೆದರು. ಕಾಮತ್‌ರ ಕಥೆಗಳು ಸಂಕಲನದ ರೂಪದಲ್ಲಿ ಪ್ರಕಟಗೊಳ್ಳದೆ ಪತ್ರಿಕೆಗಳಲ್ಲಿ ಚದುರಿಹೋದವು. ಕೆರೂರರು ಸಾಮಾಜಿಕ, ಐತಿಹಾಸಿಕ ಹಾಗೂ ಪತ್ತೇದಾರಿ ಕಥೆಗಳನ್ನು ಬರೆದರು.

೧) ನವೋದಯ ಕಾಲದಲ್ಲಿ ಬೆಳೆದು ಬಂದ ಕಥಾಸಾಹಿತ್ಯ:

"ಚಾರಿತ್ರಿಕವಾಗಿ ನೋಡಿದರೆ ಕನ್ನಡದಲ್ಲಿ ಸಣ್ಣಕಥೆಗಳನ್ನು ಬರೆದವರಲ್ಲಿ 'ಮಾಸ್ತಿ'ಯವರೇ ಮೊದಲಿಗರೆನ್ನಲಾಗದಿದ್ದರೂ ಅವರು "ಕನ್ನಡದ ಮೊದಲ ಮಹತ್ವದ ಸಣ್ಣ ಕಥೆಗಾರ" ಎಂಬುದು ನಿರ್ವಿವಾದದ ಸಂಗತಿಯಾಗಿದೆ'[೪] ಎಂಬ ಹೇಳಿಕೆಯನ್ನು ಒಪ್ಪುವುದರೊಂದಿಗೆ ಮಾಸ್ತಿಯವರು ಸಣ್ಣಕಥೆಯ ಪರಂಪರೆಯೊಂದನ್ನು ರೂಪಿಸಿದವ-ರೆಂದು ಹೇಳಬಹುದು. ಅವರಂತೆ ಸಣ್ಣಕತೆಯನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮ-ವನ್ನಾಗಿ ಮಾಡಿಕೊಂಡವರು ಬಹಳ ವಿರಳ. ಮೇಲುನೋಟಕ್ಕೆ ಅವರ ಕಥೆಗಳಲ್ಲಿ ಸಾಂಪ್ರದಾಯಿಕ ಪ್ರಜ್ಞೆ ಕಂಡುಬಂದರೂ, ಅಲ್ಲಿ ಭಾರತೀಯ ಸಂಸ್ಕೃತಿ ಮತ್ತು ಮಾನವೀಯ ಸಂಬಂಧಗಳು ಹೆಣೆದುಕೊಂಡಿರುತ್ತವೆ. ಹೀಗಾಗಿ ಅವರ ಕಥೆಗಳಲ್ಲಿ ಧಾರ್ಮಿಕ ಆಶಯ, ಮಾನವೀಯ ಮೌಲ್ಯ, ಕಲಾತ್ಮಕ ಚೌಕಟ್ಟು ಇದೆ. ಒಟ್ಟಾರೆ ಮಾಸ್ತಿಯವರ ಕಥೆಗಳು ಸಹಜತೆ, ಸರಳತೆ ಮತ್ತು ಮಾನವೀಯ ಅಂತಃಕರಣದಿಂದ ಕೂಡಿದವುಗಳಾಗಿವೆ. ಸುಮಾರು ೧೦೦ಕ್ಕೂ ಹೆಚ್ಚು ಕಥೆಗಳನ್ನು ಬರೆದಿರುವ ಇವರ ಪ್ರಾತಿನಿಧಿಕ ಕಥೆಗಳಿವು.

೪. ಕನ್ನಡ ಸಣ್ಣಕಥೆಗಳು, ಜಿ.ಹೆಚ್.ನಾಯಕ್, ಪು. 6.

- ಮೊಸರಿನ ಮಂಗಮ್ಮ
- ನಿಜಗಲ್ಲಿನ ರಾಣಿ
- ಮಸುಮತ್ತಿ
- ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜ್ಯ ವೃಕ್ಷಗಳು
- ಜ್ಯೋಗ್ಯೋರ ಅಂಜಪ್ಪನ ಕೋಳಿಕಥೆ
- ವೆಂಕಟಶಾಮಿಯ ಪ್ರಣಯ ಇತ್ಯಾದಿ.

ಮಾಸ್ತಿಯವರ ಪರಂಪರೆಯಲ್ಲಿಯೇ ಸಣ್ಣಕಥೆಗಳನ್ನು ಬರೆದವರು ಎ.ಆರ್.ಕೃಷ್ಣ-ಶಾಸ್ತ್ರೀ, ಆನಂದ (ಅಜ್ಜಂಪುರ ಸೀತಾರಾಮ), ಕುವೆಂಪು, ಕಡೆಂಗೋಡ್ಲು ಶಂಕರಭಟ್ಟ, ಆನಂದಕಂದ, ಕೃಷ್ಣಮೂರ್ತಿ ಕಲ್ಲೂರ ಮುಂತಾದವರು. ಇವರಲ್ಲಿ ಆನಂದರವರನ್ನು ಹೊರತುಪಡಿಸಿದರೆ ಉಳಿದವರು ಸಣ್ಣಕಥೆಯನ್ನು ಅಭಿವ್ಯಕ್ತಿಯ ಮುಖ್ಯ ಮಾಧ್ಯಮ-ವನ್ನಾಗಿ ಮಾಡಿಕೊಂಡವರಲ್ಲ. "ಎ.ಆರ್.ಕೃಷ್ಣಶಾಸ್ತ್ರಿ (ಶ್ರೀಪತಿ)ಯವರು ಮಾಸ್ತಿಯವರಿಗಿಂತ ವಯಸ್ಸಿನಿಂದ ಹಿರಿಯರಾದರೂ ಅವರು ಸಣ್ಣಕಥೆಗಳನ್ನು ಬರೆಯ ತೊಡಗಿದ್ದು ತಡವಾಗಿ, ಸಾಹಿತ್ಯಿಕ ದೃಷ್ಟಿಯಿಂದಲೂ ಮಾಸ್ತಿಯವರ ಸಣ್ಣಕಥೆಗಳಿಗಿರುವ ಮಹತ್ವ ಅವರ ಸಣ್ಣ ಕಥೆಗಳಿಗಿಲ್ಲ" ಎಂದು ಜಿ.ಹೆಚ್.ನಾಯಕ ಹೇಳಿದ್ದಾರೆ.[೫]

ಮಾಸ್ತಿಯವರ ತಲೆಮಾರಿನ ಮುಖ್ಯ ಕತೆಗಾರರೆಂದರೆ ಆನಂದ. ಅವರು ಹೆಚ್ಚು ಜನಪ್ರಿಯ ಕಥೆಗಳನ್ನು ಬರೆದವರು. ಅವುಗಳಲ್ಲಿ ಬಹುಪಾಲು ಕೌಟುಂಬಿಕ ಚೌಕಟ್ಟುಳ್ಳವು. ಗಂಡ-ಹೆಂಡತಿ ಪ್ರೇಮಪ್ರಣಯ, ಸರಸ-ವಿರಸ ಮುಂತಾದ ನೆಲೆಯಲ್ಲಿಯೇ ರೂಪು-ಗೊಳ್ಳುವ ಇವರ ಕಥೆಗಳು ವಸ್ತುವೈವಿಧ್ಯಕ್ಕಿಂತ ಪರಿಮಿತಿಯುಳ್ಳವು. ಹೀಗಾಗಿ "ಮಾಸ್ತಿ-ಯವರಿಗಿಂತ ಸಾಂಸ್ಕೃತಿಕ ಕಾಳಜಿಯಾಗಲಿ, ಧಾರ್ಮಿಕ ಧೋರಣೆಯಾಗಲಿ, ಇವರಲ್ಲಿ ಇಲ್ಲ. ಬದುಕನ್ನು ಕುರಿತಂತೆ ಇನ್ನಾವುದೇ ವಿಧವಾದ ಗಂಭೀರ ಕಾಳಜಿಯೂ ಇವರಲ್ಲಿ ಇಲ್ಲವಾದ್ದರಿಂದ ಅನುಭವಕ್ಕೆ ಅಂತರ್ಮುಖತೆಯ ಆಯಾಮ ಸೇರಿಕೊಳ್ಳದೆ ಕಥೆಗಳು ರಸಿಕತೆಯಿಂದ ಭಾವುಕತೆಯಿಂದ ಬೀಗುತ್ತವೆ".

ಇಂಥ ಗ್ರಹಿಕೆಗಳ ಮಧ್ಯೆ ಕೂಡ ಅಪಾರವಾದ ಮನ್ನಣೆಯನ್ನು ಗಳಿಸಿದ ಕಥೆ "ನಾ ಕೊಂದ ಹುಡುಗಿ" ನವ್ಯೋದಯ ಸಣ್ಣಕಥೆಗಳಲ್ಲೆಯೇ ಅತ್ಯಂತ ಮಹತ್ವದ ಕಥೆ ಎನಿಸಿದೆ. ಈ ಕಥೆಯನ್ನು ಬರೆಯುವಲ್ಲಿ ಆನಂದರು ತಮ್ಮೆಲ್ಲಾ ಕಥನ ಶಕ್ತಿಯನ್ನು ಧಾರೆ ಎರೆದಿದ್ದಾರೆ ಎನಿಸುತ್ತದೆ. ಅವರ ಇತರ ಕಥೆಗಳೆಂದರೆ

---

೫. ಕನ್ನಡ ಸಣ್ಣಕಥೆಗಳು, ಜಿ.ಹೆಚ್.ನಾಯಕ್, ಪು. 7.

- ಭವತಿ ಭಿಕ್ಷಾಂದೇಹಿ
- ಸರಸಿಯ ಗೊಂಬೆ
- ಹೆಂಡತಿಯ ಕಾಗದ
- ರಾಧೆಯ ಕ್ಷಮೆ ಇತ್ಯಾದಿ

ಆನಂತರದಲ್ಲಿ ರಂ.ಶ್ರೀ.ಮುಗಳಿ, ಗೊರೂರು, ಪು.ತಿ.ನ., ಕಾರಂತ, ಶ್ರೀರಂಗ ಮೊದಲಾದವರು ಕುತೂಹಲಕ್ಕಾಗಿ ಈ ಮಾಧ್ಯಮದಲ್ಲಿ ಪ್ರಯೋಗ ನಡೆಸಿದರು. ಇವರಿಗಿಂತ ಭಿನ್ನವಾದ ಮಾರ್ಗದಲ್ಲಿ ಕಥೆಗಳನ್ನು ಬರೆದವರು 'ಅಶ್ವತ್ಥ', ಮಾಸ್ತಿಯವರ ಬಳಿಕ ಹೆಚ್ಚು ಕಥೆಗಳನ್ನು ಬರೆದವರು ಅವರೇ. ಆ ಮೂಲಕ ನವೋದಯ ಕಥೆಗಾರರಲ್ಲಿ ಕಾಣಬರುವ ಸಾಂಪ್ರದಾಯಿಕ ದೃಷ್ಟಿಯನ್ನು ಮೀರುವ ಪ್ರಯತ್ನವನ್ನು ಅವರು ಮಾಡಿದರು. "ಯಾವುದೇ ವಿಧವಾದ ಮಡಿವಂತಿಕೆಯ ಸಂಕೋಚವಿಲ್ಲದೆ ಬದುಕಿನ ಎಲ್ಲಾ ಬಗೆಯ ಅನುಭವಗಳಿಗೆ ಮುಕ್ತವಾಗಿ ತೆರೆದುಕೊಂಡಿರುವ ಮನಃಸ್ಥಿತಿ ಇವರದು. ಜಿ.ಹೆಚ್.ನಾಯಕ್ ರವರು ಹೇಳುವಂತೆ "ಮಾಸ್ತಿ, ಆನಂದರ ಮಟ್ಟದ ಕಲಾತ್ಮಕತೆ ಆಶ್ವತ್ಥರ ಕಥೆಗಳಲಿಲ್ಲ. ಆದರೆ ಅಶ್ವತ್ಥರ ಮಟ್ಟದ ನಮ್ಯಗುಣ (Flexibility) ಬಹುಶಃ ನವೋದಯ ಸಣ್ಣಕತೆಗಾರರಲ್ಲಿ ಯಾರಲ್ಲಿಯೂ ಇಲ್ಲ" ಎಂದಿದ್ದಾರೆ.

ಮಾಸ್ತಿಯವರ ಸಮಕಾಲೀನವರಲ್ಲಿ ಒಬ್ಬರಾದ ಕೊರಡ್ಕಲ್ ಶ್ರೀನಿವಾಸರಾವ್‌ರವರು ದುರ್ಬಲ ಹಾಗೂ ಶೋಷಿತ ವರ್ಗಗಳ ಬದುಕನ್ನು ಆಧರಿಸಿದ ಹದಿನಾರು ಕಥೆಗಳನ್ನು ಬರೆದಿದ್ದಾರೆ. ಇವರ 'ಧನಿಯರ ಸತ್ಯನಾರಾಯಣ' ಒಂದು ಯಶಸ್ವಿಕಥೆಯಾಗಿದೆ.

ಆನಂದ ಕಂದರ ಬಹುತೇಕ ಕಥೆಗಳಲ್ಲಿ ಉತ್ತರ ಕರ್ನಾಟಕದ ಜನಜೀವನ, ಆ ಜನರ ನೋವು, ನಲಿವು, ಶ್ರದ್ಧೇ, ನಂಬಿಕೆಗಳನ್ನು ವಸ್ತುವಾಗುಳ್ಳ ಕಥೆಗಳು ಕಲಾತ್ಮಕವಾಗಿದ್ದು, ವಾಸ್ತವ ದೃಷ್ಟಿಯುಳ್ಳವಾಗಿವೆ. ಹಾಗೆಯೇ ಕೃಷ್ಣಕುಮಾರ ಕಲ್ಲೂರರವರ 'ಬಿಸಿಲುಗುದುರೆ'-ಯಂಥ ಸಂಕಲನದಲ್ಲಿ ಗೆಳೆತನ ಮತ್ತು ಆದರ್ಶದ ನೆಲೆಯ ಕಥೆಗಳಿವೆ.

ಮಾಸ್ತಿಯವರ ಮುಂದಿನ ಪೀಳಿಗೆಯ ಮಹತ್ವದ ನವೋದಯ ಕಥೆಗಾರರಲ್ಲಿ ರಂ.ಶ್ರೀ.ಮುಗಳಿ, ಗೊರೂರು, 'ಹಳ್ಳಿಯ ಚಿತ್ರಗಳು' ಗೊರೂರರ ಅತ್ಯಂತ ಜನಪ್ರಿಯತೆ ಗಳಿಸಿದ ಕಥಾಸಂಕಲನವಾಗಿದೆ. ನವೋದಯ ಹಿರಿಯ ತಲೆಮಾರಿನ ಲೇಖಕರಲ್ಲಿ ಮುಖ್ಯವಾದ ಪು.ತಿ.ನರಸಿಂಹಚಾರ್, ಶಿವರಾಮಕಾರಂತ, ಶ್ರೀರಂಗ, ಇವರೂ ಕೂಡ ಕಥೆಗಳನ್ನು ಬರೆದಿದ್ದಾರೆ. ಆದರೆ ಇವರು ಸಣ್ಣ ಕಥೆಗಳನ್ನು ತಮ್ಮ ಪ್ರಮುಖ ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡವರಲ್ಲ. ಇದೇ ಸಾಲಿನಲ್ಲಿ ಬರೆದವರೆಂದರೆ ಬೇಂದ್ರೆ, ದೇವುಡು, ನವರತ್ನ ರಾಮರಾವ್, ಕೆ.ವಿ.ಅಯ್ಯರ್, ಪಡುಕೋಣೆ ರಮಾನಂದರಾಯರು,

ಸಿ.ಕೆ.ವೆಂಕಟರಾಮಯ್ಯ, ಎಂ.ವಿ.ಸೀತಾರಾಮಯ್ಯ ಇವರೆಲ್ಲಾ ನವೋದಯ ಕಾಲದ ಕಥೆಗಾರರಾಗಿದ್ದಾರೆ.

ನವೋದಯ ಮಾರ್ಗದಲ್ಲಿ ಮಹಿಳೆಯರು ಸಣ್ಣಕಥೆಗಳನ್ನು ಬರೆದಿದ್ದಾರೆ. ಅವರಲ್ಲಿ ಸರಸ್ವತಿ ರಾಜವಾಡೆ, ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಹೆಚ್.ವಿ.ಸಾವಿತ್ರಮ್ಮ, ತ್ರಿವೇಣಿ, ಎಂ.ಕೆ.ಇಂದಿರಾವಾಣಿ, ಶಾಂತಾದೇವಿ ಕಣವಿ, ಗೀತಾ ಕುಲಕರ್ಣಿ, ಪ್ರೇಮಾಭಟ್, ಪಂಕಜ, ಜಯಲಕ್ಷ್ಮೀ ಶ್ರೀನಿವಾಸನ್ ಮೊದಲಾದವರು.

ಚಿಗುರು ಮತ್ತುಕಂಬನಿ ಎಂಬ ಎರಡು ಕಥಾಸಂಕಲನಗಳನ್ನು ಬರೆದಿರುವ ಕೊಡಗಿನ ಗೌರಮ್ಮ ಮುಖ್ಯರು. ಅವರ ಕಥೆಗಳಲ್ಲಿ ಹೆಣ್ಣಿನ ಮಾನಸಿಕ ತುಮುಲ ಬಾಳಿನ ತೊಡಕುಗಳ ಚಿತ್ರಣವಿದೆ.

ಒಟ್ಟಾರೆ ನವೋದಯ ಕಥೆಗಳು ಕನ್ನಡ ಸಣ್ಣಕಥೆಯ ಪ್ರಕಾರವನ್ನು ಸಮೃದ್ಧಗೊಳಿಸಿವೆ. ೧೯೫೦ರ ವರೆಗೆ ಬಂದ ಸಣ್ಣಕಥೆಳು ವಸ್ತು, ತಂತ್ರ, ರಚನೆಯ ದೃಷ್ಟಿಯಲ್ಲಿ ವೈವಿಧ್ಯಪೂರ್ಣ ವಾದವುಗಳಾಗಿವೆ. ಅಂದಿನ ಕಥೆಗಾರರು ಮನುಷ್ಯನ ಸಂಬಂಧ, ಬದುಕಿನ ನೈತಿಕ ಮೌಲ್ಯಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರಿದರು. "ನವೋದಯ ಕಥೆಗಾರರಿಗೆ ಸಾಮಾನ್ಯವಾಗಿ ನಿರೂಪಣೆಯ ಕಡೆಗೆ ಹೆಚ್ಚಿನ ಒಲವಿರುವುದನ್ನು ಕಾಣುತ್ತೇವೆ. ಇದರಿಂದ ಒಟ್ಟು 'ಮನುಷ್ಯ' ಬದುಕಿನ ಸಂದರ್ಭದಲ್ಲಿ ಬಾಳಿನ ಒಳಿತು ಕೆಡಕುಗಳನ್ನು ನಿರ್ಣಯಿಸುವುದು ಇವರಿಗೆ ಸಾಧ್ಯವಾಗಿದೆ. ಜೊತೆಗೆ ಕಥೆಯ ಸಂಗತಿಯಿಂದ ದೂರನಿಂತು ನೋಡುವ ಮಾಸ್ತಿಯವರು ಹಾಕಿಕೊಟ್ಟ ತಂತ್ರ ಇವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬದುಕಿನ ಅನುಭವದ ಆಳಕ್ಕಿಂತ ಅದರ ಮೇಲು ಶರೀರವನ್ನು ಒಟ್ಟಾರೆ ಅಂದಗೆಡದಂತೆ ರೂಪಿಸುವೆಡೆಗೆ ಅವರು ಗಮನಹರಿಸುತ್ತಾರೆ. ಅಂದರೆ ವ್ಯಕ್ತಿಯ ವೈಯಕ್ತಿಕ ಅನುಭವ ಸೂಕ್ಷ್ಮತೆಗಳಿಗಿಂತ ಸಮೂಹದ ಅನುಭವದ ಸಮಸ್ತದ ಕಡೆಗೆ ಇವರ ಒಲವು ಹೆಚ್ಚಾಗಿದೆ"[೬] ಎಂದು ಡಾ. ಸತ್ಯನಾರಾಯಣ ಮಲ್ಲಿಪಟ್ಟಣ ಹೇಳಿದ್ದಾರೆ. ಎಂಬ ಹೇಳಿಕೆ ಸಮಂಜಸವಾದದ್ದು, ನವೋದಯ ಸಣ್ಣಕಥೆಗಳ ರಚನೆಯ ಸಂದರ್ಭವೇ ಚಾರಿತ್ರಿಕ ಬಿಕ್ಕಟ್ಟಿನಿಂದ ಕೂಡಿತ್ತು. ಬ್ರಿಟಿಷ್ ವಸಾಹತುಶಾಹಿಯ ಪ್ರಭಾವದೊಂದಿಗೆ ತನ್ನತನವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗುತ್ತಿತ್ತು. ದೇಶದ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ ಆ ಕಾಲದಲ್ಲಿ ಆದರ್ಶಮಯತೆ ಮತ್ತು ಭಾವನಾಮಯತೆಗಳು ದೇಶದ ಗತಿಯನ್ನು ನಿರ್ಣಯಿಸುವ ಸಂಗತಿಗಳಾಗಿದ್ದವು. ರಾಷ್ಟ್ರ ನಿರ್ಮಾಣದ ಕಡೆ ಜನತೆ ಒಲವು ತೋರುತ್ತಿದ್ದ ಅಂದಿನ ವಾತಾವರಣದ ಮಧ್ಯೆ ನವೋದಯ ಕಥೆಗಾರರು ದೇಶಾಭಿಮಾನ, ಭಾಷಾಭಿಮಾನ, ಭಾರತೀಯತೆ, ಭಾವೈಕ್ಯ, ಸಾಂಸ್ಕೃತಿಕ

೬. ಡಾ.ಸತ್ಯನಾರಾಯಣ ಮಲ್ಲಿಪಟ್ಟಣ– ಕನ್ನಡ ಸಣ್ಣಕಥೆ:ಹೆಜ್ಜೆ ಮತ್ತು ಹಾದಿ, ಪು. ೫೫

ಪುನರುಜ್ಜೀವನದಂಥ ಆಲೋಚನೆಗಳಲ್ಲಿ ತೊಡಗಿದ್ದರು ಎಂಬುದನ್ನು ನಾವು ಎಂದಿಗೂ ಮರೆಯುವಂತಿಲ್ಲ.

೨. ಪ್ರಗತಿಶೀಲ ಕಥಾ ಸಾಹಿತ್ಯ

೧೯೩೦ರ ಅನಂತರದಲ್ಲಿ ಸಣ್ಣಕಥೆಯ ರಚನೆಗೆ ಬೇರೊಂದು ಆಯಾಮ ಬಂದಿತ್ತು. ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಅಪೇಕ್ಷಿಸುತ್ತಿದ್ದ ಮನಸ್ಸುಗಳು ದುರ್ಬಲರ ಹಾಗೂ ಶೋಷಿತರ ಜೀವನ ಚಿತ್ರಣವನ್ನು ನೀಡಲಾರಂಭಿಸಿದವು. ನವೋದಯ ಮಾರ್ಗಕ್ಕೆ ಭಿನ್ನವಾದ ಸಾಹಿತ್ಯಿಕ ಚಿಂತನೆಗಳು ಬೆಳೆದವು. ಮಾರ್ಕ್ಸ್‌ವಾದದ ತಾತ್ವಿಕ ಚೌಕಟ್ಟುಗಳನ್ನುಳ್ಳ ವರ್ಗ ಹೋರಾಟ ಮತ್ತು ಸಮೂಹನಿಷ್ಠೆ ಧೋರಣೆ ಕಂಡುಬಂದಿತ್ತು. ಹೀಗಾಗಿ ಮನುಷ್ಯನ ವೈಯಕ್ತಿಕ ಬದುಕಿಗಿಂತ ಸಮೂಹ ಜೀವನ ಮಹತ್ವವನ್ನು ಪಡೆದುಕೊಂಡಿತು. 'ಪ್ರಗತಿಶೀಲತೆ' ಎಂಬುದು ಕಾಣಿಸಿಕೊಂಡಿತು.

ಪ್ರಗತಿಶೀಲ ಕತೆಗಾರರಲ್ಲಿ ಮುಖ್ಯರಾದವರೆಂದರೆ ಅ.ನ.ಕೃಷ್ಣರಾಯರು ಕಾದಂಬರಿ ಕಾರರಾಗಿ ಪ್ರಸಿದ್ಧರಾದರೂ, ಜೊತೆಜೊತೆಗೆ ಸಣ್ಣಕತೆಗಳನ್ನು ಬರೆದರು. ಅವರು ಆರಂಭದಲ್ಲಿ ನವೋದಯದ ಪ್ರಭಾವದಲ್ಲೇ ಬೆಳೆದರು. ಅನಂತರ ತಮ್ಮ ಬರವಣಿಗೆಯ ಸೈದ್ಧಾಂತಿಕ ನೆಲೆಗಟ್ಟನ್ನು ಬದಲಿಸಿಕೊಂಡರು. ಅ.ನ.ಕೃ ಅವರಂತೆಯೇ ಕಾದಂಬರಿ ಪ್ರಕಾರವನ್ನು ತಮ್ಮ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡ ತಾ.ರಾ.ಸುಬ್ಬರಾಯರು 'ರೂಪಸಿ', 'ತೊಟ್ಟಿಲು ತೂಗಿತು', 'ಗಿರಿಮಲ್ಲಿಗೆಯ ನಂದನ'ದಲ್ಲಿ 'ಇದೇ ನಿಜವಾದ ಸಂಪತ್ತು' ಎಂಬ ಕಥಾಸಂಕಲನವನ್ನು ಪ್ರಕಟಿಸಿದ್ದಾರೆ. ಅವರ ಆರಂಭಿಕ ದೆಸೆಯ ಕಥೆಗಳಲ್ಲಿ ಕಾಣಬರುವ ಪ್ರಗತಿಶೀಲ ಮನೋಧರ್ಮ ಕಡಿಮೆಯಾಯಿತು. ಕಥೆಗಳನ್ನು ಬರೆಯುವ ಉತ್ಸಾಹವೂ ಉಳಿಯದೆ ಹೀಗೆನ್ನುತ್ತಾರೆ. "ಕಾದಂಬರಿಯನ್ನು ಬರೆಯುವುದಕ್ಕಿಂತಲೂ ಸಣ್ಣಕತೆಯನ್ನು ಬರೆಯುವುದು ಕಠಿಣವಾದ ಕಲಾಮಾರ್ಗ ಎಂಬ ಸತ್ಯ ನನಗೆ ಗೋಚರಿಸಿದೆ."[೭] ಆದರೂ ಅವರ '೦-೦=೦' ಎಂಬ ಕತೆಗೆ ಒಂದು ಚಾರಿತ್ರಿಕ ಮಹತ್ವವಿದೆ. ಏಕೆಂದರೆ ಆ ಕತೆಯು ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಕನ್ನಡ ಸಣ್ಣಕತೆಯ ಸಂದರ್ಭದಲ್ಲಿ ಮುಖ್ಯವಾದುದಾಗಿದೆ. 'ಕನ್ನಡದಲ್ಲಿ ಪ್ರಜ್ಞಾಪ್ರವಾಹ' (Stream of consciousness) ತಂತ್ರವನ್ನು ಒಳಗೊಂಡ ಮೊತ್ತಮೊದಲ ಸಣ್ಣ ಕತೆ ಇದು.

ಬಸವರಾಜ್ ಕಟ್ಟಿಮನಿಯವರು ಪ್ರಗತಿಶೀಲ ಕತೆಗಾರರಲ್ಲಿ ಬಹಳ ಜನಪ್ರಿಯತೆ–ಯನ್ನು ಗಳಿಸಿದವರು. "ವಾಸ್ತವ ಪರಿಸ್ಥಿತಿಗೆ ಕಣ್ಣು, ಕಿವಿ ತೆರೆದಿಟ್ಟು ಒಳ್ಳೆಯ ಬದುಕಿಗಾಗಿ ಹೋರಾಡುತ್ತಿರುವ ಜನತೆಗೆ ಸ್ಫೂರ್ತಿ ನೀಡುವಂತಹ ಕೃತಿ ರಚಿಸುವುದೇ ಪ್ರಗತಿಶೀಲತೆ"

೭. ಡಾ.ಸತ್ಯನಾರಾಯಣ ಮಲ್ಲಿಪಟ್ಟಣ – ಕನ್ನಡ ಸಣ್ಣಕಥೆ:ಹೆಜ್ಜೆ ಮತ್ತು ಹಾದಿ, ಪು. ೩೩

ಎಂದು ಅವರೇ ಹೇಳಿದ್ದಾರೆ. ಇವರ ಕಥೆಗಳಲ್ಲಿ ಒಂದಾದ 'ಆಗಸ್ಟ್ ಒಂಬತ್ತು' ಎಂಬುದು ೧೯೪೨ರ ಆಗಸ್ಟ್ ಚಳುವಳಿಯ ಹಿನ್ನೆಲೆಯಲ್ಲಿ ಬರೆದ ಏಳು ಕಥೆಗಳ ಸಂಕಲನ. ಆ ಸಂಕಲನದಲ್ಲಿನ 'ಅಜ್ಞಾತವಾಸಿ' ವೈವಿಧ್ಯಪೂರ್ಣವಾದ ಕಥೆಯಾಗಿದೆ.

ಈ ಮಾರ್ಗದ ಮತ್ತೊಬ್ಬ ಪ್ರಮುಖ ಕತೆಗಾರ ನಿರಂಜನ. ಅವರ 'ರಕ್ತಸರೋವರ', 'ಸಂಧಿಕಾಲ'ದಂತಹ ಸಂಕಲನಗಳಲ್ಲಿನ ಕತೆಗಳಲ್ಲಿ ಸಮಾಜದ ಕ್ರೂರ ಅನ್ಯಾಯಗಳನ್ನು ದಾಖಲಿಸಿದ್ದಾರೆ. ಪ್ರತಿಮಾ ವಿಧಾನದ ಮೂಲಕ ಬೆಳೆಯುವ 'ಕೊನೆಯ ಗಿರಾಕಿ' ಕಥೆಗೆ ಚಾರಿತ್ರಿಕ ಮಹತ್ವ ದೊರೆತಿದೆ. ನಿರಂಜನರಂತೆಯೇ ಭಿನ್ನ ಮಾದರಿಯ ಕತೆಗಳನ್ನು ಬರೆದವರೆಂದರೆ ಚದುರಂಗರವರು. ಸ್ವಪ್ನಸುಂದರಿ, ಶವದ ಮನೆ, ಮೀನಿನ ಹೆಜ್ಜೆ, ಬಂಗಾರದ ಹೆಜ್ಜೆ ಮುಂತಾದ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಹೀಗಾಗಿ ಇವರ ಕಥೆಗಳಲ್ಲಿ ಸಾಮಾಜಿಕ ಅನ್ಯಾಯವನ್ನು ಕುರಿತ ಸಂದರ್ಭವು ಮಾನವೀಯ ಅಂತಃಕರಣದ ನೆಲೆಯುಳ್ಳದ್ದಾಗಿರುತ್ತದೆ. ಒಂದು ರೀತಿಯಲ್ಲಿ ಮಾಸ್ತಿಯವರ ಕಥನದ ರೀತಿಗೆ ಹತ್ತಿರ-ವಾಗಬಲ್ಲ ಭಾಷಾಭಿವ್ಯಕ್ತಿ ಇವರದು. ನವೋದಯ ಮಾರ್ಗದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಗತಿಶೀಲ ಮಾರ್ಗವನ್ನು ಅನುಸರಿಸಿದ ಬರಹಗಾರರಿಲ್ಲ. ಈ ಕಾರಣದಿಂದಾಗಿ ಮುಂದೆ ಪ್ರಗತಿಶೀಲ ಕಥಾಪರಂಪರೆ ವಿಸ್ತರಣೆಗೊಳ್ಳಲಿಲ್ಲವೆಂದೇ ಹೇಳಬೇಕಾಗುತ್ತದೆ.

೩. ನವ್ಯಕಥಾಸಾಹಿತ್ಯ:

ಸ್ವಾತಂತ್ರ್ಯ ನಂತರದಲ್ಲಿ ನವ್ಯ ಸಾಹಿತ್ಯ ಮಾರ್ಗ ಬೆಳೆಯಿತು. ಇದು ನವೋದಯ ಮತ್ತು ಪ್ರಗತಿಶೀಲ ಮಾರ್ಗಕ್ಕಿಂತ ಭಿನ್ನವಾದುದು. ನವೋದಯದವರ ಆದರ್ಶ, ಪ್ರಗತಿಶೀಲರ ಆವೇಶಗಳಿಗಿಂತ ಚಿಂತನಶೀಲತೆಯನ್ನು ರೂಢಿಸಿಕೊಂಡ ಮಾರ್ಗವಿದು. ನವೋದಯ ಮತ್ತು ಪ್ರಗತಿಶೀಲ ಬರಹಗಾರರು ಸಮುದಾಯದ ಆಗುಹೋಗುಗಳಿಗೆ ಹೆಚ್ಚು ಗಮನನೀಡಿದವರು. ಆದರೆ ನವ್ಯರು ವ್ಯಕ್ತಿ ವಿಶಿಷ್ಟ ಅನುಭವಗಳ ಕಡೆ ಕಾಳಜಿ ವಹಿಸಿದರು. ಆ ಮೂಲಕ ಸಮಷ್ಟಿಯ ಜೀವನ ವಿಧಾನಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿದರು. "ಮನಸ್ಸಿನ ಅಥವಾ ಅಂತರಂಗದ ದ್ವಂದ್ವ, ತೊಳಲಾಟ, ಅನಿಶ್ಚಯತೆ, ಅಸಹಾಯಕತೆ ಮುಂತಾದವುಗಲನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು "ಪ್ರಜ್ಞಾಪ್ರವಾಹ" ತಂತ್ರವನ್ನು ನವ್ಯರು ಅಳವಡಿಸಿಕೊಂಡರು. ವ್ಯಕ್ತಿಯ ಪ್ರಜ್ಞಾಕೇಂದ್ರದ ಮೂಲಕವೇ ಒಳ ಮತ್ತು ಹೊರಗಿನ ಅನುಭವ ಸಮಸ್ತಕ್ಕೂ ಅರ್ಥವನ್ನು ಹುಡುಕುವ, ಆ ಮೂಲಕ ಬದುಕನ್ನು ಕುರಿತಂತೆ ತಾತ್ವಿಕ ನಿಲುವನ್ನು ತಳೆಯುವ ಪ್ರಯತ್ನವನ್ನು ಇವರಲ್ಲಿ ಕಾಣುತ್ತೇವೆ".[೮]

೮. ಡಾ.ಸತ್ಯನಾರಾಯಣ ಮಲ್ಲಿಪಟ್ಟಣ- ಕನ್ನಡ ಸಣ್ಣಕಥೆ:ಹೆಜ್ಜೆ ಮತ್ತು ಹಾದಿ, ಪು. ೬೨-೬೩

ನವ್ಯಕತೆಗಳ ರೂಪುರೇಷೆಯನ್ನು ಬಾಗಲೋಡಿ ದೇವರಾಯರ ಕಥೆಗಳಲ್ಲಿಯೇ ಗುರುತಿಸಬಹುದು. ಅವರು ೧೯೪೯ರ ಸುಮಾರಿನಲ್ಲಿ ಪ್ರಕಟಿಸಿದ "ಹುಚ್ಚು ಮುನಸೀಫ ಮತ್ತು ಇತರ ಕಥೆಗಳು" ಸಂಕಲನದ ಕಥೆಗಳಲ್ಲಿಯೇ ನವ್ಯಧೋರಣೆಗೆ ಸಮೀಪವಾದ ಆಲೋಚನೆಗಳು ಕಾಣಬರುತ್ತವೆ. ಆರೋಗ್ಯಕರವಾದ ಲೇವಡಿ, ಹರಿತವಾದ ವಿಡಂಬನೆ, ತೀಕ್ಷ್ಣವಾದ ಶೈಲಿ ಇವುಗಳಿಂದ ಅವರ ಕಥೆಗಳು ವಿಶಿಷ್ಟವೆನಿಸಿದವು. "ಮಾನವೀಯತೆ ಇಲ್ಲದ ಅತಿ ಮಡಿಯನ್ನು ಯಾಂತ್ರಿಕವಾಗಿ ಅಧ್ಯಾತ್ಮಿಕ ಸಾಧನೆ ಮಾಡುವುದನ್ನು ಲವಲವಿಕೆಯಾಗಿ ಹಾಸ್ಯಮಾಡಿದರು".[೯]

ನವ್ಯಧೋರಣೆ ಮೊದಲಬಾರಿಗೆ ಖಚಿತವಾಗಿ ಕಾಣಬರುವುದು ರಾಮಚಂದ್ರ-ಶರ್ಮರ ಕಥೆಗಳಲ್ಲಿ ಎನ್ನಬಹುದು. ಅಲ್ಲಿ ಮನುಷ್ಯನ ಮನಸ್ಸಿನ ತುಮುಲಗಳು ಕಾಣಬರುವುದುಂಟು. "ಪ್ರಗತಿಶೀಲರ ಕೆಲವು ಕತೆಗಳಲ್ಲಿ ನವ್ಯತೆ ಮುಖ್ಯವಾಗಿ ತಂತ್ರ ವಿಧಾನದಲ್ಲಿ ಹೊಳಹು ಹಾಕಿತ್ತಾದರೂ ಕಥಾವಸ್ತು ಮತ್ತು ಸಾಹಿತ್ಯ ಧೋರಣೆಗೆ ಸಂಬಂಧಿಸಿದಂತೆ ಒಟ್ಟಿನಲ್ಲಿ ನವ್ಯತೆ ಮೊತ್ತಮೊದಲು ಕಂಡುಬಂದುದು ಬಿ.ಸಿ.ರಾಮಚಂದ್ರ ಶರ್ಮರ ಕಥೇಗಳಲ್ಲಿ. ಪ್ರಗತಿಶೀಲ ಕತೆಗಳಲ್ಲಿ ಸಾಮಾಜಿಕ ಸುಧಾರಣೆ ಮತ್ತು ಸಾಮಾಜಿಕ ನ್ಯಾಯ ಪ್ರತಿಪಾದನೆ ಇವುಗಳಿಂದ ಕಥೆಗಳ ದೃಷ್ಟಿಕೇಂದ್ರವನ್ನು ತಪ್ಪಿಸಿ ಮನುಷ್ಯ ಮನಸ್ಸು ಮತ್ತು ಮೂಲ ಪ್ರವೃತ್ತಿಗಳ ಕಡೆ ತಿರುಗಿಸಿದ್ದು ಚಾರಿತ್ರಿಕವಾಗಿ ಮಹತ್ವದ ಸಂಗತಿಯಾಗಿದೆ"[೧೦] ಎಂಬ ಮಾತು ಗಮನಾರ್ಹ.

ನವ್ಯ ಕತೆಗಾರರಲ್ಲಿ ಪ್ರಮುಖರಾದವರು ಯು.ಆರ್.ಅನಂತಮೂರ್ತಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಕೆ.ಸದಾಶಿವ, ಪಿ.ಲಂಕೇಶ್ ಮುಂತಾದವರು.

'ಎಂದೆಂದೂ ಮುಗಿಯದ ಕಥೆ' ಎಂಬ ಮೊದಲ ಸಂಕಲನದಲ್ಲಿಯೇ ನವ್ಯತೆಯ ಅಂಶಗಳನ್ನು ಪ್ರಕಟಿಸಿದ ಅನಂತಮೂರ್ತಿಯವರು ಪ್ರಶ್ನೆ, ಮೌನಿ, ಆಕಾಶ ಮತ್ತು ಬೆಕ್ಕು ಕಥಾಸಂಕಲನಗಳ ಮೂಲಕ ಕಥನ ವಿಭಿನ್ನ ಸ್ತರಗಳನ್ನು ಸೂಚಿಸಿದ ಲೇಖಕ ಅವರ ಕಥೆಗಳಲ್ಲಿ ಕಾಣಬರುವ ಬ್ರಾಹ್ಮಣ ಸಮಾಜದ ಕೌಟುಂಬಿಕ ಪರಿಸರ, ಅನುಭವದ ವ್ಯಾಪಕತೆ. ಅಭಿವ್ಯಕ್ತಿಯ ತೀವ್ರತೆ ನವೀನವಾದುದಾಗಿದೆ. ಪ್ರಕೃತಿ, ಕಾರ್ತೀಕ, ಕ್ಲಿಪ್ ಜಾಯಿಂಟ್, ಘಟಶ್ರಾದ್ಧಾ, ಪ್ರಸ್ಥ, ಭೋಜರಾಜ ಮೊದಲಾದ ಕಥೆಗಳಲ್ಲಿ ಪರಂಪರಾಗತ ಮೌಲ್ಯಶೋಧನೆಯ ಜೊತೆಜೊತೆಗೆ ಪಾತ್ರಗಳ ಸ್ವಭಾವ ವಿಶ್ಲೇಷಣೆಯನ್ನು ಮಾಡಲಾಗಿದೆ. ಎಲ್.ಎಸ್.ಶೇಷಗಿರಿರಾವ್ ಹೇಳುವಂತೆ "ಅನಂತಮೂರ್ತಿ ಅವರ ಕಥೆಗಳಲ್ಲಿ ಮನಸ್ಸಿನ ವ್ಯಾಪಾರ ಅಷ್ಟೇ ಅಲ್ಲ ಕಥೆಯ ಅಂಶವೂ ಇದೆ. ಜೊತೆಗೆ "ಒಂದು ಘಟನೆಯನ್ನು ಬೇರೆ

---

೯. ಎಲ್.ಎಸ್.ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಪು. ೨೧೨.

೧೦. ಜಿ.ಹೆಚ್.ನಾಯಕ, ಕನ್ನಡ ಸಣ್ಣಕಥೆಗಳು, ಪು. xiv.

ಬೇರೆ ಪಾತ್ರಗಳ ದೃಷ್ಟಿಯಿಂದ ಕಾಣುತ್ತೇವೆ. ಆದುದರಿಂದ ಅದು ಸರಳ ಎಂದು-ಕೊಳ್ಳುವುದು ಸಾಧ್ಯವೇ ಇಲ್ಲ"[೧೧] ಎಂದಿದ್ದಾರೆ.

ಕಲಾತ್ಮಕತೆಯ ದೃಷ್ಟಿಯಿಂದ ಅತ್ಯಂತ ಅಚ್ಚುಕಟ್ಟಾದ ಹಾಗೂ ಪರಿಪೂರ್ಣತೆ-ಯನ್ನು ಸಾಧಿಸಿದ ಕತೆಗಳನ್ನು ಬರೆದವರು 'ಯಶವಂತ ಚಿತ್ತಾಲರು'. ಬಹುಪಾಲು ಉತ್ತರ ಕನ್ನಡದ ಹಾಗೂ ಮುಂಬೈ ಪರಿಸರವನ್ನು ಹಿನ್ನೆಲೆಯುಳ್ಳ ಅವರ ಕಥೆಗಳಲ್ಲಿ ಸಾವು ಪ್ರಮುಖ ಪಾತ್ರವನ್ನು ವಹಿಸಿದಂತೆ ಕಾಣುತ್ತದೆ. ಸಂದರ್ಶನ, ಅಬೋಲಿನ, ಆಟ, ಸಿದ್ಧಾರ್ಥ. 'ಕತೆಯಾದಳು ಹುಡುಗಿ' ಕತೆಗಳಲ್ಲಿ ಸಾಮಾನ್ಯವಾಗಿ ಈ ಸಂಗತಿಗಳನ್ನು ಗುರುತಿಸಬಹುದಾಗಿದೆ.

ನಗರಕೇಂದ್ರಿತ ಬದುಕನ್ನು ಮುಖ್ಯವಾಗಿರಿಸಿಕೊಂಡು ಕತೆಗಳನ್ನು ಬರೆದವರಲ್ಲಿ ಪ್ರಮುಖರಾದವರು ಶಾಂತಿನಾಥ ದೇಸಾಯಿ ಅವರ ಮಂಜುಗಡ್ಡೆ, ದಂಡೆ, ಕ್ಷಿತಿಜ, ಕೂರ್ಮಾವತಾರ ಮುಂತಾದ ಕಥಾಸಂಕಲನಗಳಲ್ಲಿ ಮನುಷ್ಯನ ಮನಸ್ಸಿನ ಒಳತೋಟಿ-ಯನ್ನು ಅನಾವರಣಗೊಳಿಸುವ ಪ್ರಯತ್ನವಿದೆ. ನಂತರ ಕೆ.ಸದಾಶಿವರವರು ಕಲಾತ್ಮಕ ನಿರೂಪಣೆಯಿಂದ ಕತೆಗಾರರೆನಿಸುತ್ತಾರೆ. ಅಪರಿಚಿತರು, ನಲ್ಲಿಯಲ್ಲಿ ನೀರು ಬಂದಿತು. ಅವರ ಪ್ರಸಿದ್ಧ ಕಥಾಸಂಕಲನಗಳಾಗಿವೆ.

ನವ್ಯಕತೆಗಾರರಲ್ಲಿ ಮತ್ತೊಬ್ಬ ಪ್ರಮುಖರಾದ ಕಥೆಗಾರರೆಂದರೆ ಪಿ.ಲಂಕೇಶ್, ಸಣ್ಣ ಕಥೆಯ ಮಾಧ್ಯಮವನ್ನು ಇವರು ದುಡಿಸಿಕೊಂಡವರು. ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ನಾನಲ್ಲ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ, ಕಲ್ಲುಕರಗುವ ಸಮಯ, ಉಲ್ಲಂಘನೆ ಇವು ಲಂಕೇಶರ ಕಥಾಸಂಕಲನಗಳು.

ನವ್ಯಮಾರ್ಗದ ಕಥೆಗಾರರಲ್ಲಿ ಕೆಲವರು ಅಪರೂಪವಾಗಿ ಕಥೆ ಬರೆದರು ಆ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡವರಿದ್ದಾರೆ. ಗಿರಡ್ಡಿ ಗೋವಿಂದರಾಜು (ಆ ಮುಖ, ಈ ಮುಖ), ಸೂ. ರಮಾಕಾಂತ (ಅಸಹಜ), ರಾಘವೇಂದ್ರ ಖಾಸನೀಸ (ತಬ್ಬಲಿಗಳು), ಟಿ.ಜಿ.ರಾಘವ (ಶ್ರಾದ್ಧಾ), ಜಿ.ಎಸ್.ಸದಾಶಿವ (ಮಗುವಾಗಿ ಬಂದವನು) ಮುಂತಾದವರು.

ನವ್ಯಮಾರ್ಗದಲ್ಲಿ ಹೊರಟು ಭಿನ್ನರೀತಿಯ ಕಥನಮಾರ್ಗವನ್ನು ರೂಢಿಸಿ-ಕೊಂಡವರಲ್ಲಿ ಪೂರ್ಣಚಂದ್ರ ತೇಜಸ್ವಿ ಪ್ರಮುಖರು. ಅಬಚೂರಿನ ಪೋಸ್ಟ್ ಆಫೀಸ್, ಹುಲಿಯೂರಿನ ಸರಹದ್ದು ಮುಂತಾದ ಕಥೆಗಳಲ್ಲಿ ಅವರು ದಟ್ಟವಾದ ವಿವರಗಳೊಂದಿಗೆ ಜೀವಂತ ಸಂದರ್ಭಗಳನ್ನು ಸೃಷ್ಟಿಸುತ್ತಾರೆ. "ಲೋಹಿಯಾರವರ ತತ್ವಚಿಂತನೆ, ಕುವೆಂಪು ಅವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನಲ್ಲಿ ಪ್ರಯೋಗಶೀಲತೆ ಈ

೧೧. ಎಲ್.ಎಸ್.ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಪು. ೨೧೫.

ಮೂರೇ ನನ್ನ ಈಚಿನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿರುವಂತಹುದು"[೧೨] (ಅಬಚೂರಿನ ಪೋಸ್ಟಾಫೀಸು, ಪ್ರಸ್ತಾವನೆ) ಎನ್ನುವ ಅವರು ನಾಗರಿಕತೆಯಿಂದ ದೂರವಾದ ಸಮಾಜದ ಗೊಂದಲಗಳನ್ನು ಸೂಕ್ಷ್ಮವಾಗಿ ನಿರೂಪಿಸುತ್ತಾರೆ.

ಈ ತಲೆಮಾರಿನ ಭರವಸೆಯ ಲೇಖಕರೆನಿಸಿದ್ದ ಶ್ರೀಕೃಷ್ಣ ಆಲನಹಳ್ಳಿ, ವೀಣಾ ಯಲಬುರ್ಗಿ, ರಾಜಶೇಖರ, ನೀರಮಾನ್ವಿ, ರಾಮಚಂದ್ರ ದೇವ ಮೊದಲಾದವರು ಸಣ್ಣಕಥೆಗಳನ್ನು ಬರೆದಿದ್ದಾರೆ. ಆಲನಹಳ್ಳಿನವರ ಕಥೆಗಳಲ್ಲಿ ವೈವಿಧ್ಯತೆ ಇದ್ದರೂ ಸಂಯಮದ ಬರವಣಿಗೆ ಎನಿಸುವುದಿಲ್ಲ. ಉದಾಹರಣೆಗೆ 'ತಪ್ತ ಸಂಕಲನ'ವನ್ನು ಗಮನಿಸಬಹುದು. ಮುಳ್ಳುಗಳು ಕೊನೆಯ ದಾರಿ ಸಂಕಲನಗಳಲ್ಲಿ ವೀಣಾ ಎಲಬುರ್ಗಿ ಹೊರಜಗತ್ತನ್ನು ಪಾತ್ರಗಳ ಮೂಲಕ ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ನವ್ಯಕಥಾ ಮಾರ್ಗದಿಂದ ದೂರವುಳಿದು ಅದೇ ಸಂದರ್ಭದಲ್ಲಿ ಆದರ್ಶ, ಆವೇಶ, ಸಾಂಕೇತಿಕತೆ–ಯನ್ನುಳ್ಳ ಕತೆಗಳನ್ನು ಬರೆದಿರುವವರು ಇದ್ದಾರೆ. ಗ್ರಾಮಜೀವನದ ಆಗು–ಹೋಗುಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಶ್ರಮ ಇವರದು. ಅವರಲ್ಲಿ ಮುಖ್ಯರಾದವರು ಜೀ.ಶಂ.ಪರಮಶಿವಯ್ಯ, ಸುಧಾಕರ, ಕ್ಯಾತನಹಳ್ಳಿ ರಾಮಣ್ಣ ಡಿ.ಲಿಂಗಯ್ಯ, ಬೆಸಗರಹಳ್ಳಿ ರಾಮಣ್ಣ. ಈ ನಡುವೆ ಕೆಲವರು ಹಾಸ್ಯ ಕತೆಗಳನ್ನು ಬರೆದಿದ್ದಾರೆ.

೪) ದಲಿತ ಬಂಡಾಯ ಕಥಾ ಸಾಹಿತ್ಯ

೧೯೭೦ರ ಸುಮಾರಿಗೆ ದಲಿತ–ಬಂಡಾಯ ಆಶಯವುಳ್ಳ ಕಥೆಗಳು ಪ್ರಕಟಗೊಂಡವು. ಸಮಾಜಕೇಂದ್ರಿತ ನೆಲೆಯುಳ್ಳ ಆಲೋಚನಾಕ್ರಮವೇ ಇದಕ್ಕೆ ಕಾರಣ–ವೆನ್ನಬಹುದು. ನವ್ಯ ಸಾಹಿತ್ಯ ಗಮನಾರ್ಹ ಬೆಳವಣಿಗೆಯನ್ನು ಕಂಡುಕೊಳ್ಳುತ್ತಿದ್ದ ಕಾಲದಲ್ಲಿ 'ಬ್ರಾಹ್ಮಣ', 'ಶೂದ್ರ' ಎಂಬ ವಾದವೊಂದು ಆರಂಭವಾಯಿತು. "ಶೂದ್ರಾವಾದಿಗಳು, ನವ್ಯ ಮತ್ತು ಬ್ರಾಹ್ಮಣ ಅನುಭವ ಎರಡನ್ನು ಒಟ್ಟಾಗಿಯೇ ಪ್ರಶ್ನಿಸುವ ಪ್ರಯತ್ನ ನಡೆಸಿದರು. ಶೂದ್ರ ಅಥವಾ ಬ್ರಾಹ್ಮಣೇತರ ಅನುಭವ ಪಕ್ಕಾ ಆಗಿದ್ದರೆ, ಬ್ರಾಹ್ಮಣಾನುಭವ ಅಮೂರ್ತವಾಗಿದೆ. ಆದ್ದರಿಂದ ಬ್ರಾಹ್ಮಣ ಅನುಭವದ ಮಿತಿಯಲ್ಲಿ ಬರೆಯುವವರಿಗೆ ಸೃಜನಶೀಲ ಉತ್ಕಟತೆಯಿಂದ ಬರೆಯಲು ಸಾಧ್ಯವಾಗುವುದಿಲ್ಲ. ಹೀಗಾಗಿ ಅವರು ಹೊಸದನ್ನು ಕಾಣಿಸಲು ಪಾಶ್ಚಾತ್ಯ ಸಾಹಿತ್ಯದಿಂದ ಆಮದು ತಂದ ಅನುಭವ, ತಂತ್ರ ಇತ್ಯಾದಿ ಸರಕುಗಳನ್ನು ಬಳಸುತ್ತಾರೆ ಎಂಬ ವಾದವನ್ನು ಇವರು ಮಂಡಿಸಿದರು"[೧೩] ಇದೇ ಸಂದರ್ಭದಲ್ಲಿ ಮಹಾರಾಷ್ಟ್ರದ 'ದಲಿತ' ಪ್ಯಾಂಥರ್ಸ್

---

೧೨. ಪೂರ್ಣಚಂದ್ರ ತೇಜಸ್ವಿ, 'ಅಬಚೂರಿನ ಪೋಸ್ಟಾಫೀಸ್ (ಪ್ರಸ್ತಾವನೆ).

೧೩. ಸತ್ಯನಾರಾಯಣ ಮಲ್ಲಪಟ್ಟಣ, ಕನ್ನಡ ಸಣ್ಣಕಥೆ : ಹೆಜ್ಜೆ ಹಾದಿ, ಪು. ೬೪.

"ಚಳುವಳಿಯ ಪ್ರಭಾವಕ್ಕೊಳಗಾದ ಕನ್ನಡ ಲೇಖಕರಿಂದ "ದಲಿತ ಸಾಹಿತ್ಯ" ಎಂಬ ಹೊಸಮಾರ್ಗವೊಂದು ರೂಪುಗೊಂಡಿತು. ಇದಕ್ಕೆ ಶೂದ್ರವಾದಿಗಳ ಬೆಂಬಲವು ದೊರೆಯಿತು. ದಲಿತ ಸಾಹಿತಿಗಳು ಮೊದಮೊದಲಿಗೆ ಬ್ರಾಹ್ಮಣರಿಂದಲೇ ಎಲ್ಲಾ ಬಗೆಯ ಶೋಷಣೆಯಾಗುತ್ತಿದೆ ಎಂದು ವಾದಿಸಿದರು. ಅನಂತರ ಅವರು ಇತರ ಸವರ್ಣೀಯ ವರ್ಗದವರನ್ನು ಶೋಷಕರೆಂದು ಘೋಷಿಸಿದರು. ದೇವನೂರು ಮಹಾದೇವನವರನ್ನು 'ದಲಿತ ಸಾಹಿತಿ' ಎಂದು ಗುರುತಿಸುವ ಪ್ರಯತ್ನ ನಡೆಯಿತು. ಆದರೆ ಮಹಾದೇವ 'ದಲಿತ ಸಾಹಿತ್ಯ' ಎಂಬ ವಾದ ಆರಂಭವಾಗುವುದಕ್ಕೆ ಮೊದಲೇ ಕಥೆಗಳನ್ನು ಬರೆಯಲು ಆರಂಭಿಸಿದರು. ಹೀಗಾಗಿ ಅವರ ಕಥೆಗಳು ತಾಂತ್ರಿಕವಾಗಿ ಯಾವ ಸಾಹಿತ್ಯ ಮಾರ್ಗಗಳಿಗೂ ಬದ್ಧವಾಗಲಿಲ್ಲ.

'ದಲಿತ ಸಾಹಿತ್ಯ' ಎಂಬ ಮಾರ್ಗ ರೂಪುಗೊಳ್ಳುತ್ತಿರುವ ವೇಳೆಯಲ್ಲಿಯೇ 'ಮಾರ್ಕ್ಸ್‌ವಾದಿ' ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಲೇಖಕರು ದಲಿತರೊಂದಿಗೆ ಸೇರಿ 'ಬಂಡಾಯ' ಎಂಬ ವಾದವನ್ನು ಮಂಡಿಸಲಾರಂಭಿಸಿದರು. ಆದರೆ ಕೆಲವರು ದಲಿತ ಮತ್ತು ಬಂಡಾಯ ಬೇರೆ ಬೇರೆಯಾಗಿಯೇ ಇರಬೇಕೆಂಬ ವಾದವನ್ನು ಮುಂದಿಟ್ಟರು. ಈ ಬಗೆಯ ತಾರ್ಕಿಕವಾದ ಚರ್ಚೆಗಳ ಮಧ್ಯೆಯೇ ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ಬೆಸಗರಹಳ್ಳಿ ರಾಮಣ್ಣ, ಚೆನ್ನಣ್ಣ ವಾಲೀಕಾರ, ವೀಣಾಶಾಂತೇಶ್ವರ, ಅರವಿಂದ ಮಾಲಗತ್ತಿ, ಪುರುಷೋತ್ತಮ ಬಿಳಿಮಲೆ, ಬಿ.ಕೃಷ್ಣಪ್ಪ ಮೊದಲಾದವರು ಸಾಮಾಜಿಕ ಪ್ರಜ್ಞೆಯುಳ್ಳ ಕಥೆಗಳನ್ನು ಬರೆದರು. ಅನಂತರ ಫಕೀರ್ ಮಹಮ್ಮದ್ ಕಟ್ಪಾಡಿ, ಬೋಳುವಾರು ಮಹಮ್ಮದ್ ಕುಂಞ, ಈ ದಿಸೆಯಲ್ಲಿ ಕಥೆಗಳನ್ನು ರಚಿಸಿದರು.

ಕರ್ನಾಟಕದ ಸಾಹಿತ್ಯ ಚಳವಳಿಯಲ್ಲಿ ದಲಿತ ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ಹಲವಾರು ಜನ ಲೇಖಕಿಯರು ನಾಟಕ, ಕಥೆ, ಕಾದಂಬರಿಗಳಲ್ಲಿ ತಮ್ಮ ನೋವನ್ನು ವ್ಯಕ್ತಪಡಿಸುತ್ತಾ, ಸಮಾನತೆಗಾಗಿ ಪ್ರಶ್ನಿಸುವ ಸಂಪ್ರದಾಯವನ್ನು ಧಿಕ್ಕರಿಸುವ ಉದ್ದೇಶವನ್ನು ಹೊತ್ತಿರುವುದು ಕಂಡುಬರುತ್ತದೆ. ಅವರಲ್ಲಿ ಸುಕನ್ಯಾ ಮಾರುತಿ, ಬಿ.ಟಿ.ಲಲಿತಾನಾಯಕ್, ಗೀತಾನಾಗಭೂಷಣ, ಶಶಿಕಲಾ ವಸ್ತ್ರದಾ, ಮಾಲತಿ ಪಟ್ಟಣಶೆಟ್ಟಿ, ವೈದೇಹಿ, ವಿಜಯಾದಬ್ಬೆ, ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್ ಮುಂತಾದವರು ಕಥಾ ರಚನೆ ಮಾಡಿದ್ದಾರೆ.

ನವೋದಯದ ಸಾಹಿತ್ಯದಲ್ಲಿ ಸ್ತ್ರೀ ತಾಯಿ, ನವ್ಯದಲ್ಲಿ ಭೋಗವಸ್ತು, ಇನ್ನು ಪ್ರಗತಿಶೀಲ ಮತ್ತು ದಲಿತ ಬಂಡಾಯ ಸಾಹಿತ್ಯಗಳಲ್ಲಿ ಇವಳು ಶೋಷಿತಳು, ಜಮೀನ್ದಾರರ, ಮೇಲಾಧಿಕಾರಿಯ, ಪುಡಾರಿಸ್ವಾಮಿಯ, ಗಂಡನ ಅತ್ಯಾಚಾರಕ್ಕೆ ಒಳಗಾದವಳು. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀಯೂ ದಲಿತರಿಗಿಂತಲೂ ದಲಿತಳಾಗಿ ತೀರ ಅಸಹಾಯಕ ಸ್ಥಿತಿಯಲ್ಲಿದ್ದಾಳೆ. ದಲಿತ ಸಮಾಜದಲ್ಲಿ ಸ್ತ್ರೀಯ ಸ್ಥಿತಿ

ಇನ್ನು ಹದಗೆಟ್ಟಿದ್ದು ಎಲ್ಲರೂ ಅವಳನ್ನು ಹದ್ದುಗಣ್ಣಿನಿಂದ ನೋಡುವವರೇ, ಅವಳು ಧರ್ಮದ ಬಗೆಗಿನ ಅಜ್ಞಾನ, ಅಂಧಶ್ರದ್ಧೆ ಮತ್ತು ಅನಕ್ಷರತೆಗಳ ಆಗರವಾಗಿದ್ದು ಅವಳ ವಿಮೋಚನೆಗೆ ದಲಿತ ಹೆಣ್ಣುಮಕ್ಕಳು ಮುಂದಾಗಿ ಸ್ತ್ರೀ ವಿಮೋಚನಾ ಸಾಹಿತ್ಯಾ ರಚಿಸುತ್ತಿದ್ದಾರೆ.

ಹೀಗೆ ಕನ್ನಡದಲ್ಲಿ 'ಸಣ್ಣಕಥೆ' (Short story) ಎಂಬುದು ಹೊರಗಿನಿಂದ ಆಮದಾಗಿ ಬಂದ ಪ್ರಕಾರವಾಗಿದ್ದರೂ ಅದು ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ–ಬಂಡಾಯದ ಸಾಹಿತ್ಯ ಘಟ್ಟಗಳಲ್ಲಿ ಬಹಳಷ್ಟು ಜನಪ್ರಿಯವಾಗಿ ಬೆಳೆದು, ಅದು ಇಂದಿಗೂ ಹೊಸ–ಹೊಸ ರೂಪವನ್ನು ತಳೆದು ಬೆಳೆಯುತ್ತಲಿದೆ.

--

ಅಧ್ಯಾಯ : ಎರಡು

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ ಪ್ರಾರಂಭವಾದುದು. ಈ ಶತಮಾನದ ಎಪ್ಪತ್ತರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ 'ದಲಿತ ಸಂವೇದನೆ, ಮಹಿಳಾ ಸಂವೇದನೆ' ಹಾಗೂ 'ಮುಸ್ಲಿಂ ಸಂವೇದನೆ'ಗಳನ್ನು ಕುರಿತ ಚಿಂತನೆಗಳು ಹೊಸಬಗೆಯ ವಿಮರ್ಶೆಯ ನೆಲೆಯನ್ನು ಸೃಷ್ಟಿಸಿದ್ದು ನಿಜ. ಈ ನೆಲೆ ಬಹುಮಟ್ಟಿಗೆ ಕನ್ನಡದ ಹೊಸ ಬರಹಗಾರರ ಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ನಡೆಸಿದ ಚರ್ಚೆ. ಇಂಡಿಯಾದ ಸಾಮಾಜಿಕ ರಚನೆಯ ಒಳಗಡೆಯೇ ಆಕಾರ ಪಡೆದುಕೊಂಡ ಸಮಾಜವಾದೀ ಧೋರಣೆಯನ್ನು ಪ್ರಕಟಿಸಿದ ಯಜಮಾನ ಸಂಸ್ಕೃತಿಯ ಆಕ್ರಮಣಕಾರಿ ನಿಲುವಿನಿಂದಾಗಿ ಮೇಲಿನ ಮೂರು ಜನಸಮುದಾಯಗಳು ವಿವಿಧ ಕಾರಣಗಳಿಗಾಗಿ ವಿವಿಧ ಬಗೆಯ ಯಾತನೆಯನ್ನು ಅನುಭವಿಸಿವೆ. ಅನುಭವಿಸುತ್ತಲೂ ಇವೆ. ಈ ಜನ ಸಮುದಾಯಗಳು ತನ್ನ ಒಳಗೆ ಕಟ್ಟಿಕೊಂಡ ಅದಮ್ಯ ಕನಸುಗಳು, ಅಗಾಧವಾದ ಆಶಯಗಳು ಸಾಹಿತ್ಯದಲ್ಲಿ ತಣ್ಣನೆಯ ಆಕ್ರೋಶವಾಗಿ, ವಿಷಾದವಾಗಿ ಅಭಿವ್ಯಕ್ತಗೊಂಡಿವೆ.

ಮುಸ್ಲಿಂ ಸಂವೇದನೆ ಎಂದ ತಕ್ಷಣ ದಲಿತನೊಬ್ಬನ ಸಂದರ್ಭದಲ್ಲಿ ವಿಶ್ಲೇಷಣೆ-ಗೊಳಪಡುವ 'ಹಿಂದೂ' ಧರ್ಮದ ಹಾಗೆಯೇ ಮುಸ್ಲಿಮನ ಸಂದರ್ಭದಲ್ಲಿ 'ಇಸ್ಲಾಂ' ಧರ್ಮ ವಿಶ್ಲೇಷಣೆಗೊಳಪಡುತ್ತದೆ. ಇದಿಷ್ಟೇ ಆಗಿಬಿಟ್ಟಿದ್ದರೆ ದಲಿತ ಮತ್ತು ಮುಸ್ಲಿಂ ಸಂವೇದನೆಗಳನ್ನೂ ಹೀಗೆ ಪ್ರತ್ಯೇಕವಾಗಿ ಗುರುತಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಆದರೆ ಭಾರತೀಯ ಮುಸ್ಲಿಮನೊಬ್ಬನ ಸಂವೇದನೆಗಳನ್ನು ಅರಬ್ ರಾಷ್ಟ್ರಗಳ ಮುಸ್ಲಿಮನ ಸಂವೇದನೆಗಳ ಜೊತೆಯಲ್ಲಿಟ್ಟು ನೋಡುವುದು ಹೇಗೆ ಸಾಧ್ಯವಿಲ್ಲವೋ, ಹಾಗೆ ಹಿಂದೂ ಧರ್ಮದ ಒಳಗೆ ಚರ್ಚೆಗೊಳಪಡುವ 'ದಲಿತ'ನ ಸಂವೇದನೆಗಳನ್ನು ಇಸ್ಲಾಮ್‌ನ ಒಳಗೂ-ಹೊರಗೂ ಚಾಚಿಕೊಳ್ಳುವ ಮುಸ್ಲಿಮರ ಸಂವೇದನೆಗಳ ಜೊತೆಯಲ್ಲಿ ನೋಡುವುದು ಸಾಧ್ಯವಿಲ್ಲ. ಅಲ್ಲದೆ ಭಾರತೀಯ ಮುಸ್ಲಿಮನು ಎದುರಿಸಬಹುದಾದ ಪೂರ್ವಾಗ್ರಹಗಳು, ಅನುಮಾನ ಆತಂಕಗಳು ಅವನಿಗೆ ವಿಶಿಷ್ಟವಾದ ಭಿನ್ನ ನೆಲೆಯನ್ನೂ ರೂಪಿಸುತ್ತವೆ.

ಕ್ರಿ.ಶ.೭ನೆಯ ಶತಮಾನದಷ್ಟು ಹಿಂದೆಯೇ ಭಾರತಕ್ಕೆ ಮುಸ್ಲಿಮರ ಆಗಮನ-ವಾಯಿತು. ವ್ಯಾಪಾರಿಗಳ ಅಥವಾ ಸಾಮ್ರಾಜ್ಯಶಾಹಿಗಳ ಆಗಮನ ಮಾತ್ರ ಇದಾಗಿರದೆ ಭಿನ್ನ ಭಾಷೆ, ಮತ್ತು ವಿಶಿಷ್ಟ ಸಂಸ್ಕೃತಿಯ ರೂಪಗಳೊಂದಿಗೆ ಇಡೀ ಜನಾಂಗವೇ ಇಲ್ಲಿನ ಒಟ್ಟು ಪರಿಸರದೊಂದಿಗೆ ಬೆರೆತುಹೋಯಿತು. ಭಿನ್ನ ಧರ್ಮವೊಂದರ ಆಗಮನವನ್ನು ಭಾರತದ ಯಜಮಾನ ಸಂಸ್ಕೃತಿ ಅಸಹನೆಯಿಂದಲೂ, ಎಂದೂ ಸ್ಥಾವರವಾಗಬಯಸದ ಇಲ್ಲಿನ ಉಪಸಂಸ್ಕೃತಿಗಳು ಮುಗ್ಧ ಔದಾರ್ಯದಿಂದಲೊ ಕಂಡವು. ಅಸಹನೆ ಇದ್ದ

ಕಡೆಯಲ್ಲಿ ಸಂವಾದ ಸಾಧ್ಯವಾಗದೇ ಸಂಘರ್ಷ ಹಿಂಸೆಯನ್ನು ಆಶ್ರಯಿಸುತ್ತದೆ. ಇದು ಭಾರತದಲ್ಲಿ ಹಿಂದೂ-ಮುಸ್ಲಿಮ್ ಇಬ್ಬರನ್ನು ಒಳಗೊಂಡ ಭಕ್ತಿಪಂಥಕ್ಕೆ ಕಾರಣವಾಯಿತು. ಇದು ವಾಸ್ತವವಾಗಿ ಸ್ಥಾವರರೂಪಿಯಾದ 'ಧರ್ಮ'ವನ್ನು ದಾಟಿ ಜಂಗಮರೂಪಿಯಾದ 'ಧಾರ್ಮಿಕತೆಯನ್ನು ಕಟ್ಟಿಕೊಂಡ ರೋಮಾಂಚನಕಾರಿ ಚರಿತ್ರೆ. ಸ್ಥಳೀಯವಾದ ಹಿಂದೂ ಧರ್ಮ ಇಸ್ಲಾಂ ಪರಕೀಯವೆಂದು ಅದರ ಆಗಮನ ಹಿಂದೂ ಧರ್ಮದ ಬುನಾದಿಗೆ ದೊಡ್ಡ ಅಪಾಯವಿದೆಯೆಂದೂ ಭಾವಿಸಿತು.

ಮುಸ್ಲಿಮರೊಂದಿಗೆ ಭಾರತಕ್ಕೆ ಬಂದ ಅರಬ್ ಭಾಷೆ ಮತ್ತು ಅದರ ಲಿಪಿಕೂಡ ಪೂರ್ವಗ್ರಹಗಳನ್ನು ಸೃಷ್ಟಿಸಿಬಿಟ್ಟಿತು. ಭಾರತೀಯರು ಪೂರ್ವಮುಖ ಆರಾಧಕರಾದರೆ, ಮುಸ್ಲಿಮರು ಪಶ್ಚಿಮಮುಖಿ ಆರಾಧಕರು. ಭಾರತೀಯ ಭಾಷೆಯ ಬರವಣಿಗೆ ಮತ್ತು ಓದುವ ಕ್ರಮ ಎಡದಿಂದ ಬಲಕ್ಕೆ, ಆದರೆ ಮುಸ್ಲಿಂ ಭಾಷೆ ಇದಕ್ಕೆ ತದ್ವಿರುದ್ಧ. ಧಾರ್ಮಿಕವಾದ ವಿಶಿಷ್ಟ ಸಂವೇದನೆಗಳನ್ನು ಕೇವಲ ಅದರ ನಂಬಿಕೆಯ ನೆಲೆಯಲ್ಲಿ ನೋಡದೇ ಭಾಷೆಯೂ ಕೂಡ ಸಾಂಸ್ಕೃತಿಕ ಸಂವೇದನೆಗಳನ್ನು ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಸ್ವಾತಂತ್ರ್ಯ ಬರುವ ಮೊದಲೇ ಮುಸ್ಲಿಮರ ಬಗೆಗಿದ್ದ ಹಲವು ಬಗೆಯ ಕಟಕಿ, ವ್ಯಂಗ್ಯ ಹಿಂದೂ ಸಮುದಾಯದಲ್ಲಿ ನಿರಂತರವಾಗಿ ಮುಂದುವರೆಯಿತು. ಅದು ಕನ್ನಡ ಸಾಹಿತ್ಯದಲ್ಲಿಯೂ ಬೇರೆ ಬೇರೆ ರೂಪದಲ್ಲಿ ಕಾಣಿಸತೊಡಗಿತು. 'ಶಿಶುನಾಳ ಶರೀಫ'ರು ಅಧ್ಯಾತ್ಮದ ನಿಗೂಢ ತತ್ವಗಳನ್ನು ಪದವಾಗಿ ಹಾಡಿದಾಗ, ಸಂಭ್ರಮಪಟ್ಟವರು ಎಲ್ಲ ಸಮುದಾಯಕ್ಕೆ ಸೇರಿದವರು. ಶರೀಫರ ಕಾವ್ಯದಲ್ಲಿ ಮುಸ್ಲಿಮನೊಬ್ಬನ ವಿಶಿಷ್ಟ ಸಂವೇದನೆಯನ್ನು ಕಾಣಲಾಗದಿದ್ದರೂ 'ಧರ್ಮವನ್ನು ಮೀರಿದ ಧಾರ್ಮಿಕತೆ'ಯನ್ನಂತೂ ಗುರುತಿಸಬಹುದು.

ಕನ್ನಡದ ತುಂಬಾ ಮಹತ್ವದ ಲೇಖಕರಲ್ಲಿ ಕೂಡ ಮುಸ್ಲಿಂ ಪಾತ್ರಗಳ ಸೃಷ್ಟಿ ಅನನ್ಯವಾದದ್ದು ಎನಿಸುವುದಿಲ್ಲ. ಕನ್ನಡದ ಲೇಖಕರು ಬರೆದ ಸಾಹಿತ್ಯದಲ್ಲಿನ ಸಂವೇದನೆಗಳೂ, ಮುಸ್ಲಿಮೇತರರು ಬರೆದ ಸಾಹಿತ್ಯದಲ್ಲಿನ ಪಾತ್ರ ಸೃಷ್ಟಿಗಳೂ ಸಹಜವಾಗಿ ಭಿನ್ನವಾಗಿವೆ.

ಬಂಡಾಯ ಮತ್ತು ದಲಿತ ಸಾಹಿತ್ಯ ಚಳುವಳಿಯ ಪರಿಣಾಮವಾಗಿ ಕನ್ನಡದಲ್ಲಿ ವಿವಿಧ ನೆಲೆಗಳಿಂದ ಬಂದ ಜನಸಮುದಾಯಗಳು ತಂತಮ್ಮ ಸಂವೇದನೆಗಳನ್ನು ಪ್ರಕಟಪಡಿಸಿದವು. ಕನ್ನಡದ ಬಹುಮುಖಿ, ಸಂಸ್ಕೃತಿಯ ನಿಜನೆಲೆಗಳು ತನ್ನೆಲ್ಲ ವೈವಿಧ್ಯತೆಯನ್ನು ಉಳಿಸಿಕೊಂಡೇ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಡುವ ದನಿಯನ್ನು ಸ್ಥಾಪಿಸತೊಡಗಿದ್ದು ಆಗಲೇ. ಶತಮಾನಗಳಿಂದ ಅಕ್ಷರ ವಂಚಿತರಾಗಿ, ಅಕ್ಷರದಿಂದ ದೊರಕುವ ಎಲ್ಲ ಬಗೆಯ ಸವಲತ್ತುಗಳಿಂದ ದೂರವಾಗಿದ್ದ

ಜನಸಮುದಾಯಗಳು ಆ ದೀರ್ಘ ಇತಿಹಾಸದ ನೋವನ್ನೇ ಹಾಡಾಗಿಸುತ್ತಾ, ಹಾಡಿನ ಮೂಲಕವೇ ಪ್ರಶ್ನಿಸುವ ತಮ್ಮ ಅಸ್ತಿತ್ವವನ್ನು ಸ್ಥಿರಪಡಿಸಿಕೊಳ್ಳುವ ಪ್ರಯತ್ನಮಾಡಿದವು. ಬಂಡಾಯದ ಸಂದರ್ಭದಲ್ಲಿ ಮುಸ್ಲಿಮರು ತೊಡಗಿಸಿಕೊಂಡ ರೀತಿ ಮತ್ತವರ ಅಭಿವ್ಯಕ್ತಿ ಅನನ್ಯವಾದದ್ದು.

ಮುಸ್ಲಿಮ್ ಸಂವೇದನೆಗಳೆಂದರೆ ಅವು ಕೇವಲ ತಲಾಖ್, ಬಹುಪತ್ನಿತ್ವ, ಮಹರ್, ಖುಲಾಹ್, ಅಷ್ಟೇ ಎಂಬಂತೆ ಕೆಲವು ಲೇಖಕರು ಚಿತ್ರಿಸುತ್ತಾರೆ. ಆದರೆ ಆ ಸಮಾಜದ ಇನ್ನೊಂದು ಮುಖವು ಇದೆ ಎಂಬುದನ್ನು ಮರೆಯುತ್ತಾರೆ. ಈ ಸಮುದಾಯವು ನಿರುದ್ಯೋಗ, ಬಡತನ, ಅನಕ್ಷರತೆ, ಮೂಢನಂಬಿಕೆ ಮತ್ತು ಧಾರ್ಮಿಕ ಸಂಕೋಲೆಗಳಲ್ಲಿ ಸಿಲುಕಿದೆ. ಈ ಜನಾಂಗದ ರಾಷ್ಟ್ರೀಯತೆಯನ್ನು ಗುಮಾನಿಯಿಂದ ನೋಡುತ್ತಿರುವ ನೋವು ಒಂದು ಕಡೆಯಾದರೆ, ಮತ್ತೊಂದು ಕಡೆ ಕಾಡುವ ಅನಾಥಪ್ರಜ್ಞೆಯಿದೆ. ಆತಂಕದ ಉಸಿರುಗಟ್ಟಿಸುವ ರಾಜಕೀಯ ಕಾರ್ಯ ಒಂದು ಕಡೆಯಾದರೆ, ಮತ್ತೊಂದು ಕಡೆ ಪ್ರಗತಿಗೆ ಮಾರಕವಾದ ಕೋಮುವಾದಿ ನಿಲುವುಗಳಿವೆ. ಇಂತಹ ವಾಸ್ತವದ ಸತ್ಯಸಂಗತಿಗಳನ್ನು ಬಂಡಾಯದ ಮುಸ್ಲಿಂ ಬರಹಗಾರರು ಚಿತ್ರಿಸಿದ್ದಾರೆ. ಇವರು ಸಮಾಜದ ಸಿಹಿ–ಕಹಿ, ಅನುಭವಗಳನ್ನು ದಟ್ಟ ಸಂವೇದನೆಗಳನ್ನು ಕನ್ನಡ ಸಾಹಿತ್ಯ ಕಡಲಿಗೆ ತೊರೆಯಾಗಿ ಹರಿಸಿ, ಚಾರಿತ್ರಿಕ ಸೇತುವಾಗಿದ್ದಾರೆ.

ಮಧ್ಯಕಾಲೀನ ಭಾರತದಲ್ಲಿ ಮುಸ್ಲಿಂ ಅರಸರ ಕಾಲದಲ್ಲಿ ಕೃತಿಗಳು ರಚಿತ–ವಾದರೂ ಐತಿಹಾಸಿಕವಾದವು ಮತ್ತು ಧಾರ್ಮಿಕವಾದವುಗಳು. ಬಹುಸಂಖ್ಯಾತರೊಡನೆ ಅಲ್ಪಸಂಖ್ಯಾತರಾಗಿ ಬದುಕುತ್ತಿರುವ ತಮ್ಮ ಜನಾಂಗದ ಸಂವೇದನೆಯನ್ನು ಅವು ನಿಡದೇ ಹೋದವು. ಆದರೆ ಇಂದಿನ ಮುಸ್ಲಿಂ ಸಾಹಿತ್ಯ ತಮ್ಮ ಜನಾಂಗದೊಡನೆ ಮಾತನಾಡುವುದೇ ಸರಿಯಾಗಿದೆ. ತಮ್ಮ ಬದುಕಿನ ಚೌಕಟ್ಟನ್ನು ಮೀರಿ ನಿಂತ ಜನಾಂಗದ ನಿಷ್ಟ ಬರವಣಿಗೆಯನ್ನು ಒಪ್ಪಿಕೊಳ್ಳುತ್ತಿದೆ. ಇದು 'ಮುಸ್ಲಿಂ ಸಂವೇದನೆ'ಯ ಮುಖ್ಯಗುರಿ.

ದಲಿತ ಬಂಡಾಯ ಸಾಹಿತ್ಯ ಚಳುವಳಿಯೂ ಮಹಿಳೆಯರ ಸಂವೇದನೆಗಳು ಪ್ರಕಟವಾಗಲು ಒಂದು ವೇದಿಕೆಯಾದಂತೆ, ಕನ್ನಡ ನಾಡಿನ ಅನೇಕ ಪ್ರಗತಿಪರ ಮುಸ್ಲಿಮರೂ ಬರೆಯುವುದಕ್ಕೆ ಪ್ರೇರಣೆಯಾಯಿತೆನ್ನುವುದು ನಿಜವೇ. ಆದರೆ ಈಗ ಬರೆಯುತ್ತಿರುವ ಮುಖ್ಯ ಮುಸ್ಲಿಮ್ ಲೇಖಕರಲ್ಲಿ ಕರಾವಳಿ ನೆಲೆಯ ವಿಶಿಷ್ಟ ಹಾಗೆ ಭಿನ್ನ ಸಾಮಾಜಿಕ ಪರಿಸರದವರು. ಕಡಲು ಮತ್ತು ಕಡಲಾಚೆಯ ಅರಬ್ ದೇಶಗಳೊಂದಿಗೆ ನಡೆದ ವ್ಯಾವಹಾರಿಕ ಸಂಬಂಧಗಳು ಇವರ ಸಾಹಿತ್ಯದಲ್ಲಿ ಕಂಡುಬರುತ್ತವೆ. ಅರಬ್‌ನ ಮುಸ್ಲಿಮರು ಮತ್ತು ಅವರ ಪವಿತ್ರ ಗ್ರಂಥ ಖುರಾನ್. ಅವರ ಧಾರ್ಮಿಕ ನೀತಿ–ನಿಯಮಗಳು ಕನ್ನಡದ ಕರಾವಳಿ ನೆಲೆಯ ಮುಸ್ಲಿಮರನ್ನು ಸಹಜವಾಗಿ ಪ್ರಭಾವಿಸಿವೆ. ಅರಬ್ ಮೂಲದ ಆರ್ಥಿಕ ಸಂಪತ್ತು ಕನ್ನಡದ ಮುಗ್ಧ, ಮೂಢ, ಬಡ ಮುಸ್ಲಿಂ

ಮಹಿಳೆಯರನ್ನು ಕೇವಲ ಸರಕುಗಳಾಗಿ ನೋಡುವುದಿದೆ. ಇವರ ಸಾಹಿತ್ಯದಲ್ಲಿನ ಗಂಡಸರು ವ್ಯಾಪಾರಿ ಮನೋಧರ್ಮದವರಾದರೆ, ಮಹಿಳೆಯರು ಗಂಡಸರ 'ಚಪ್ಪಲಿ'ಯಂತೆ, ಕೆಲವೊಮ್ಮೆ ಕೇವಲ ಕತ್ತಲ ಕೋಣೆಯೊಳಗೆ, ಬುರ್ಖಾದೊಳಗೆ ನಲಗುವ ಸಜೀವ ಶವಗಳಾಗಿರುತ್ತಾರೆ. ಪುರುಷರು ಕಟ್ಟಿದ ಧರ್ಮ, ಮಹಿಳೆಯ ಸಂದರ್ಭದಲ್ಲಿ ಕಠೋರವಾಗುತ್ತಾ ಗಂಡಸರ ವಿಚಾರದಲ್ಲಿ ಅವನ ಅನುಕೂಲಕ್ಕೆ ತಕ್ಕಂತೆ ಶಿಥಿಲಗೊಳ್ಳುತ್ತಾ ಹೋಗುತ್ತದೆ. ಖುರಾನ್ ಗಂಡಿಗೆ ಸ್ವಾತಂತ್ರ್ಯವಾದರೆ, ಹೆಣ್ಣಿಗೆ ಅದೇ ಬಂಧನವಾಗುತ್ತದೆ.

ಮೇಲಿನ ಭಾವನೆಗಳಿಗಿಂತ ಭಿನ್ನವಾದ ಮುಸ್ಲಿಮರ ಬದುಕು ಮತ್ತು ಜೀವನ ಕ್ರಮಗಳು ಭಾರತದಲ್ಲಿವೆ. ಕರ್ನಾಟಕದಲ್ಲೇ ಉರ್ದು ಭಾಷೆಯ ಗಂಧ, ಗಾಳಿ ಗೊತ್ತಿಲ್ಲದ, ಕನ್ನಡವೇ ಅವರ ವೇದನೆ, ಸಂವೇದನೆಯಾಗಿರುವ ಲಕ್ಷಾಂತರ ಮುಸ್ಲಿಮರಿದ್ದಾರೆ. ಉತ್ತರ ಕರ್ನಾಟಕದ ಪ್ರತಿ ಹಳ್ಳಿಗಳಲ್ಲಿ ಕನ್ನಡದ ಸೊಗಡಿನ ಮುಸ್ಲಿಮರನ್ನು ಕಂಡರೆ ಇದೇ ಕರಾವಳಿಯ ಮುಸ್ಲಿಮರು ಮೂಗು ಮುರಿಯುತ್ತಾರೆ. ಹಳೇ ಮೈಸೂರಿನ ಮಂದಿಗೆ ಮುಸ್ಲಿಮನೊಬ್ಬ ಕನ್ನಡ ಬರೆದರೆ, ಓದಿದರೆ ಅದು ವಿಸ್ಮಯವಾಗಿ ತೋರುತ್ತದೆ. ಎಲ್ಲ ಧರ್ಮಗಳ ಹಾಗೆ ಭಾರತೀಯ 'ಇಸ್ಲಾಂ'ನಲ್ಲಿ ಕೂಡ ಅನೇಕ ಕಾರಣಗಳಿಗಾಗಿ ವಿವಿಧ ಪಂಗಡಗಳು ಹುಟ್ಟಿಕೊಂಡಿವೆ. ಷೇಕ್, ಪಠಾಣ್, ಸೈಯದ್, ಸುನ್ನಿ, ತಬಲೀಕ್ ಮೊದಲಾದ ಪಂಗಡಗಳು ಜಾಗತಿಕ ಮಟ್ಟದಲ್ಲಿಯೂ ಇದ್ದು, ಅವೆಲ್ಲಾ ತಮತಮಗೆ ಶ್ರೇಷ್ಠತೆಯ ಹಣೆ ಪಟ್ಟಿ ಹಂಚಿಕೊಂಡಿವೆ. ಪರಸ್ಪರ ಕೊಡುಕೊಳ್ಳುವ ಸಂಬಂಧವಿಲ್ಲದ ಈ ಪಂಗಡಗಳು ಪ್ರಾರ್ಥಿಸುವ, ಮಸೀದಿಗಳ ರಚನೆಯಲ್ಲಿಯೂ ವಿಶಿಷ್ಟತೆ ಹೊಂದಿವೆ. ಮದುವೆ, ಸಾವಿನಂತಹ ಸಂದರ್ಭಗಳಲ್ಲಿ ಈ ವಿಶಿಷ್ಟತೆ ಎದ್ದು ಕಾಣುತ್ತದೆ. ಇಷ್ಟಲ್ಲದೆ ಈ ಮೇಲಿನ ಪಂಗಡಗಳ ನಿರ್ಲಕ್ಷಕ್ಕೆ ಗುರಿಯಾಗಿ 'ನೆಲದಾಧಾರವಿಲ್ಲದ ಮುಗಿಲಾಸರೆ ಸಿಗದ' ಪುಡಿ ಜನಾಂಗಗಳೂ ಇಲ್ಲಿವೆ. ಪಿಂಜಾರ, ತೊಂಡೆ, ಚಪ್ಪರ ಬಂದ್, ದರವೇಶಿ ಮೊದಲಾದ ಜನಾಂಗಗಳ ಸಾಮಾಜಿಕ ನೋವು, ಹತಾಶೆ, ಅಭದ್ರತೆಗಳು ಇನ್ನೂ ಅಕ್ಷರ ಲೋಕಕ್ಕೆ ಅಪರಿಚಿತವಾಗೇ ಉಳಿದಿವೆ. ಹೀಗಿರುವಾಗ ಧರ್ಮಾಂಧರ ಭಾವತಿರೇಕವನ್ನೇ ಒಗ್ಗಟ್ಟು ಎನ್ನಬಹುದಾದರೆ ಅದು ಮುಸ್ಲಿಮರಲ್ಲಿ ಮಾತ್ರವಲ್ಲ. ಇತರ ಧರ್ಮಗಳಲ್ಲೂ ಇದ್ದೇ ಇರುತ್ತದೆ. ಇನ್ನೂ ಬುರ್ಖಾ ಹಾಕಲು ಸಾಧ್ಯವೇ ಇರದಂತಹ ಸಾಮಾಜಿಕ, ಆರ್ಥಿಕ ಪರಿಸರದಲ್ಲಿ ಉತ್ತರ ಕರ್ನಾಟಕದ ಹಳ್ಳಿಯ ಮುಸ್ಲಿಂ ಮಹಿಳೆಯರಿದ್ದಾರೆ. ಅಲ್ಲದೆ ಮುಸ್ಲಿಂ ಗಂಡಸನೊಬ್ಬ ೭ ಜನ ಹೆಂಡತಿಯರನ್ನು ಕಟ್ಟಿಕೊಳ್ಳುವ, ಹೆಂಡತಿ ಬೇಡ–ವೆನಿಸಿದಾಗ 'ತಲಾಖ್' ಹೇಳಿಬಿಡುವ ಸಾಮಾಜಿಕ, ಕೌಟುಂಬಿಕ ಸ್ವರೂಪ ಭಾರತೀಯ ಮುಸ್ಲಿಮರಲ್ಲಿಯೇ ವಿರಳವಾದುದು. 'ಅಲ್ಲಾ'ನನ್ನು ಪರಮೋಚ್ಚ ದೈವ ಎಂದು ಮೇಲಿನ ಪಂಗಡಗಳು ನಂಬುವುದು ನಿಜವಾದರೂ ಸಾಂದರ್ಭಿಕವಾಗಿ ಮೂಲಾಶ್ರಮದ

ಸಂವೇದನೆಯ ಫಲವಾಗಿ, ಕೊನೆಗೆ ಎಲ್ಲವನ್ನು ಮೀರಿದ ಮಾನವತೆಯ ಪರಿಣಾಮವಾಗಿ 'ಇತರೆ ದೈವಗಳ ಆರಾಧಕರೂ ಇದ್ದಾರೆ.[೧೪]

ಮುಸ್ಲಿಂ ಬರಹಗಾರರನೇಕರಿಗೆ ನಿಜಕ್ಕೂ ವೇದಿಕೆಯಾಗಿದ್ದು ಲಂಕೇಶ್ ಪತ್ರಿಕೆ, ಸಾರಾ, ಬಾನು ಮುಷ್ತಾಕ್, ಮುಮ್ತಾಜ್ ಅವರ ಕತೆ, ಕಾದಂಬರಿಗಳು ಏಕಕಾಲಕ್ಕೆ ಮುಸ್ಲಿಮರ ಹಾಗೂ ಮಹಿಳೆಯರ ಬದುಕನ್ನು ಕುರಿತು ಹೊಸಬಗೆಯ ಲೋಕದ ಪರಿಚಯವನ್ನು ಮಾಡಿಕೊಟ್ಟವು.

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಮಹಿಳಾ ಸಂವೇದನೆಯನ್ನು ಆ ಧರ್ಮದ ಮಹಿಳೆಯರು ಅನಾವರಣಗೊಳಿಸಿದಂತೆ ಆ ಧರ್ಮದ ಪುರುಷರು ಸಹ ಆ ಮಹಿಳೆಯುರ ಕುರಿತು ಸಾಹಿತ್ಯ ರಚಿಸಿದ್ದಾರೆ. ಅವರಲ್ಲಿ 'ಬೋಳುವಾರು ಮೊಹಮ್ಮದ್ ಕುಂಞ', ಫಕೀರ್ ಮಹಮ್ಮದ್ ಕಟ್ಪಾಡಿ, ಅಬ್ದುಲ್ ರಷೀದ್, ಬಿಎಂ.ರಷೀದ್ ಮೊದಲಾದವರ ಕತೆ, ಕಾದಂಬರಿಗಳು ಕೂಡ ಮುಸ್ಲಿಂ ಸಮಾಜದ ಒಳತುಡಿತ, ಶೋಷಣೆ, ಹೊಸತನಕ್ಕಾಗಿ ಹಂಬಲಿಸುವ ಮನಸ್ಸುಗಳ ಜೀವನಕ್ರಮಗಳನ್ನು ಪ್ರಕಟಿಸಿದವು. ಆದರೆ ಮುಸ್ಲಿಂ ಮಹಿಳೆಯ ದಟ್ಟ ಅನುಭವಗಳನ್ನು ಅತ್ಯಂತ ಸರಳ ಶೈಲಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಒಪ್ಪಿಸಿದವರು ಮಹಿಳೆಯರೇ ಆಗಿದ್ದಾರೆ. ಇವರು ಬಂಡಾಯ ಮೂಲದಿಂದ ಬಂದವರೆಂದು ಇಲ್ಲಿ ಗಮನಾರ್ಹವಾದ ಅಂಶವಾಗಿದೆ.

ತಾನು ಬದುಕುವ ರೀತಿಯೂ ತನ್ನ ಸಂಸ್ಕೃತಿಗೆ ಅನುಗುಣವಾಗಿ ಮತೀಯ ವಿಚಾರಗಳ ಪ್ರಭಾವವದಲ್ಲಿ ಇರುವವರೆಗೆ ಅದು ತನಗೆ ಸಂಬಂಧಿಸಿದ ವಿಶೇಷ ಅಭಿವ್ಯಕ್ತಿ ವಿಧಾನವನ್ನು ರೂಢಿಸಿಕೊಳ್ಳುತ್ತದೆ. ಅದನ್ನು 'ಮುಸ್ಲಿಂ ಸಂವೇದನೆ'ಯೆಂದು ಕರೆಯುವುದು ಆ ಜನಾಂಗದ ಸಾಂಸ್ಕೃತಿಕ ಇಚ್ಛಾಶಕ್ತಿಗೆ ಸಲ್ಲಿಸಿದ ಗೌರವವಾಗುತ್ತದೆ, "ಇಸ್ಲಾಂ ಮತದ ಸಂಪ್ರದಾಯಗಳು, ಕುರಾನ್ ಪವಿತ್ರಗ್ರಂಥದ ಆಶಯಗಳು ಇವುಗಳಿಗೆ ಹೊರತಾದ ಪ್ರಭಾವದಲ್ಲಿ ಸೃಷ್ಟಿಯಾಗುವ ಸ್ಥಳೀಯ ನಂಬಿಕೆಗಳು, ಆಚಾರಗಳು, ಮುಸ್ಲಿಂ ಸಂವೇದನೆಯಾಗುತ್ತಿವೆ" ಎಂದು 'ಕೋದಂಡರಾಮ ಎನ್.ಕೆ.ರವರು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಮೇಲಿನ ಎಲ್ಲಾ ಅಂಶಗಳು ಮುಸ್ಲಿಂ ಸಂವೇದನೆಯನ್ನು ಪ್ರತಿಬಿಂಬಿಸುತ್ತವೆ.

ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ:

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆಗಳು ಚಿತ್ರಿತವಾದದ್ದು ಇತ್ತೀಚೆಗೆ, ಮುಸ್ಲಿಂ ಜನಾಂಗದ ನೋವು, ನಲಿವು, ನಂಬಿಕೆ, ಆಚರಣೆ, ಧರ್ಮ, ಶ್ರದ್ಧೆ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಕಾಲ-ಕಾಲದ ಸ್ಥಿತ್ಯಂತರಗಳು, ಆರ್ಥಿಕ, ರಾಜಕೀಯ ಸ್ಥಿತಿ-

೧೪. ಮುಸ್ಲಿಂ ಸಂವೇದನೆಗಳು : ಕೆಲವು ಅನುಭವಗಳು, ದಾದಪೀರ ನವಿಲೇಹಾಳ, ಪು. 103.

ಗತಿಗಳು ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾದದ್ದು ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಮಾತ್ರ ಕನ್ನಡ ಸಾಹಿತ್ಯ ಲೋಕಕ್ಕೆ ಅಪರಿಚಿತವಾದ ಮುಸ್ಲಿಂ ಬದುಕನ್ನು ಬಂಡಾಯ ಸಂದರ್ಭದಲ್ಲಿ ಬಂದ ಮುಸ್ಲಿಂ ಬರಹಗಾರರು ಅನಾವರಣಗೊಳಿಸಿದಂತೆ ಈ ಹಿಂದಿನ ಬಹುತೇಕ ಬರಹಗಾರರು ಅನಾವರಣಗೊಳಿಸಲಿಲ್ಲ. ಇದು ಮುಸ್ಲಿಂ ಸಂವೇದನೆಗಳ ಹೊಸ ನೀರನ್ನು ಕನ್ನಡ ಸಾಹಿತ್ಯ ಸಾಗರಕ್ಕೆ ಹರಿಸಿತು.

ಸಮಾಜದ ಎಲ್ಲ ವರ್ಗ, ಜಾತಿ, ಉಪಜಾತಿ, ಜನಾಂಗಗಳ ಬದುಕುಗಳು ಎಲ್ಲ ಕಾಲದಲ್ಲೋ ಎಲ್ಲರಿಗೂ ತೆರೆದುಕೊಳ್ಳುವುದಿಲ್ಲ. ಅದು ವ್ಯಕ್ತಿಯ ಮೂಲಕ ಸಾಗಿ, ಸಮಾಜದಲ್ಲಿ ಪ್ರವೇಶಿಸಬೇಕಾಗುತ್ತದೆ. ಹೊಸ ಸಾಹಿತ್ಯದ ಮಾದರಿಗಳು, ಸಂವೇದನೆ–ಗಳು ಉದ್ಭವವಾಗುವುದು ನಿರಂತರ ಸಾಂಸ್ಕೃತಿಕ ಚಿಂತನ ಮಂಥನಗಳಿಂದ ಮಾತ್ರ. ಆಗ ಅವು ಸಂವೇದನೆಗಳಾಗಿ ತೀವ್ರಗೊಂಡು ಅಭಿವ್ಯಕ್ತಿಪಡೆಯುತ್ತವೆ. ಈ ಮಧ್ಯೆ ಅನೇಕ ಸಾಂಸ್ಕೃತಿಕ ಸಂಘರ್ಷಗಳೂ, ಸಂಧಾನಗಳೂ ಏರ್ಪಡುತ್ತವೆ. ಸಮಾಜದ ಅತ್ಯಂತ ನಿರ್ಲಕ್ಷಿತ ಘಟಕಗಳಾದ ದಲಿತ, ಮಹಿಳೆ ಮತ್ತು ಮುಸ್ಲಿಂ ಜನಾಂಗದ ವಾಸ್ತವವನ್ನು ತೆರೆದಿಡುವ ಸಾಂಸ್ಕೃತಿಕ ಸಂದರ್ಭ ಒದಗಿಬಂದದ್ದು ಸುಯೋಗವೇ ಸರಿ.

ಕನ್ನಡ ಸಾಹಿತ್ಯದ ದಾಖಲೆಯಿಂದ ದೂರ ಉಳಿದಿದ್ದ ಸಂಸ್ಕೃತಿಗಳು ಅದರ ಸಂವೇದನೆಗಳೂ ಈ ಸಂದರ್ಭದಲ್ಲಿ ದಾಖಲಾದವು. ಶೂದ್ರರಾಗಿ, ಅಸ್ಪೃಶ್ಯರಾಗಿ, ಉಳಿದುಕೊಂಡಿದ್ದ ದಲಿತರಿಗೆ ಬಾಯಿಬಂದ ಕಾಲವಿದು. ಚರಿತ್ರೆಯುದ್ದಕ್ಕೂ ಮೌನವಾಗಿದ್ದ ಮಹಿಳೆಯರಿಗೆ ಧ್ವನಿ ಬಂದದ್ದು ಇದೇ ಕಾಲದಲ್ಲಿ. ಮತ್ತು ಸ್ಥಳೀಯ ಸಾಂಸ್ಕೃತಿಕ ಬದುಕಿನ ಸಂವೇದನೆಗಳು ಅದರಲ್ಲೂ ವಿಶೇಷವಾಗಿ ಮುಸ್ಲಿಂ ಸಂವೇದನೆಗಳು ದಾಖಲಾದ ಚರಿತ್ರಾರ್ಹ ಘಟ್ಟವಿದು. ಇಂತಹ ನಿರ್ಲಕ್ಷಿತ ಸಮಾಜದ ಸಾಂಸ್ಕೃತಿಕ ಸಂವೇದನೆಗಳನ್ನು ದಾಖಲಿಸುವಾಗ ಲೇಖಕನಿಗೆ ವಿಶೇಷ ಕಾಳಜಿಗಳು ಮತ್ತು ಜವಾಬ್ದಾರಿಗಳಿರಬೇಕಾದದು ಸಹಜ. ಜೊತೆಗೆ ಹೊಸದನ್ನು ಸ್ವೀಕರಿಸುವಾಗ ಸಮಾಜ ಒಡ್ಡುವ ಸವಾಲುಗಳನ್ನು ಎದುರಿಸಿ ನಿಲ್ಲುವ ಎದೆಗಾರಿಕೆಯಿರಬೇಕಾದುದು ಅವಶ್ಯಕ.

ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಹಿಂದೆಂದೂ ಕಾಣದಷ್ಟು ಮುಸ್ಲಿಂ ಸಮುದಾಯದ ಕನ್ನಡ ಲೇಖಕರು ಬೆಳಕಿಗೆ ಬಂದರು. ಆಗ ಶ್ರೇಣಿಕೃತ ಸಮಾಜದ ಹಿನ್ನೆಲೆಯಲ್ಲಿ ಎದುರಿಸುತ್ತಿರುವ ಸೃಜನಶೀಲತೆಯ ಬಿಕ್ಕಟ್ಟುಗಳು ಮುಸ್ಲಿಂ ಬರಹಗಾರರಿಗೂ ಎದುರಾಯಿತು. ಇಂಡಿಯಾದ ಚಾರಿತ್ರಿಕ ವಿಷಯಗಳಿಂದಾಗಿ ಈ ಬಿಕ್ಕಟ್ಟು ಮುಸ್ಲಿಂ ಲೇಖಕರಿಗೆ ತೀವ್ರವಾದಂತೆ ದಲಿತರಿಗೆ ತೀವ್ರವಾಗಲಿಲ್ಲ. ಯಾವಾಗ ಬಂಡಾಯ ಸಂದರ್ಭದಲ್ಲಿ ಬಂದ ದಲಿತ ಲೇಖಕರು ಬ್ರಾಹ್ಮಣ್ಯದ ವಿರುದ್ಧ ತಮ್ಮ ರಚನೆಗಳನ್ನು ರಚಿಸತೊಡಗಿದರೋ ಅದೇ ಸಂದರ್ಭದಲ್ಲಿ ಮುಸ್ಲಿಂ ಲೇಖಕರು ಮೈಚಳಿ ಬಿಟ್ಟು

ಮಾತನಾಡಲು ಪ್ರಾರಂಭಿಸಿದರು. ತಮ್ಮ ಜನಾಂಗದಲ್ಲಿರುವ ಧಾರ್ಮಿಕ ನಂಬಿಕೆ, ಆಚರಣೆ, ಖುರಾನ್ ವ್ಯಾಖ್ಯಾನಗಳನ್ನು ಕನ್ನಡ ಲೋಕಕ್ಕೆ ಪರಿಚಯಿಸಿದರು.

ಬಂಡಾಯ ಸಂದರ್ಭದಲ್ಲಿ ಬೆಳಕಿಗೆ ಬಂದ ಮುಸ್ಲಿಂ ಸಂವೇದನೆಗಳು ಅಪಾರ. ಅವುಗಳಲ್ಲಿ ಸಮಾಜದ ಬಡತನ, ಹಸಿವು, ನೋವು, ನಲಿವುಗಳ ಜೊತೆಗೆ ಮಹಿಳಾ ಸಮಸ್ಯೆ, ಧಾರ್ಮಿಕ ಕಟ್ಟುಪಾಡು ಮುಖ್ಯವಾಗಿವೆ. ಮುಸ್ಲಿಂ ಸಂವೇದನೆಗಳೆಂದರೆ ಅವು ಕೇವಲ ತಲಾಖ್, ಬಹುಪತ್ನಿತ್ವ, ಮಹರ್ ಅಷ್ಟೆ ಎಂಬಂತೆ ಕೆಲವು ಲೇಖಕರು ಚಿತ್ರಿಸುತ್ತಾರೆ. ಆದರೆ ಆ ಸಮುದಾಯದ ಇನ್ನೊಂದು ಮುಖವು ಇದೆ ಎಂಬುದನ್ನು ಮರೆಯುತ್ತಾರೆ. ಈ ಸಮುದಾಯವು ನಿರುದ್ಯೋಗ, ಬಡತನ, ಅನಕ್ಷರತೆ, ಮೂಢನಂಬಿಕೆ, ಮತ್ತು ಧಾರ್ಮಿಕ ಸಂಕೋಲೆಗಳಲ್ಲಿ ಸಿಲುಕಿದೆ. ಬಂಡಾಯದ ಮುಸ್ಲಿಂ ಬರಹಗಾರರು ಇಂತಹ ಮಹತ್ವದ ಮಗ್ಗಲುಗಳ ದಟ್ಟ ಸಂವೇದನೆಗಳನ್ನು ಕನ್ನಡ ಸಾಹಿತ್ಯದ ಕಡಲಿಗೆ ಹರಿಸಿದ್ದಾರೆ.[೧೫]

ಮುಸ್ಲಿಂ ಮೂಲದ ಸಾಹಿತಿಗಳಿಗೆ ಕನ್ನಡ ಸಮಾಜ ಒಪ್ಪಿಕೊಂಡಿದೆ. ಆದರೆ ಅದೇ ಸಂದರ್ಭದಲ್ಲಿ ಮೂಲಭೂತ ಮುಸ್ಲಿಂ ಸಮಾಜ ಅವರಿಗಿನ್ನೂ ಒಪ್ಪಿಕೊಂಡಿಲ್ಲ. ''ರಹಮತ್ ತರೀಕೆರೆ''ಯವರು ತಮ್ಮ ''ಮೂಲಭೂತವಾದ ಮತ್ತು ಪ್ರಗತಿಪರ ಕಷ್ಟಗಳು'' ಲೇಖನದಲ್ಲಿ ''ನಾನು ಮತ್ತು ನನ್ನ ಗೆಳೆಯರು'' ಸಾರಾ ಅವರ ಪ್ರಕರಣದಲ್ಲಿ 'ಮುಂಗಾರು' ಪತ್ರಿಕೆಯಲ್ಲಿ ಆವೇಶದಲ್ಲಿ ಚರ್ಚೆ ನಡೆಸಿ, ಪ್ರಗತಿಪರರ ಕಣ್ಮಣಿಗಳಾದೆವು. ಆದರೆ ತಿರುಗಿ ನೋಡಿದರೆ ನಮ್ಮ ಜೊತೆ ಸಮುದಾಯವೇ ಇರಲಿಲ್ಲ'', ಮುಸ್ಲಿಂ ಲೇಖಕನೊಬ್ಬ ಆ ಸಮಾಜದಲ್ಲಿ ಒಂದು ಶಕ್ತಿಯಾಗಿ ಮಾರ್ಪಾಡಾಗದೆ, ಜನಶಕ್ತಿಯನ್ನು ಕ್ರೋಢೀಕರಿಸದೇ ಮೂಲಭೂತವಾದವನ್ನು ವಿರೋಧಿಸಲು ಮುಂದಾದರೆ ಅವನು ಈ ರೀತಿ ಸಮಾಜದಿಂದ ಬಹಿಷ್ಕೃತನಾಗುತ್ತಾನೆ. ಅವನ ಪ್ರಗತಿಪರ ಆಶಯಗಳಿಂದ ಮೂಲಭೂತವಾದಿಗಳು ಅವನಿಗೆ ಧರ್ಮದ ಶತ್ರು ಎಂದು ಸುಲಭವಾಗಿ ತೀರ್ಮಾನಿಸಿಬಿಡುತ್ತಾರೆ. ಆಗ ಆ ಲೇಖಕ ತನ್ನ ಜನಸಮುದಾಯದಿಂದ ಬಹಿಷ್ಕೃತನಾಗಿ ಮಾನಸಿಕ ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಇದೇ ಕಾರಣಕ್ಕಾಗಿಯೇ 'ಸಾರಾ', 'ಬಾನು ಮುಷ್ತಾಕ್', 'ನಜ್ಮಾಭಾಂಗಿ', ಮಹಾರಾಷ್ಟ್ರದ 'ಅಸ್ಗರಾಲಿ' ಮುಂತಾದವರು ಹಲ್ಲೆಗೊಳಗಾಗಿದ್ದಾರೆ.

ವಿಶೇಷವೆಂದರೆ ಮುಸ್ಲಿಂ ಲೇಖಕರಾದ ಕರೀಂಖಾನ್, ನಿಸಾರ್ ಅಹ್ಮದ್, ಅಕ್ಬರಲಿ, ಸನದಿ, ಅಬ್ದುಲ್ ಮಜೀದ್‌ಖಾನ್, ದಸ್ತಗೀರ್ ಮುಂತಾದವರು ಕನ್ನಡದಲ್ಲಿ ಸಾಹಿತ್ಯ ರಚಿಸಿದರಾದರೋ, ಇವರ ರಚನೆಗಳು ಮುಸ್ಲಿಂ ಸಮಾಜದ ಸಂವೇದನೆಗಳಾಗಿರಲಿಲ್ಲ.

---

೧೫. ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ (ಲೇಖನ), ಕೆ.ಷರೀಫಾ, ಪು. ೧೧೫.

ಆದರೆ ನಂತರದಲ್ಲಿ ಬಂದ 'ಮುಮ್ತಾಜ್ ಬೇಗಂ', 'ರಂಜಾನ ದರ್ಗಾ', 'ರಹಮತ್ ತರೀಕೆರೆ' 'ಬಿ.ಎಂ.ಹನೀಫ', 'ಕೆ.ಷರೀಫ್', ರಶೀದ್, ಬಷೀರ್, ಡಿ.ಬಿ.ರಜಿಯಾ ಇವರ ಬರಹಗಳಲ್ಲಿ ಮುಸ್ಲಿಂ ಸಮಾಜದ ಸಂವೇದನೆಗಳು ದಾಖಲಾದವು. ನಂತರ ಕನ್ನಡ ಸಾಹಿತ್ಯದಲ್ಲಿ ಮೊತ್ತಮೊದಲ ಬಾರಿಗೆ ದಟ್ಟವಾದ ಮುಸ್ಲಿಂ ಸಂವೇದನೆಗಳನ್ನು ದಾಖಲಿಸಿದವರು ಫಕೀರ್ ಮಹಮ್ಮದ್ ಕಟ್ಪಾಡಿ, ಬೋಳುವಾರು ಮಹಮ್ಮದ್ ಕುಂಞ, ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್ ಮುಂತಾದವರು.

ರಂಜಾನ್ ದರ್ಗಾ, ರಹಮತ್ ತರೀಕೆರೆ, ಹನೀಫ್, ರಶೀದ್, ಬಷೀರ್, ಶರೀಫ, ಬಾಬಾಜಾನ್, ಅತ್ತಾರ್, ನಜೀರ್, ಚಂದಾವರ್, ರಂತಹ ಅನೇಕ ಲೇಖಕರು ವೈಚಾರಿಕ ನೆಲೆಯಲ್ಲಿ ಲೇಖನ, ವಿಮರ್ಶೆ, ಕಾವ್ಯವನ್ನು ರಚಿಸಿದರಲ್ಲದೆ, ಜಾತಿಧರ್ಮಗಳ ಚೌಕಟ್ಟನ್ನು ಮೀರಿ ಬರೆದರು.

ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆಗಳನ್ನು ಗುರುತಿಸುವಾಗ ಎರಡು ಪ್ರಶ್ನೆಗಳು ಎದುರಾಗುತ್ತವೆ. ಕೇವಲ ಮುಸ್ಲಿಮರು ದಾಖಲಿಸಿದ್ದೇ ಮುಸ್ಲಿಂ ಸಂವೇದನೆಯೋ ಅಥವಾ ಇಸ್ಲಾಂ ಸಂಸ್ಕೃತಿಯ ಬಗ್ಗೆ ಮುಸ್ಲಿಮೇತರರು ಬರೆದದ್ದೂ ಮುಸ್ಲಿಂ ಸಂವೇದನೆಯೋ ಎಂಬ ಪ್ರಶ್ನೆ ಮೂಡುತ್ತದೆ. ಇಲ್ಲಿ ಮುಸ್ಲಿಂ ಸಮಾಜದ ಜೀವಂತ, ಸಾಂದ್ರವಾದ, ದಟ್ಟ ಅನುಭವಗಳನ್ನು ಯಾರೇ ತಿಳಿಸಿರಲಿ ಅದು ಆ ಸಮಾಜದ ಚಿತ್ರಣವಾಗುತ್ತದೆ. ಆದರೂ ಆ ಸಮಾಜದಲ್ಲೇ ಹುಟ್ಟಿ ಬೆಳೆದು, ಅನುಭವಿಸಿ ಬರೆದದ್ದಕ್ಕೋ, ದೂರದಿಂದ ನೋಡಿ, ಕೇಳಿ, ಓದಿ ಬರೆದದ್ದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಕಂಡುಂಡು ಬರೆದ ದಟ್ಟ ಅನುಭವಗಳು ಹೆಚ್ಚು ಜೀವಂತ, ಹೆಚ್ಚು ಸಾಚಾ ಅನುಭವ-ಗಳಾಗಿರುತ್ತವೆ.[೧೬]

--

೧೬. ಮುಸ್ಲಿಂ ಸಂವೇದನೆಗಳು : ಕೆಲವು ಅನುಮಾನಗಳು (ಲೇಖನ) ದಾದಾಪೀರ್ ನವಿಲೇಹಾಳ, ಪು. ೧೧೫-೧೧೬.

ಅಧ್ಯಾಯ : ಮೂರು

ಸಣ್ಣ ಕಥೆಯ ಪ್ರಕಾರದಲ್ಲಿ ಮಹಿಳಾ ಸಂವೇದನೆ

ಜಗತ್ತಿನಾದ್ಯಂತ ಎಲ್ಲಾ ಕಾಲಗಳಲ್ಲೂ ಶೋಷಣೆಯ ವಿರುದ್ಧದ ವಾದಗಳು ನಿರಂತರವಾಗಿ ನಡೆದೇ ಇವೆ. ಶೋಷಣೆಯ ರೂಪಗಳು ಹಲವು ರೀತಿಯವು. ವರ್ಗ ತಾರತಮ್ಯದ ಶೋಷಣೆ, ಸವರ್ಣೀಯರು ಅವರ್ಣೀಯರ ಮೇಲೆ ನಡೆಸಿದ ಹಲವು ಶೋಷಣೆಗಳಿಗೆ ಉದಾಹರಣೆಗಳಿವೆ. ಆದರೆ ಅದಕ್ಕಿಂತಲೂ ಸ್ತ್ರೀಯರ ಮೇಲೆ ಪುರುಷ ದೌರ್ಜನ್ಯ, ಶೋಷಣೆ ನಡೆಯುತ್ತಲೇ ಬಂದಿದೆ. ಸ್ತ್ರೀಯರಿಗೆ ಹಲವು ರೀತಿಯ ಅವಕಾಶಗಳು ದೊರೆತಿರುವ ಇಂದಿನ ವಿಜ್ಞಾನ ಯುಗದಲ್ಲೊ ಅವಳು ಇನ್ನೂ ಶೋಷಣೆಯಿಂದ ಮುಕ್ತವಾಗಿಲ್ಲ.

ಪ್ರಕೃತಿಯಲ್ಲಿರುವ ಲಿಂಗಗಳು ಸ್ತ್ರೀ ಮತ್ತು ಪುರುಷ ಲಿಂಗಗಳು. ಆದಿಕಾಲದಲ್ಲಿ ಸ್ತ್ರೀವಾದ ಸಮಾಜವನ್ನು ಪರುಷ ತಮ್ಮ ದೈಹಿಕ ಬಲದ ಕಾರಣದಿಂದ ತನ್ನ ದೌರ್ಜನ್ಯವನ್ನು ಆರಂಭಿಸಿದ, ಪುರುಷನಷ್ಟೇ ಸಮಾನವಾಗಿ ಸ್ತ್ರೀಯರು ದುಡಿದರೂ ಅವಳ ತಾಯ್ತನದ ಕಾರಣದಿಂದ ಅವಳನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಲಾರಂಭಿಸಿದ. ದೇವರು, ಧರ್ಮಗಳ ಹೆಸರಿನಲ್ಲಿ ತನ್ನನ್ನು ಮೇಲಾಗಿಸಿಕೊಂಡು ಹೆಣ್ಣನ್ನು ತನ್ನ ದಾಸಿ, ಸೇವಕಿ, ಎಂಬಂತೆ ಕಾಣುತ್ತಾ ಬಂದು ಮುಂದೆ ಅವಳಿಗೆ ಹೆಣ್ಣಾಗಿ ಹುಟ್ಟಿದುದೇ ತಪ್ಪು ಎಂಬ ಯೋಚನೆ, ಜಿಗುಪ್ಸೆಗಳು ಹುಟ್ಟುವಂತೆ ಮಾಡಿದೆ.

ಭಾರತದಲ್ಲಿ 'ಮನು'ವಿನಿಂದ ರಚಿತವಾದ ನಿಯಮಗಳಿಂದ (ಸ್ಮೃತಿ) ಅವಳು ಸ್ವಾತಂತ್ರ್ಯದಿಂದ ವಂಚಿತವಾಗುವಂತಾಯಿತು. ''ನಸ್ತ್ರೀ ಸ್ವತಂತ್ರ್ಯ ಮರ್ಹತಿ'' ಎಂದು ಹೇಳಿ ಅವಳಿಗೆ ಎಲ್ಲಾ ರೀತಿಯಿಂದಲೂ ಶೋಷಣೆ ಮಾಡಲಾಯಿತು. ವೇದಗಳ ರಚನೆಯ ಮೊದಲೂ ಮತ್ತು ವೇದಗಳು ರಚನೆಗೊಂಡಾಗಲೂ ಮಹಿಳೆಯರಿಗೆ ಹೆಚ್ಚಿನ ಸ್ಥಾನಮಾನಗಳಿದ್ದವು. ಪುರುಷರಂತೆ ಸ್ತ್ರೀಯರು ಯಜ್ಞ, ಯಾಗಾದಿಗಳಲ್ಲಿ ಧಾರ್ಮಿಕ ಸಂಸ್ಕಾರಗಳಲ್ಲಿ ಪಾಲ್ಗೊಳ್ಳುತ್ತಿದ್ದಳು. ಅವಳಿಗೆ ಶಿಕ್ಷಣ ಒದಗಿಸಲಾಗುತ್ತಿತ್ತು. ಆದ್ದರಿಂದಲೇ ಗಾರ್ಗೆ, ಮೈತ್ರೇಯಿ, ಅಪಾಲಾ ಲೋಪಮುದ್ರ ಮೊದಲಾದವರ ಹೆಸರುಗಳು ಇತಿಹಾಸದಲ್ಲಿ ಮುಖ್ಯವಾಗಿ ಕಾಣುತ್ತವೆ. ಆದರೆ ಉತ್ತರ ವೇದದ ನಂತರದ ಕಾಲದಲ್ಲಿ ಇವಳ ಸ್ಥಾನಮಾನಗಳು ತಗ್ಗಲಾರಂಭಿಸಿದವು. ವರದಕ್ಷಿಣೆ, ಸತಿಪದ್ಧತಿ, ಬಾಲ್ಯವಿವಾಹಗಳು ರೂಢಿಗೆ ಬಂದು ಅವಳು ಕತ್ತಲೆಯ ಬಾಳಿಗೆ ತಳ್ಳಲ್ಪಟ್ಟಳು. ಇದರಿಂದಾಗಿ ಏಕಪತ್ನಿ ಪದ್ಧತಿಯೂ ಪುರುಷನ ಎದುರಿಗೆ ಮೌಲ್ಯ ಕಳೆದುಕೊಂಡು ಬಹುಪತ್ನಿತ್ವ ರೂಢಿಗೆ ಬಂದಿತು.

ಬೌದ್ಧಧರ್ಮ, ಜೈನಧರ್ಮಗಳಲ್ಲಿ ಸ್ತ್ರೀಯನ್ನು ಮನುಷ್ಯೆಯಾಗಿ ಬಾಳಲು ಅವಕಾಶಗಳು ಕೊಂಚಮಟ್ಟಿಗೆ ದೊರೆತವು. ಮಧ್ಯಕಾಲದ ವೇಳೆಗೆ ಸ್ತ್ರೀಯರ ಬದುಕಿಗೆ ದೊಡ್ಡ ಗ್ರಹಣದ ಕಾಲವಾಯಿತು. ಇದು ಹಿಂದೂ ಧರ್ಮದ ಮಹಿಳೆಯ ದಯನೀಯ ಸ್ಥಿತಿಯ ಕಾಲ. ಇನ್ನೊಂದೆಡೆ ಈ ವೇಳೆಯಲ್ಲಿ ಭಾರತಕ್ಕೆ ಮುಸ್ಲಿಮರ ಆಗಮನವಾಗಿ ಅವರಿಂದ ಸ್ತ್ರೀಯರನ್ನು ರಕ್ಷಿಸಲು ಮನೆಯೊಳಗೆ ಸೀಮಿತಗೊಳಿಸಿದರು. ಅವಳ ದೇಹ ರಕ್ಷಣೆಗಾಗಿ "ಬುರ್ಖಾ" ಹಾಕುವ ಪದ್ಧತಿ ರೂಢಿಗೊಂಡಿತು. ಅವಳು ಈ ಕತ್ತಲೆಯ ಗರ್ಭದಿಂದ ಹೊರಬಂದದ್ದು ಕ್ರಿ.ಶ.೧೨ನೇ ಶತಮಾನದ ವಚನ ಸಾಹಿತ್ಯದ ಸಂದರ್ಭದಲ್ಲಿ. ಬಸವಣ್ಣ, ಅಲ್ಲಮಪ್ರಭು ಮೊದಲಾದ ಶರಣರು ಅನುಭವ ಮಂಟಪದಲ್ಲಿ ಸ್ತ್ರೀಯರಿಗೆ ಸಮಾನತೆ ನೀಡಿ ಮಾನಸಿಕ ನೆಮ್ಮದಿ ಮತ್ತು ವೈಚಾರಿಕ ಚಿಂತನೆಗಳನ್ನು ಬಿತ್ತರಿಸಿದರು. ಇದಕ್ಕೆ ಉದಾಹರಣೆಯೆಂದರೆ ಅಕ್ಕಮಹಾದೇವಿ ಪುರುಷರ ವಿರುದ್ಧ ಸಿಡಿದೆದ್ದ ಕ್ರಾಂತಿಕಾರಿ ಮಹಿಳೆ, ಕರ್ನಾಟಕದಲ್ಲಿ ಇದರ ಪ್ರಭಾವ ನಮ್ಮ ಸ್ತ್ರೀವಾದಿ ಸಾಹಿತ್ಯಕ್ಕೆ ಪ್ರೇರಣೆ ನೀಡುವಂತಾಯಿತು.

೧೬ನೇ ಶತಮಾನದಲ್ಲಿ ದಾಸರು ಸ್ತ್ರೀಯರಿಗೆ ಹಲವು ರೀತಿಯ ಸ್ಥಾನಮಾನಗಳನ್ನು ನೀಡಿದ್ದರು. ೧೮-೧೯ನೇ ಶತಮಾನದಲ್ಲಿ ಬ್ರಿಟಿಷರ ಆಗಮನದಿಂದ ಹಲವು ಸುಧಾರಣೆಗಳು ಆದವು. ಇದರಿಂದ ಭಾರತೀಯ ಸ್ತ್ರೀಯರ ಸ್ಥಾನಮಾನಗಳು ಸ್ವಲ್ಪಮಟ್ಟಿಗೆ ಬದಲಾವಣೆಯಾಗ ತೊಡಗಿದವು. ವಿವಾಹ, ಸತಿ ಪದ್ಧತಿ, ವಿಧವಾ ವಿವಾಹ ಮೊದಲಾದವುಗಳಿಗೆ ಸಂಬಂಧಿಸಿದಂತೆ ಚಳುವಳಿಗಳು ಆರಂಭವಾದವು. ೨೦ನೇ ಶತಮಾನದಲ್ಲಿ ಸ್ತ್ರೀಯರು ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.

ಹೀಗೆ ಪಾಶ್ಚಾತ್ಯ ಪ್ರಭಾವದಿಂದಾಗಿ ಸಾಹಿತ್ಯದಲ್ಲೂ ಹಲವು ರೀತಿಯ ಬದಲಾವಣೆಗಳಾಗಿ, ಪಾಶ್ಚಾತ್ಯ ಸ್ತ್ರೀವಾದದ ಕಲ್ಪನೆಯ ತತ್ವಗಳು ಭಾರತಕ್ಕೆ ಕಾಲಿರಿಸಿದವು. ಇದರಿಂದ ಸ್ತ್ರೀಯರು ತಮ್ಮ ಬದುಕಿಗೆ ತಾವೇ ತಮ್ಮದೇ ಆದ ಅರ್ಥ ಹುಡುಕುವ ಪ್ರಯತ್ನದಲ್ಲಿ ತೊಡಗಿದರು.

ಕನ್ನಡ ಸಾಹಿತ್ಯವು ಬೆಳೆಯುತ್ತಿರುವ ವೃಕ್ಷದಂತೆ ಪ್ರಾಚೀನ ಕಾಲದಿಂದಲೂ ಬೇರೆಬೇರೆ ಭಾಷೆಗಳ ಪ್ರಭಾವಕ್ಕೆ ಒಳಗಾಗಿ ಹಲವು ಪ್ರಕಾರಗಳನ್ನು ತನ್ನೊಳಗು ಮಾಡಿಕೊಂಡು ಬಂದಿದೆ. ಪ್ರಾರಂಭದಲ್ಲಿ ಸಂಸ್ಕೃತದ ಪ್ರಭಾವವನ್ನು ಗುರುತಿಸಿದರೆ, ಆಧುನಿಕ ಕಾಲದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವವನ್ನು ಗುರುತಿಸಬಹುದು. ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಕಥೆ, ನಾಟಕ, ಕವನ, ಪ್ರಬಂಧ, ಭಾವಗೀತೆ, ಪ್ರಹಸನ ಹೀಗೆ ಹಲವಾರು ಸಾಹಿತ್ಯಕ ಶಾಖೆಗಳು ಸೇರಿಸಿಕೊಂಡು ಕನ್ನಡ ಸಾಹಿತ್ಯವು ಸಮೃದ್ಧವಾಗಿ ಬೆಳೆಯುತ್ತಿದೆ. ಇದರಿಂದಾಗಿ ಕನ್ನಡದಲ್ಲಿ ಕ್ರಮವಾಗಿ ೪ ಸಾಹಿತ್ಯಕ ಪ್ರಕಾರಗಳು ಹುಟ್ಟಿಕೊಂಡವು.

೧) ನವೋದಯ

೨) ಪ್ರಗತಿಶೀಲ

೩) ನವ್ಯ

೪) ದಲಿತ ಬಂಡಾಯ

ಹೀಗೆ ಈ ಮೇಲಿನ ೪ ಪ್ರಕಾರಗಳು ಕನ್ನಡ ಸಾಹಿತ್ಯವನ್ನು ಉತ್ತುಂಗ ಶಿಖರಕ್ಕೇರಿಸುವಲ್ಲಿ ದಾರಿದೀಪವಾದವು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ ಸಾಹಿತ್ಯವು ಐತಿಹಾಸಿಕವಾಗಿ ಮುಖ್ಯವಾದದ್ದು. ಬ್ರಿಟಿಷರ ವಸಾಹತುಶಾಹಿ ಆಗಮನದಿಂದ ಉಂಟಾದ ಹಲವು ಪ್ರತಿಕ್ರಿಯೆಗಳಲ್ಲಿ ನವೋದಯ ಸಾಹಿತ್ಯದ ಅವಿರ್ಭಾವವೂ ಒಂದಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಘಟಿಸಿದ ಈ ಸಂದರ್ಭ ಮೊದಲಿಗೆ ಬಂಗಾಳಿ, ಹಿಂದಿ, ಮರಾಠಿಯ ನಂತರ ಕನ್ನಡಕ್ಕೆ ಪ್ರವೇಶಿಸಿತು. ವರ್ಣ, ವರ್ಗ, ಲಿಂಗಾಧಾರಿತ ಭಾರತೀಯ ಶ್ರೇಣೀಕೃತ ಸಮಾಜವು ವಸಾಹತುಷಾಹಿ ಸಂಪರ್ಕಕ್ಕೆ ಬಂದಾಗ ಜಡತ್ವವನ್ನು ಕೊಡವಿಕೊಂಡು ಎಚ್ಚರಗೊಂಡಿತು. ಇದರಿಂದ ಪರಂಪರಾಗತವಾಗಿ ಬಂದಿದ್ದ ಸಾಂಪ್ರದಾಯಿಕ ಊಳಿಗ–ಮಾನ್ಯ ವಿಘಟನೆ ಆರಂಭವಾಯಿತು. ಒಂದು ರೀತಿಯ ಹೊಸ ಎಚ್ಚರ ಮಾನವತಾ–ವಾದದ ಅಲೆಯೊಂದು ಉದ್ಭವಿಸಿ ಜೀವನ ಪರದೃಷ್ಟಿ ಬೆಳೆಯಿತು. ಅಧ್ಯಾತ್ಮಕ್ಕೆ ಇದ್ದ ಒತ್ತು ಕಡಿಮೆಯಾಯಿತು. ಸ್ತ್ರೀಯರನ್ನು ಕುರಿತ ಚಳುವಳಿಗಳು ಹುಟ್ಟಿಕೊಂಡವು. ಸ್ತ್ರೀಯರ ಕುರಿತಾದ ಸಾಮಾಜಿಕ ಮೌಲ್ಯಗಳನ್ನು ಪ್ರಶ್ನಿಸುವ ಯತ್ನ ಆರಂಭವಾಯಿತು.

ಆರಂಭದ ಕಥೆ, ಕಾದಂಬರಿ, ಕವನ, ನಾಟಕಗಳಲ್ಲಿ ಸ್ತ್ರೀಪಾತ್ರಗಳೇ ಪ್ರಧಾನ–ವಾಗಿದ್ದವು. ಸಾಹಿತ್ಯವು ಹಲವು ಬಗೆಯಲ್ಲಿ ಸ್ತ್ರೀಪರವಾದಂತಹ ನಿಲುವುಗಳನ್ನು ತಳೆದಿದ್ದರು. ಆದರೆ ಸ್ತ್ರೀಯರು ತಮ್ಮ ಬಗ್ಗೆ ತಾವೇ ಬರೆದುಕೊಂಡದ್ದು ಕಡಿಮೆ. ಮಹಿಳೆಯರ ಕೊಡುಗೆ ಕಡಿಮೆಯಾದರೂ ಮೌಲ್ವಿಕವಾದ ಕಥಾಸಾಹಿತ್ಯವನ್ನು ನವೋದಯಕ್ಕೆ ನೀಡಿರುವುದು ಗಮನಾರ್ಹ.

ಈ ಶತಮಾನದ ಮೊದಲ ದಶಕದಲ್ಲೇ ಬರೆಯಲು ತೊಡಗಿದ್ದ ಆರಂಭದ ಬರಹಗಾರ್ತಿಯರಲ್ಲಿ ಮುಖ್ಯರೆನಿಸಿಕೊಂಡವರು ನಂಜನಗೂಡಿನ 'ತಿರುಮಲಾಂಬ' ಮತ್ತು ಬೆಂಗಳೂರಿನ "ಆರ್.ಕಲ್ಯಾಣಮ್ಮ" ಚಾರಿತ್ರಿಕವಾಗಿ ಮತ್ತು ವ್ಯಕ್ತಿಗತ ಪ್ರತಿಭೆ ಕನ್ನಡ ಕಥಾ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆಯಬಲ್ಲ ಅರ್ಹ ಲೇಖಕಿಯಾಗಿರುವವರು 'ಕೊಡಗಿನ ಗೌರಮ್ಮ', ಶಾಲೆಗಳಿಗೆ ಹೋಗಿ ಅಭ್ಯಾಸಮಾಡಿದ, ವಿದ್ಯಾವಂತೆಯಾದ ಇವರು ಸಣ್ಣ ವಯಸ್ಸಿನಲ್ಲಿಯೇ ತಮ್ಮ ಸಾಹಿತ್ಯಾಭಿವ್ಯಕ್ತಿಗೆ ಸಣ್ಣಕಥೆಗಳ ರೂಪವನ್ನು ಆರಿಸಿಕೊಂಡರು. ಅವರ ಕಥೆಗಳಲ್ಲಿ ಮುಖ್ಯವಾಗಿ ಕಾಣುವುದು ಸುತ್ತಲಿನ ಸಮಾಜದ ಅನುಭವಕ್ಕೆ

ಸಮೀಪವಾದ ಜಾತಿಗಳ ತರುಣ–ತರುಣಿಯರ ಮುಗ್ಧಪ್ರೇಮ ವಿವಾಹದ ಹಲವಾರು ಕನಸುಗಳು ಪ್ರೇಮದ ಹೆಸರಿನಲ್ಲಿ ಎದುರಿಸಬೇಕಾದ, ವಿಶೇಷವಾಗಿ ಬ್ರಾಹ್ಮಣ ತರುಣಿಯರ ವಿವಾಹಕ್ಕೆ ಸಂಬಂಧಪಟ್ಟ ಹತ್ತು ಹಲವಾರು ಮುಖಗಳು ಮತ್ತು ಸುಖದ ಅನುಭವಗಳು, ಇವುಗಳ ಸುತ್ತ ವ್ಯಾಪಿಸಿಕೊಂಡಿದೆ. "ಈ ಎಲ್ಲಾ ಕಥೆಗಳಲ್ಲೂ ಒಂದು ರೀತಿಯ ಸ್ತ್ರೀಯರ ಪರವಾದ ನಿಲುವು ನೆಲೆಗಟ್ಟಿದೆ. ಈ ಕಥೆಗಳು ಎತ್ತುವ ಪ್ರಶ್ನೆಗಳು ಮತ್ತು ಸಮಸ್ಯೆಗಳು ಹೊಸದಲ್ಲದೆ ಹೋದರೂ ಗೌರಮ್ಮ ಅನ್ವೇಷಿಸಿಕೊಂಡ ಕಲಾತ್ಮಕ ರೂಪಗಳಿಂದಾಗಿ ಇವು ವಿಶಿಷ್ಟವೆನಿಸುತ್ತವೆ. ವಿಚಾರದ ಹೊರೆಯಿಂದ ಬಳಲದೆ ವೈಚಾರಿಕತೆಯನ್ನು ಮೆರೆಯುತ್ತವೆ. "ಒಂದು ಚಿತ್ರ", "ಮರದ ಗೊಂಬೆ", "ಅಪರಾಧಿ ಯಾರು?", "ಪ್ರಾಯಶ್ಚಿತ", 'ಸಂನ್ಯಾಸಿ ರತ್ನ" ಕಥೆಗಳು ಗಂಡು–ಹೆಣ್ಣಿನ ಸಂಬಂಧವನ್ನು ಹೆಚ್ಚು ವ್ಯಾಪಕವಾಗಿಸುತ್ತವೆ."[೧೭] ಲಿಂಗ ಅಸಮಾನತೆಯನ್ನು ಹೆಚ್ಚು ನಿಖರವಾಗಿ ಮತ್ತು ಕಲಾತ್ಮಕವಾಗಿ ಅಭಿವ್ಯಕ್ತಿಪಡಿಸಿದವರು ಇವರು. ಇವರ ಮೊದಲ ಕಥೆ "ಪುನರ್ವಿವಾಹ"ದಲ್ಲಿ ವಿಧುರನೊಬ್ಬನ ಮಡದಿಯು ಸತ್ತು ಇನ್ನು ೬ ತಿಂಗಳಾಗದಿದ್ದರೂ ತಾನು ಮೋಹಿಸಿದ ಹುಡುಗಿಯನ್ನು ಮದುವೆ ಯಾಗಲೂ ಇಷ್ಟಪಡುವುದು. ಆದರೆ ಆ ಹುಡುಗಿ ವಿಧವೆಯೆಂದು ತಿಳಿದಾಗ ಅವಳನ್ನು ಮದುವೆಯಾಗಲೂ ಒಪ್ಪದಿರುವುದು ಚಿತ್ರಿತವಾಗಿದೆ. ಇಲ್ಲಿನ 'ರಾಜಿ' ಕನ್ನಡ ಕಥೆಗಳ ಮೊದಲ ಪಾತ್ರವಾದರೂ ಗಟ್ಟಿ ಪಾತ್ರವಾಗಿ ಮೂಡಿದ್ದಾಳೆ.

ಉತ್ತರ ಕರ್ನಾಟಕದ ಮೊದಲ ಕಥೆಗಾರ್ತಿ ಎಂಬ ಕೀರ್ತಿ ಪಾತ್ರರಾದ "ಶ್ರೀಮತಿ ಶ್ಯಾಮಲಾದೇವಿ ಬೆಳಗಾಂವ್‌ಕಾರ್" ನವೋದಯ ಕಥಾಸಾಹಿತ್ಯ ಸಂದರ್ಭದಲ್ಲಿ ಅಪರೂಪದ ಹೆಸರು. ಇವರದು ಹಿಂದಿಗಿಂತ ಭಿನ್ನವಾದ, ವೈವಿಧ್ಯವಾದ ಕಥಾವಸ್ತು–ವನ್ನು ಆಯ್ದುಕೊಂಡ ವಿಶೇಷತೆ ಎನಿಸಿದೆ. ಶ್ಯಾಮಲಾರವರು ವಿವಿಧ ಜಾತಿಯ ಹಾಗೂ ವರ್ಗಗಳ ಜನರ ಜೀವನದ ಅನುಭವಗಳ ಒಳನೋಟಗಳನ್ನು ನೀಡುತ್ತಾರೆ. ದುಡಿಯುವ ಶ್ರಮ ಜೀವಿಗಳ ವರ್ಗ ತಂದೆ, ತಾಯಿಗಳಿಂದಲೇ ವೇಶ್ಯಾವೃತ್ತಿಗೆ ದೂಡಲ್ಪಟ್ಟವರು. ಒಲ್ಲದ ಮನಸ್ಸಿನಿಂದ ಮದುವೆಯಾಗಿ ನೋವಿನಿಂದ ನರಳುವವರು. ವಿವಾಹದ ಪಾವಿತ್ರ್ಯತೆಯನ್ನು ಪ್ರಶ್ನಿಸಬಲ್ಲವರು. ವಿವಾಹೇತರ ಮತ್ತು ವಿವಾಹ ಪೂರ್ವ ಸಂಬಂಧಗಳಲ್ಲಿ ಲೈಂಗಿಕತೆಯ ಸಂಬಂಧವನ್ನು ಹೊಂದಿ ನೋವು ತಿಂದವರು. ಹೀಗೆ ಹಲವು ಮುಖದ ಮಹಿಳಾ ಜಗತ್ತು ಇವರ ಕತೆಗಳಲ್ಲಿದೆ.

ಲೈಂಗಿಕ ಸಮಸ್ಯೆಯ ಹಲವಾರು ಸಾಮಾಜಿಕ ಅಂಶಗಳು 'ಶ್ಯಾಮಲಾ'ರವರ ಕಥೆಯ ಮುಖ್ಯ ಕೇಂದ್ರಗಳಾಗಿವೆ. "ಕಂತಿಯ ದೇಶಾಂತರ" ಕಥೆಯಲ್ಲಿ ಕಂತಿ ಪ್ರತಿಕೂಲ ಸಾಮಾಜಿಕ ಪರಿಸರದಲ್ಲೋ ತನ್ನ ಜೀವನವನ್ನು ತನ್ನ ದುಡಿಮೆಯಿಂದಲೇ ರೂಪಿಸಿ–

---

೧೭. **ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ,** ನವೋದಯ ಸಾಹಿತ್ಯದಲ್ಲಿ ಸಾಂಸ್ಕೃತಿಕ ವಿಕಾಸ ಮತ್ತು ಸ್ತ್ರೀ, ಪು. ೧೩೪–೧೩೫

ಕೊಳ್ಳುವುದು ಆ ದುಡಿಮೆಯ ಮಹತ್ತಿನಿಂದಲೇ ಅವಳ ವ್ಯಕ್ತಿತ್ವಕ್ಕೊಂದು ಅರ್ಥ ಬರುವುದೆಂಬ ನಂಬಿಕೆ ಇವರ ಕಥೆಯ ಪಾತ್ರಗಳ ಜೀವನ ಸಿದ್ಧಾಂತ ಎಂದರೆ ತಪ್ಪಾಗಲಾರದು.

ಪ್ರಗತಿಶೀಲ ಸಾಹಿತ್ಯದಲ್ಲಿ ಸ್ತ್ರೀಯರ ಮತ್ತು ಸಮಾಜದ ಕೆಳಗಿನ ಸ್ತರದ ಜನರ ಬದುಕು ಕಥೆಯ ವಸ್ತುವಾಯಿತು. ಇದು ಕನ್ನಡ ಸಾಹಿತ್ಯದಲ್ಲಿ ಮೊದಲೊ ಸಾಮಾಜಿಕ ಕಾಳಜಿಯನ್ನು ತನ್ನ ಉದ್ದೇಶವನ್ನಾಗಿಸಿಕೊಂಡ ಚಳುವಳಿ. ಆ ಸಮಯದಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಂತಹ ಲೇಖಕಿಯರು ಸಾಮಾಜಿಕ ಅರಿವನ್ನು ಮೂಲ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದರು. ಹೆಚ್.ವಿ.ಸಾವಿತ್ರಮ್ಮ, ತ್ರಿವೇಣಿ, ಅನುಪಮಾ ನಿರಂಜನ ಅವರು ಕಥೆ, ಕಾದಂಬರಿಗಳೆರೆಡರಲ್ಲೂ ಸ್ತ್ರೀ ಮತ್ತು ಪುರುಷ ಸಂಬಂಧಗಳು, ಪುರುಷ ಪ್ರಧಾನ ಸಮಾಜದೊಳಗೆ ತಳೆಯುವ ವಿಷಮ ಸ್ವರೂಪಗಳತ್ತ ಮುಖ-ಮಾಡುತ್ತಾರೆ.

ಪ್ರಗತಿಶೀಲ ಕತೆಗಳಲ್ಲಿ ಸಾವಿತ್ರಮ್ಮ ಮುಖ್ಯರೆನಿಸುತ್ತಾರೆ. 'ನಿರಾಶ್ರಿತೆ', 'ಪ್ರತೀಕ್ಷೆ', 'ಮರುಮದುವೆ', 'ಲಕ್ಷ್ಮೀ' ಇವರ ಕಥಾ ಸಂಕಲನಗಳಾಗಿವೆ. ಸಮಕಾಲೀನ ಸಮಾಜದ ಬದುಕಿನ ವಸ್ತು ಈ ಕಥೆಗಳಲ್ಲಿದ್ದು ಕೌಟುಂಬಿಕ ಪ್ರಪಂಚವೇ ಇದ್ದರೂ ಸ್ತ್ರೀಯರ ನೆಲೆಯಿಂದ ಮದುವೆ, ಸ್ತ್ರೀ ಪುರುಷ ಸಂಬಂಧಗಳ ಪ್ರಚಲಿತ ಸ್ವರೂಪಗಳು ಓದುಗರ ಸೂಕ್ಷ್ಮ ದೃಷ್ಟಿಗೆ ತಿಳಿಯುತ್ತದೆ.

'ತ್ರಿವೇಣಿ'ಯವರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸ ಅಲೆಯನ್ನು ಎಬ್ಬಿಸಿದವರು. "ಹೆಂಡತಿಯ ಹೆಸರು", "ಎರಡು ಕನಸುಗಳು", 'ಸಮಸ್ಯೆಯ ಮಗು' ಇವರು ರಚಿಸಿದ ಕಥಾಸಂಕಲನಗಳು. ಇವರ ಸ್ತ್ರೀ ಪಾತ್ರಗಳು ಮಾನಸಿಕ ಸಹಾನೂಭೂತಿಯ ಮೂಲಕ ಗೃಹೀತವಾಗಿವೆ. ಹೆಣ್ಣಿಗೆ ಸ್ವಾತಂತ್ರ್ಯದ ಆಸೆಯಿದ್ದರೂ ಅವುಗಳನ್ನೂ ಹತ್ತಿಕ್ಕುತ್ತಿರುವುದರಿಂದ ಬದುಕು ಕಡೆಗಣಿಸಲ್ಪಟ್ಟಿರುವ ಬಗೆಯ ಚಿಂತನೆ ಇಲ್ಲಿ ಎದ್ದುಕಾಣುತ್ತದೆ.

"ಅನುಪಮಾ" ಅವರು ಕೂಡ ವಿಶೇಷವಾಗಿ ಸಾಧನೆಮಾಡಿದ ಲೇಖಕಿ-ಯಾಗಿದ್ದಾರೆ. ಅವರ ಕತೆಗಳು ಸಮಾಜದ ವರ್ಗ, ಜಾತಿ, ಲಿಂಗಾಧಾರಿತ ವೈಷಮ್ಯ-ಗಳನ್ನು ಮೂಲ ವಸ್ತುವನ್ನಾಗಿಸಿಕೊಂಡಿವೆ. "ಮಣ್ಣಿನ ದಿಬ್ಬ", "ಆ ಮೂರು ಮನೆಗಳು", "ರೂವಾರಿಯ ಲಕ್ಷ್ಮೀ", "ಮಣ್ಣು", "ಚಕ್ರಗಳು" ಮೊದಲಾದ ಕಥೆಗಳಲ್ಲಿ ಬಡವರ ರೈತರ ಕೂಲಿಕಾರ್ಮಿಕರ, ದಲಿತರ ಮತ್ತು ಸ್ತ್ರೀಯರ ಪರವಾದ ನಿಲುವು ಸಹಾನೂಭೂತಿ ಇದೆ. ಸ್ತ್ರೀ-ಪುರುಷರ ಸಂಬಂಧ ಸಮಾಜದ ವಿವಿಧ ಸ್ತರಗಳಲ್ಲಿ ವಿವಾಹ, ಕುಟುಂಬ, ದುಡಿಮೆಗಳ ನೆಲೆಗಳಲ್ಲಿ ಆಯಾಯ ಸ್ತರದಲ್ಲಿ ಪರಸ್ಪರ ಅವಲಂಬಿತವಾದವು ಎಂಬುದನ್ನು ಅನುಪಮಾ ಗುರುತಿಸುತ್ತಾರೆ.

ಆಧುನಿಕ ಕನ್ನಡ ಸಾಹಿತ್ಯ ಪಂಥಗಳಾದ ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯದಲ್ಲಿ ಹೆಣ್ಣು/ಮಹಿಳೆಯ ಬಗೆಗಿನ ಕಾಳಜಿಯಿಂದ ಕಾದಂಬರಿಕಾರರು ಸಾಹಿತಿಗಳು, ಸ್ತ್ರೀ–ಸಾಹಿತಿಗಳಿಂದ ಹಲವು ಕೃತಿಗಳು ರಚನೆಯಾಗಿವೆ. ಮತ್ತು ಸ್ತ್ರೀ–ವಾದಿ ಸಾಹಿತ್ಯ–ವೆನಿಸುವಂತಿವೆ. ಆದರೆ ನಂತರ ಬಂದ ನವ್ಯಸಾಹಿತಿಗಳು ಹೆಣ್ಣು ಪುರುಷನಂತೆ ಸ್ವತಂತ್ರ ಪ್ರತಿಭೆ ಉಳ್ಳವಳು; ವ್ಯಕ್ತಿತ್ವ ಹೊಂದಿರುವವಳು ಎಂಬುದನ್ನು ಮರೆತು, ಅವಳನ್ನು ಲೈಂಗಿಕ ಉಪಭೋಗದ ವಸ್ತು ಎಂಬಂತೆ ಭಾವಿಸಿರುವುದನ್ನು ಕಾಣಬಹುದು. ನವ್ಯದ ಕಥೆಗಳ ನಾಯಕರು ಅಸ್ವಸ್ಥರು, ದ್ವಂದ್ವ ಮನೋಭಾವದವರು, ದುರ್ಬಲ ವ್ಯಕ್ತಿತ್ವದವರು ಆಗಿದ್ದರೂ, ಹೆಣ್ಣು ಮಾತ್ರ ಅವರಿಂದ ದೂರವೇ ಆದಳು. ಆದುದರಿಂದ ಈ ಘಟ್ಟದಲ್ಲಿ ಬರೆದ ಲೇಖಕಿಯರ ಸಂಖ್ಯೆ ತುಂಬಾ ಕಡಿಮೆ. ಅವರಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವವರು "ರಾಜಲಕ್ಷ್ಮೀ ಎನ್. ರಾವ್", ಮತ್ತು "ವೀಣಾ ಶಾಂತೇಶ್ವರ" ಆಗಿದ್ದಾರೆ.

'ರಾಜಲಕ್ಷ್ಮೀ'ಯವರ ಕತೆಗಳಲ್ಲಿ ಸ್ವತಂತ್ರ ವಿಚಾರಶೀಲತೆ ಎದ್ದು ಕಾಣುತ್ತದೆ. ನವ್ಯ ಚಳವಳಿಯ ಆರಂಭದ ಹಂತದಲ್ಲಿ ಬರೆದರು. ಇವರಿಗೆ ನವೋದಯದ ಪ್ರಭಾವವು ಆಗಿದೆ.

ನವ್ಯ ಚಳುವಳಿ ತೀವ್ರವಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ಎಲ್ಲರ ಗಮನಸೆಳೆದವರು ವೀಣಾ ಶಾಂತೇಶ್ವರ. ಇವರು ನವ್ಯದ ಉಳಿದ ಲೇಖಕರು, ಕಾಣಿಸಿದ ಸ್ತ್ರೀ–ಪಾತ್ರಗಳಿಗೆ ವಿರುದ್ಧವಾದ ಮನೋಧರ್ಮದ ಪಾತ್ರಗಳನ್ನು ಸೃಷ್ಟಿಸಿದರು. ಇಲ್ಲಿನ ಸ್ತ್ರೀಯರು ಆಧುನಿಕ ದೃಷ್ಟಿಯಲ್ಲಿ ಚಿಂತಿಸುವವರು. ಸ್ತ್ರೀಯರಿಗೆ ಆಯ್ಕೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಸಮಾನತೆ, ಎಲ್ಲಾ ಕ್ಷೇತ್ರಗಳಲ್ಲಿ ಬೇಕೆಂಬ ನಿಲುವನ್ನು ತಳೆದವರು.

ಕರ್ನಾಟಕದ ಸಾಹಿತ್ಯ ಚಳುವಳಿಗಳಲ್ಲಿ ದಲಿತ ಬಂಡಾಯ ಸಾಹಿತ್ಯ ಚಳುವಳಿ'ಯಲ್ಲಿ ಹಲವು ಜನ ಲೇಖಕಿಯರು ನಾಟಕ, ಕಾವ್ಯ, ಕಥೆ, ಕಾದಂಬರಿಗಳಲ್ಲಿ ತಮ್ಮ ನೋವನ್ನು ವ್ಯಕ್ತಪಡಿಸುತ್ತಾ, ಸಮಾನತೆಗಾಗಿ ಪ್ರಶ್ನಿಸುವ ಸಂಪ್ರದಾಯವನ್ನು ಧಿಕ್ಕರಿಸುವ ಹಲವು ಉದ್ದೇಶಗಳನ್ನು ಹೊತ್ತಿರುವುದು ಕಂಡುಬರುತ್ತವೆ. ಈ ಸಂದರ್ಭದಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿರುವ ಸಂಖ್ಯೆ ಅಧಿಕವಾಗಿದೆ.

ನವೋದಯ ಸಾಹಿತ್ಯದಲ್ಲಿ ಸ್ತ್ರೀ–ತಾಯಿ, ನವ್ಯದಲ್ಲಿ ಭೋಗವಸ್ತು, ಪ್ರಗತಿಶೀಲ ಮತ್ತು ದಲಿತ–ಬಂಡಾಯ ಸಾಹಿತ್ಯಗಳಲ್ಲಿ ಇವಳು ಶೋಷಿತಳು, ಜಮೀನ್ದಾರರ, ಮೇಲಾಧಿಕಾರಿಯ ಗಂಡನ ಅತ್ಯಾಚಾರಕ್ಕೆ ಒಳಗಾದವಳು.[೧೮] ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀಯು ದಲಿತರಿಗಿಂತಲೂ ದಲಿತಳಾಗಿ ತೀರಾ ಅಸಹಾಯಕ ಸ್ಥಿತಿ–ಯಲ್ಲಿದ್ದಾಳೆ. ಇನ್ನೂ ದಲಿತ ಸಮಾಜದಲ್ಲಿ ಸ್ತ್ರೀಯ ಸ್ಥಿತಿ ಇನ್ನೂ ಹದಗೆಟ್ಟಿದ್ದು ಎಲ್ಲರೂ

---

೧೮. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕ.ಸಾ.ಅ. ಪು. ೨೩೩.

ಅವಳನ್ನು ಕೀಳಾಗಿ ನೋಡುವವರೆ. ಅವಳು ಧರ್ಮದ ಬಗೆಗಿನ ಅಜ್ಞಾನ, ಅಂಧಶ್ರದ್ಧೆ ಮತ್ತು ಅನಕ್ಷರತೆಗಳ ಆಗರವಾಗಿದ್ದು, ಅವಳ ವಿಮೋಚನೆಗೆ ದಲಿತ ಹೆಣ್ಣು ಮಕ್ಕಳು ಮುಂದಾಗಿ ಸ್ತ್ರೀ-ವಿಮೋಚನಾ ಸಾಹಿತ್ಯ ರಚಿಸುತ್ತಿದ್ದಾರೆ. ಅವರಲ್ಲಿ ಸುಕನ್ಯಾ ಮಾರುತಿ, ಬಿ.ಟಿ.ಲಲಿತಾನಾಯಕ್, ಗೀತಾ ನಾಗಭೂಷಣ್, ಶಶಿಕಲಾ ವಸ್ತ್ರದಾ, ಮಾಲತಿ ಪಟ್ಟಣಶೆಟ್ಟಿ, ಸ.ಉಷಾವೈದೇಹಿ, ವಿಜಯಾದಬ್ಬೆ, ಸಾರಾ ಅಬೂಬಕ್ಕರ್, ಭಾನು ಮುಷ್ತಾಕ್ ಮುಂತಾದವರು. ಇವರ ಕೃತಿಗಳಲ್ಲಿ ಸಂಸ್ಕೃತಿಯ ನವೀಕರಣ, ಪುನರ್ ಮೌಲ್ಯೀಕರಣ-ವನ್ನು ಕಾಣಬಹುದು. ನೊಂದ ಮಹಿಳೆಯರ ಹೋರಾಟದ ಪ್ರತಿನಿಧಿಗಳು ಇಲ್ಲಿಯ ನಾಯಕಿಯರು.

ಕನ್ನಡದಲ್ಲಿ ೭೦ರ ದಶಕದಲ್ಲಿ ಮಹಿಳಾ ಸಾಹಿತ್ಯ ಪ್ರತ್ಯೇಕ ಅಸ್ತಿತ್ವ ಸ್ಥಾಪಿಸಿ ಬೆಳೆಯಲು ಸಜ್ಜುಗೊಂಡಿದ್ದು ಕನ್ನಡ ಸಾಹಿತ್ಯದ ಹೊಸಹಾದಿ. ಅದು ಈಗ ನಾವು ತುಳಿಯುತ್ತಿರುವ ಹಾದಿ ಯಜಮಾನ/ಪುರುಷ ಸಮಾಜದ ವ್ಯವಸ್ಥೆಯನ್ನು ವಿರೋಧಿಸುತ್ತಾ ಸ್ತ್ರೀಯ ಸ್ಥಿತಿಗತಿಗೆ ಪುರುಷನೇ ಕಾರಣವೆಂಬ ಅನಿಸಿಕೆ ಇದ್ದದ್ದು ಈಗ ಬದಲಾಗುತ್ತಾ ಸಾಗಿತು. ಅದನ್ನು ಕುರಿತು "ಆರ್ಕೆ" ಅವರು ಹೀಗೆ ಹೇಳಿದ್ದಾರೆ. "ಶೋಷಣೆಯ ಸಮಗ್ರ ಪರಿಜ್ಞಾನವನ್ನು ಹೊಂದುವುದು ಅಂದರೆ ಸ್ತ್ರೀಯರು ಪುರುಷಷಾಹಿಯ ವಿರುದ್ಧ ಹೋರಾಟ ಮಾಡುವುದರ ಮೂಲಕ ಶೋಷಣೆಯನ್ನು ಪುರುಷರಿಂದ ಮಾಡಿಸುತ್ತಾ, ಬಂದಿರುವುದು ಮತ್ತು ಪುರುಷರನ್ನು ಇನ್ನೊಂದು ಶ್ರೇಣಿಯಲ್ಲಿ ಶೋಷಣೆಗೆ ಒಳಪಡಿಸಿರುವ ವರ್ಗ ವ್ಯವಸ್ಥೆಯನ್ನು ಸ್ತ್ರೀಯರೂ, ಪುರುಷರೂ ಜಂಟಿಯಾಗಿ ಹಾಗೂ ಸಾಮೂಹಿಕವಾಗಿ ಪ್ರಶ್ನಿಸುವಂತೆ, ಕೊನೆಯಲ್ಲಿ ಕಿತ್ತೊಗೆಯುವಂತೆ ಸರಿಯಾದ ಮಾರ್ಗದರ್ಶನ ಗಳಿಸುವುದನ್ನು ಈ ರೀತಿ ಸ್ತ್ರೀವಾದ ದೇಶದ ದಲಿತರಂತೆ ಶೋಷಣೆಗೆ ಒಳಗಾದವರು. ಸುಖ, ಸಮಸ್ಯೆಗಳು ಹಲವು ರೀತಿಯಲ್ಲಿವೆ. ದಲಿತರ ಬಿಡುಗಡೆಯಾದರೆ ಜೊತೆಯಲ್ಲಿಯೇ ಮಹಿಳೆಯರ ಬಿಡುಗಡೆ ಸಾಧ್ಯ."[೧೯] ಎಂಬುದು ಸತ್ಯವಾದ ಅಂಶ. ದಲಿತರು ಮತ್ತು ಸ್ತ್ರೀ ಅಂದರೆ ಎಲ್ಲಾ ವರ್ಗದ ಸ್ತ್ರೀಯರು, ಎಲ್ಲಾ ವರ್ಗದ ಕೆಳಗಿನ ಆರ್ಥಿಕ ಮಟ್ಟದವರೂ ಉದ್ಧರವಾದಾಗ ಸಮಾನತೆ ಸಾಧ್ಯವಾಗುತ್ತದೆ.

ಜಗತ್ತಿನ ಆಧುನಿಕ ವೈಜ್ಞಾನಿಕ ಬದಲಾವಣೆಗಳಿಗೆ ಪುರುಷರು ಪ್ರತಿನಿಧಿಗಳಾಗಿ ಕಂಡರೆ, ಪ್ರಾಚೀನ ಸಮಾಜದ ಸಂಸ್ಕೃತಿಯ ಮೌಲ್ಯಗಳು ಉಳಿದುಬರಲು, ಅವು ಗಟ್ಟಿಗೊಳ್ಳಲು ಮಹಿಳೆಯರು ಕಾರಣರಾಗಿದ್ದಾರೆ. ಆದುನಿಕ ಸ್ತ್ರೀ-ವಾದಿಗಳು ಕುಟುಂಬ, ದಾಂಪತ್ಯ, ಮದುವೆ, ಸಾಮಾಜಿಕ ಮಾನವೀಯ ಮೌಲ್ಯ ಕಳೆದುಕೊಂಡು ವಿನಾಶವಾಗುತ್ತಿರುವ ಕಾಲದ ಸ್ತ್ರೀಪಾತ್ರಗಳನ್ನು ತಮ್ಮ ಕೃತಿಗಳಲ್ಲಿ ತಂದಿದ್ದಾರೆ. ಕನ್ನಡಕ್ಕೆ ಸ್ತ್ರೀ-ವಾದವು ಚಾರಿತ್ರಿಕ ಮಹತ್ವದಿಂದ ಬಂದದ್ದು, ಅಂತಾರಾಷ್ಟ್ರೀಯ ಮಟ್ಟದ ಪಶ್ಚಿಮದ

---

೧೯. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪು. ೧೬೪.

ಸ್ತ್ರೀವಾದದ ಮುಖ್ಯಾಂಶಗಳಲ್ಲಿ ನಮ್ಮ ಪರಿಸ್ಥಿತಿಗೆ ಅವಶ್ಯವಾದ, ಇಲ್ಲಿಯ ಸಂಸ್ಕೃತಿಗೆ ತಕ್ಕಂತೆ ಕೆಲವು ಅಂಶಗಳನ್ನು ಧ್ಯೇಯಗಳಾಗಿ ಹೊಂದಿದ್ದಾರೆ. ಪಾಶ್ಚಾತ್ಯರ ಸ್ತ್ರೀವಾದ ಅತ್ಯಂತ ತೀವ್ರ ಮತ್ತು ಪುರುಷ ಪ್ರಧಾನತೆಯ ವಿರೋಧಿಯಾದರೆ ಭಾರತದ ಸ್ತ್ರೀವಾದದ ಕಲ್ಪನೆಯೂ ಮತ್ತು ಅವರ ಉದ್ದೇಶಗಳು ಅವರ ಕಥಾಸಾಹಿತ್ಯದಲ್ಲಿ ಅಭಿವ್ಯಕ್ತವಾಗಿದೆ. ಹಳೆಯ ಕಾಲದಿಂದ ಅನುಭವಿಸಿರುವ ನೋವು, ಕಷ್ಟ, ಯಾತನೆ, ನಿರಾಸೆ, ಇವು ನೋವಾಗಿ ಸಾಹಿತ್ಯದಲ್ಲಿ ಕಾಣುತ್ತದೆ. ಸ್ತ್ರೀಯರು–ಪುರುಷರು ಸಮಾನ ಎಂಬ ದೃಷ್ಟಿಯನ್ನು ಒಪ್ಪಿಕೊಂಡು ಅದನ್ನು ಸಾಧಿಸಲು ಉದ್ದೇಶವನ್ನು ಇಟ್ಟುಕೊಂಡಿದೆ.

--

ಅಧ್ಯಾಯ : ನಾಲ್ಕು

'ಸಾರಾ ಅಬೂಬಕ್ಕರ್' ಮತ್ತು 'ಬಾನು ಮುಷ್ತಾಕ್'ರವರ ಜೀವನ ಮತ್ತು ಸಾಧನೆ

ಬಂಡಾಯ ಸಾಹಿತ್ಯ ಎಂಬುದಕ್ಕೆ ಒಂದು ಹೊಸ ಅರ್ಥವನ್ನೇ ಕೊಟ್ಟವರು ಮುಸ್ಲಿಂ ಲೇಖಕಿಯರು. ಮುಸ್ಲಿಂ ಲೇಖಕಿಯರ ವಿಷಯದಲ್ಲಿ ಅವರ ಬರವಣಿಗೆಯೇ ಒಂದು ಬಂಡಾಯವಾಗಿದೆ. ಧರ್ಮದಿಂದ ರೂಪಿತವಾದ ಕಟ್ಟಳೆಗಳು ಪ್ರಶ್ನಾತೀತ–ವಾಗಿರುವಂತಹವು. ಸ್ತ್ರೀಯರು ಧರ್ಮವನ್ನು ಕುರಿತು ಮಾತಾಡುವುದು ಕೂಡ ಅನೂಹ್ಯವಾಗಿರುವಂತಹ ವ್ಯವಸ್ಥೆಯಲ್ಲಿ ಅದೇ ಧರ್ಮಕ್ಕೆ ಸೇರಿದವರಾದ, ಅದರಲ್ಲಿಯೂ ಮಹಿಳೆಯರು ಈ ಎಲ್ಲ ಬಂಧನವನ್ನು ಒಮ್ಮೆಲೆ ಮೆಟ್ಟಿ ಮೇಲೆ ಬಂದದ್ದು ಬಂಡಾಯ ಎಂಬ ಪದದ ಅರ್ಥವನ್ನು ಮೀರಿದ ನಡವಳಿಕೆಯಾಗಿದೆ.

ಸಾರಾ ಅಬೂಬಕ್ಕರ್:

ಕನ್ನಡ ಸಾರಸ್ವತ ಲೋಕಕ್ಕೆ ಹೊಸದೊಂದು ಕ್ರಾಂತಿಕಾರಕ ಅಲೆಯೂ ದಲಿತ–ಬಂಡಾಯದೊಡನೇ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದೆ. ಅದುವರೆವಿಗೂ ನಿರ್ಲಕ್ಷಿಸಲ್ಪಟ್ಟ, ಅದುಮಿಟ್ಟ ಧ್ವನಿಗಳು ಕೊರಳೆತ್ತಿದಾಗ ಅಪರಿಚಿತವಾಗಿದ್ದ, ಅಜ್ಞಾತವಾಗಿದ್ದ ಮುಸ್ಲಿಂ ಸಂವೇದನೆಗಳು ಮೊದಲ ಬಾರಿಗೆ ಅಭಿವ್ಯಕ್ತಿ ಕಂಡುಕೊಂಡಿದ್ದರ ಫಲವಾಗಿ ಮುಸ್ಲಿಂ ಸಮಾಜ, ಸಂಸ್ಕೃತಿಯನ್ನು ಸಾಹಿತ್ಯ ಲೋಕಕ್ಕೆ ತೆರೆದುತೋರಿಸುವ ಮೂಲಕ ಒಂದು ಭಿನ್ನ ಸಮಾಜದ ಸಮರ್ಪಕ ಚಿತ್ರಣವನ್ನು ಮಾಡಿಕೊಡುವ ಮುಸ್ಲಿಂ ಬರಹಗಾರ್ತಿಯರಲ್ಲಿ ಸಾರಾ ಅಬೂಬಕ್ಕರ್ ಪ್ರಮುಖರಾಗಿದ್ದಾರೆ. ಅದರಲ್ಲೂ ಬಹಳ ಮುಖ್ಯವಾಗಿ ಸ್ತ್ರೀ ಸಂವೇದನೆಯನ್ನು ಅಭಿವ್ಯಕ್ತಿಗೊಳಿಸುವುದರಲ್ಲಿ ತಮ್ಮನ್ನು ಸಶಕ್ತವಾಗಿ ಗುರುತಿಸಿಕೊಂಡ ಸಾರಾ ಅಬೂಬಕ್ಕರ್ ಅವರು ಕನ್ನಡದ ಶ್ರೇಷ್ಠ ಮುಸ್ಲಿಂ ಬರಹಗಾರ್ತಿಯಾಗಿದ್ದಾರೆ.

ಕರಾವಳಿ ತೀರದ ಲೇಖಕಿಯಾಗಿ ತಮ್ಮನ್ನು ಗುರುತಿಸಿಕೊಂಡು ೮೦ರ ದಶಕದಲ್ಲಿ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ಸಾರಾ ಅಬೂಬಕ್ಕರ್ ಅವರು ಬಹುಪತ್ನಿತ್ವ ಹಾಗೂ ವಿಚ್ಛೇದನಗಳನ್ನೊಳಗೊಂಡ ಮಹಿಳೆಯ ಗೋಳಿನಕಥೆಗಳನ್ನು ತಮ್ಮ ಸಾಹಿತ್ಯದ ವಸ್ತುವನ್ನಾಗಿ ಸ್ವೀಕರಿಸಿದ್ದಾರೆ. ಧರ್ಮಶಾಸ್ತ್ರಗಳನ್ನು ತಪ್ಪಾಗಿ ವ್ಯಾಖ್ಯಾನಿಸಿಕೊಂಡು, ಸ್ತ್ರೀಯರ ಶೋಷಣೆಗೆ ಧರ್ಮವನ್ನು ಅಸ್ತ್ರವಾಗಿರಿಸಿಕೊಂಡಿರುವ ಕ್ರೂರತೆಯ ಅರಿವನ್ನು ತಮ್ಮ ಕಥೆ, ಕಾದಂಬರಿಗಳ ಮೂಲಕ ವ್ಯಕ್ತಪಡಿಸಿ, ಸ್ತ್ರೀಯರು ಈ ಬಗ್ಗೆ ಎಚ್ಚರಗೊಳ್ಳುವಂತೆ ಸಾರಾ ಅಬೂಬಕ್ಕರ್ ಮಾಡಿದ್ದಾರೆ. ಇಸ್ಲಾಂ ಧರ್ಮದಲ್ಲಿನ ಆಚರಣೆಗಳು, ಒಳಗೊಳಗೆ ಮಹಿಳೆಯರನ್ನು ಶೋಷಿಸುತ್ತಿರುವ ವಿಚಾರಗಳು ಸ್ಪಷ್ಟವಾಗಿ ಇವರ ಕೃತಿಗಳಲ್ಲಿ ಗೋಚರಿಸುತ್ತವೆ. ದಿವಂಗತ 'ಪಿ.ಲಂಕೇಶ್' ಅವರ ಪ್ರೋತ್ಸಾಹದಿಂದಾಗಿ ಮುಸ್ಲಿಂ

ಕುಟುಂಬದ ಹಿನ್ನೆಲೆಯಿಂದ ಬಂದು, ಕನ್ನಡ ಸಾಹಿತ್ಯದಲ್ಲಿ ದೃಢವಾಗಿ ಹೆಜ್ಜೆಯನ್ನಿಟ್ಟು ಮುಂದೆ ಬಂದವರಲ್ಲಿ ಸಾರಾ ಅಬೂಬಕ್ಕರ್ ಒಬ್ಬರಾಗಿದ್ದಾರೆ.

'ಪಿ.ಮಹಮ್ಮದ್' ಮತ್ತು 'ಜೈನಾಬಿ' ದಂಪತಿಗಳ ಏಕೈಕ ಸುಪುತ್ರಿಯಾಗಿ 'ಕಾಸರಗೋಡಿನ ಚಮನವಾಡಿ'ಯಲ್ಲಿ ೧೯೩೬ರಂದು ಹುಟ್ಟಿದ ಸಾರಾ ರವರು ಐದು ಜನ ಸಹೋದರರ ಮುದ್ದಿನ ಕಣ್ಮಣಿಯಾಗಿ, ಅಜ್ಜಅಜ್ಜಿಯರ ಪ್ರೀತಿಯ ಮೊಮ್ಮಗಳಾಗಿ ವಾತ್ಸಲ್ಯಮಯ ವಾತಾವರಣ ಪ್ರಜ್ಞಾವಂತ ಕುಟುಂಬದಲ್ಲಿ ಕೆಲವೊಂದು ಅಡ್ಡಿ, ನಿರ್ಬಂಧಗಳ ನಡುವೆಯೇ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆದ ಸಾರಾ ಅವರು ಮುಂದೆ ಹೆಚ್ಚಾಗಿ ಓದಲಿಲ್ಲ. ಕುಟುಂಬದವರಿಂದ ದೊರೆತ ಅಪಾರ ಪ್ರೋತ್ಸಾಹ, ಪ್ರೇರಣೆಗಳಿಂದ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಮುಸ್ಲಿಂ ಸಮಾಜದಲ್ಲಿ ಹೆಣ್ಣು ಪಡುತ್ತಿರುವ ಯಾತನಾಮಯ ಜೀವನವನ್ನು ಶೋಷಣೆ, ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಯನ್ನು ತೆರೆದಗಣ್ಣಿನಿಂದ ನೋಡಿ, ಅವರ ನೋವುಗಳಿಗೆ ಸ್ಪಂದಿಸುವ ಕಾರ್ಯವನ್ನು ಕಥೆಕಾದಂಬರಿಗಳ ಮೂಲಕ ಕೈಗೊಂಡರು.[೨೦]

ಸಾರಾ ರವರು ಮಲೆಯಾಳಂ ಮೂಲದವರಾಗಿದ್ದು, ಕನ್ನಡದಲ್ಲಿ ಸಾಹಿತ್ಯ ಕೃಷಿಗೈಯ್ಯುತ್ತಿರುವ ಮುಸ್ಲಿಂ ಲೇಖಕಿಯರಲ್ಲಿ ಅಗ್ರಗಣ್ಯರಾಗಿದ್ದಾರೆ. "ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು" ಇವರ ಆತ್ಮ ಕಥನವಾಗಿದೆ. ಸಾರಾ ಅವರಿಗೆ ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧ ಬಾಲ್ಯದಲ್ಲೇ ಬೆಸೆದುಕೊಂಡಿತ್ತು. "ಚಂದ್ರಗಿರಿಯ ತೀರದಲ್ಲಿ" ಆಡಿ ನಲಿಯುವ ಜೊತೆಗೆ ಪ್ರಕೃತಿಯೊಂದಿಗೆ ಕಲೆತು, ಬೆರೆತು ಬೆಳೆದವರು. ಚಂದ್ರಗಿರಿಯ ತೀರದ ದಟ್ಟ ಅನುಭವದ ಹಿನ್ನೆಲೆ ಅವರ ಕಥೆ, ಕಾದಂಬರಿಗಳಲ್ಲಿ ಹೆಚ್ಚು ಕಾಣಿಸಿಕೊಂಡದನ್ನು ಗುರುತಿಸಬಹುದು.

ಕಟ್ಟಾ ಸಂಪ್ರದಾಯಸ್ಥ ಮುಸ್ಲಿಂ ಮನೆತನದಲ್ಲಿ ಹುಟ್ಟಿ ಬೆಳೆದ ಸಾರಾ ಅಬೂಬಕ್ಕರ್ ಅಜ್ಜಅಜ್ಜಿಯವರಿಂದ ಧಾರ್ಮಿಕತೆಯನ್ನು, ತಾಯಿಯಿಂದ ಇಸ್ಲಾಂ ಧರ್ಮ ಗ್ರಂಥಗಳನ್ನು, ಮುಸ್ಲಿಂ ಪುರಾಣ ಕಥೆಗಳನ್ನು ಕುರಿತು ಆಳವಾದ ಅಭ್ಯಾಸ ನಡೆಸಿದರು. ಆ ಕಾಲದಲ್ಲಿ ಹೆಣ್ಣು ಬಂಧಿಯಾಗಿರದೆ ಗಂಡಿನಷ್ಟೇ ಹಕ್ಕು, ಸಾಮರ್ಥ್ಯಗಳನ್ನು ಪಡೆದು, ಕುದುರೆ ಹತ್ತಿ ರಣರಂಗದಲ್ಲಿ ಹೋರಾಡುವ ಸ್ವತಂತ್ರ ವಾತಾವರಣದಲ್ಲಿ ಇದ್ದುದನ್ನು ಗುರುತಿಸಿ, ಪ್ರಸ್ತುತ ಹೆಣ್ಣು ಮಕ್ಕಳ ಬಗ್ಗೆ ಕುರಿತು ದೀರ್ಘವಾದ ಚಿಂತನೆ ಮಾಡುವ ಶಕ್ತಿಯನ್ನು ರೂಢಿಸಿಕೊಂಡರು."[೨೧]

---

೨೦. ದಾದಾಫೀರ್ ನವಿಲೇಹಾಳ, (ಸಂ.) ರಂಗರಾಜ್ ವನದುರ್ಗ, ಮುಸ್ಲಿಂಸಂವೇದನೆಗಳು : ಕೆಲವು ಅನುಮಾನಗಳು, ಪು. ೧೧೦.

೨೧. ಕೆ.ಷರೀಫಾ, (ಸಂ.) ರಂಗರಾಜ್ ವನದುರ್ಗ, ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ, ಪು. ೧೩೨.

ಕಥೆ, ಕಾದಂಬರಿಗಳನ್ನು ಬರೆಯುವ ಮೂಲಕ ಮುಸ್ಲಿಂ ಸಮಾಜವನ್ನು ಅವಮಾನಿಸುತ್ತಿದ್ದಾರೆ. ಎಂಬ ಆರೋಪವನ್ನು ಎದುರಿಸುತ್ತಿರುವ ಸಾರಾ ಅವರು "ಸಮಾಜವನ್ನು ತಿದ್ದುವ ಸಲುವಾಗಿ ನಾನು ಸಮಾಜದ ಕೆಲವು ಕ್ರೂರಪದ್ದತಿಗಳೆಡೆಗೆ ಬೆಳಕು ಚೆಲ್ಲಿದ್ದೇನೆಯೇ ಹೊರತು, ಹುಟ್ಟಿ ಬೆಳೆದ ಸಮಾಜವನ್ನು ಅವಮಾನಿಸುವುದು ನನ್ನ ಉದ್ದೇಶವಲ್ಲ" ಎಂದು ಸ್ಪಷ್ಟಪಡಿಸಿರುವಲ್ಲಿ ಸಾಹಿತ್ಯವು ಸಮಾಜದ ಪ್ರತಿಬಿಂಬಿತ–ವಾಗಬೇಕೆಂಬ ಆಶಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುವುದನ್ನು ನಾವು ಗಮನಿಸಬಹುದು. "ಕೊಳೆತ ಭಾಗವನ್ನು ಹಾಗೆ ಮುಚ್ಚಿದರೆ ಇನ್ನಷ್ಟು ಕೊಳೆತು ಹೋಗಬಹುದೆಂದು ಮನಗಂಡು, ಆ ಭಾಗವನ್ನು ಕಿತ್ತೆಸೆಯಬೇಕಾದರೆ ಆ ಭಾಗದ ಮೇಲೆ ಬೆಳಕು ಚೆಲ್ಲಬೇಕು. ಆ ಬೆಳಕು ಚೆಲ್ಲುವ ಪ್ರಯತ್ನವನ್ನಷ್ಟೇ ಮಾಡಿದ್ದೇನೆ"[೨೨] ಎಂದು ಅಜ್ಞಾನ, ಅಂಧಕಾರ, ಅನಿಷ್ಟ ಪದ್ಧತಿಗಳಿಂದ ತುಂಬಿ ತುಳುಕುತ್ತಿರುವ ಮುಸ್ಲಿಂ ಸಮಾಜವನ್ನು ತಿದ್ದಿತೀಡುವ ಮೇಲಕ್ಕೆತ್ತುವ ಕಾರ್ಯವನ್ನಷ್ಟೇ ಲೇಖಕಿ ಮಾಡಿದ್ದಾರೆ ಎನ್ನಬಹುದು.

ತಮ್ಮ ೪೫ನೇ ವಯಸ್ಸಿನಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಸಾರಾ ಅವರು ಲಂಕೇಶ ಪತ್ರಿಕೆಯಲ್ಲಿ ಪ್ರಕಟವಾದ "ಮುಸ್ಲಿಂ ಹೆಣ್ಣಿನ ಸ್ಪಂದನ" ಎಂಬ ತಲೆಬರಹದಡಿ–ಯಲ್ಲಿ ಬರೆದ ಹಲವಾರು ಲೇಖನಗಳ ಮೂಲಕ ಸಾಹಿತ್ಯ ರಚನೆಗೆ ಭದ್ರವಾದ ನೆಲೆಯನ್ನು ಕಂಡುಕೊಂಡರು. ೧೯೮೪ರಲ್ಲಿ ಸಾರಾ ಅವರು "ಚಂದ್ರಗಿರಿಯ ತೀರದಲ್ಲಿ" ಎಂಬ ಕಾದಂಬರಿಯನ್ನು ಬರೆದರು. ಈ ಕಾದಂಬರಿಯಲ್ಲಿ ತಮ್ಮ ಸ್ವ–ವಿವರಗಳನ್ನು, ಮನೆತನ, ತಂದೆತಾಯಿ, ಸಹೋದರರ ಕೌಟುಂಬಿಕ ಹಿನ್ನೆಲೆಯನ್ನು ಕಥೆಯ ರೂಪದಲ್ಲಿ ಹೆಣೆದಿದ್ದಾರೆ. ೧೯೮೫ರಲ್ಲಿ 'ಸಹನಾ' ಎಂಬ ಕಾದಂಬರಿಯನ್ನು, ೧೯೯೦ರಲ್ಲಿ "ವಜ್ರಗಳು" ಕಾದಂಬರಿಯನ್ನು ಬರೆದರು. ಇವುಗಳ ನಂತರ 'ತಳ ಒಡೆದ ದೋಣಿಯಲ್ಲಿ', 'ಕದನ ವಿರಾಮ', 'ಸುಳಿಯಲ್ಲಿ ಸಿಕ್ಕವರು', 'ಪ್ರವಾಹ–ಸುಳಿ', ಮುಂತಾದ ಕಾದಂಬರಿಗಳು ಪ್ರಕಟವಾದವು.

೧೯೮೮ರಲ್ಲಿ 'ಚಪ್ಪಲಿಗಳು, ೧೯೯೨ರಲ್ಲಿ 'ಪಯಣ ಮತ್ತು ಇತರ ಕಥೆಗಳು', ೧೯೯೭ರಲ್ಲಿ "ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು", ಹಾಗೂ "ಖೆಡ್ಡಾ" ಎಂಬ ಕಥಾಸಂಕಲನಗಳನ್ನು ಹೊರತಂದಿದ್ದಾರೆ. ಜೊತೆಗೆ 'ಅನಾವರಣ', ಹಾಗೇ 'ಲೇಖನಗುಚ್ಛ' ಎಂಬ ಅಂಕಣ ಬರಹಗಳ ಸಂಗ್ರಹಗಳೂ ಪ್ರಕಟವಾಗಿವೆ. ಕಥೆ, ಕಾದಂಬರಿ, ಲೇಖನಗಳೇ ಅಲ್ಲದೆ, ಅನುವಾದ ಸಾಹಿತ್ಯದಲ್ಲೂ ಸಾರಾ ಅವರು ಕೈಯಾಡಿಸಿದ್ದಾರೆ. ಕಮಲಾದಾಸ್ ಅವರ 'ಮನೋಮಿ' "ಬಿ.ಎಂ.ಸುಹರಾ"ರವರ "ಬಲೆ", 'ನಾನಿನ್ನು ನಿದ್ರಿಸುವೆ', ಪಿ.ಕೆ.ಬಾಲಕೃಷ್ಣನ್‌ರವರ ಮಲೆಯಾಳಂ ಭಾಷೆಯ ಕಾದಂಬರಿಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡಿದ್ದಾರೆ.

---

೨೨. ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ– ಕೆ.ಷರೀಫಾ, ಪು. ೧೩೨.

ಸಾರಾ ಅವರಿಗೆ ಸಂದಿರುವ ಪ್ರಶಸ್ತಿಗಳೆಂದರೆ "ದಾನ ಚಿಂತಾಮಣಿ" ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನುಪಮಾ ನಿರಂಜನ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ಹಾಗೂ ಶ್ರೇಷ್ಠ ಮಹಿಳಾ ಲೇಖಕಿಗೆ ಸಲ್ಲುವ "ಅತ್ತಿಮಬ್ಬೆ ಪ್ರಶಸ್ತಿ", ವರ್ಧಮಾನ ಉದಯೋನ್ಮುಖ ಪ್ರಶಸ್ತಿ ಸಾವಿತ್ರಮ್ಮ ದೇಜಗೌ ಭಾರತೀಯ ಭಾಷಾ ಸಮ್ಮಾನ ಪ್ರಶಸ್ತಿ, ಇತ್ತೀಚೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ.

ಸಾರಾ ರವರ ಬಹುಪಾಲು ಎಲ್ಲಾ ಲೇಖನಗಳು, ಕಾದಂಬರಿಗಳು ಹಾಗೂ ಕಥೆಗಳು ಪ್ರಜಾವಾಣಿ, ಕರ್ಮವೀರ, ಲಂಕೇಶ್ ಪತ್ರಿಕೆಗಳ ಮೂಲಕ ಸಮಸ್ಯೆಗಳನ್ನು ವಿಶೇಷವಾಗಿ ಬಳಸಿಕೊಂಡು ಬರೆಯುತ್ತಿರುವ ಲೇಖಕಿಯರಲ್ಲಿ ಸಾರಾ ಅಬೂಬಕ್ಕರ್ ಒಬ್ಬರಾಗಿದ್ದು, ಭಾಷೆ, ಕೋಮು ಸೌಹಾರ್ದತೆ ಮತ್ತು ಸಾಮಾಜಿಕ ಉನ್ನತಿಗಾಗಿ ತಮ್ಮ ಬರವಣಿಗೆಯನ್ನು ಮೀಸಲಾಗಿಟ್ಟಿದ್ದಾರೆ.

ಬಾನು ಮುಷ್ತಾಕ್:

ಸಾಹಿತ್ಯ ಕಾಲ ಚಕ್ರದಂತೆ ನಿರಂತರ ಬದಲಾವಣೆ ಹೊಂದುವಂತಹದ್ದು. ಅಂತೆಯೇ ಸಮಾಜವೂ ಕೂಡ ಈ ಬದಲಾವಣೆಯ ಪ್ರಕ್ರಿಯೆಗೆ ಹೊರತಾದುದಲ್ಲ. ಸಮಾಜದಲ್ಲಿ ನಡೆಯುವ ಯಾವುದೇ ತೆರನಾದ ಆಗುಹೋಗುಗಳಿಗೆ ಅಲ್ಲಿಯ ಸೃಜನಶೀಲ ಮನಸ್ಸುಗಳು ಸ್ಪಂದಿಸುತ್ತಿರುತ್ತವೆ. ಶೋಷಕರಿಗೆ ತಮ್ಮ ಸ್ಥಿತಿಯ ಅರಿವುಂಟು–ಮಾಡಿಸಿ, ಶೋಷಿತರಿಗೆ ಎಚ್ಚರಿಸುವ ಕಾರ್ಯ ಈ ಸೃಜನಶೀಲ ಮನಸ್ಸುಳ್ಳವರಿಂದ ನಡೆಯುತ್ತಿರುತ್ತದೆ. ಈ ಬಗೆಯ ಸೃಜನಶೀಲ ಮನಸ್ಸನ್ನು ಹೊಂದಿದವರಾಗಿ ಸಮಾಜದ ಒಳನೋಟವನ್ನು 'ಹೀಗೂ ಉಂಟು' ಎಂದು ತೋರಿಸಿಕೊಟ್ಟವರಲ್ಲಿ ಬಾನುಮುಷ್ತಾಕ್ ಸಹ ಒಬ್ಬರಾಗಿದ್ದಾರೆ. ಧರ್ಮದ ಕಟ್ಟಳೆಗಳಿಂದ ಹೊರಬಂದು ಸಾಹಿತ್ಯದಲ್ಲಿ ಅಸ್ತಿತ್ವವನ್ನು ತೋರ್ಪಡಿಸಿದವರು ಇವರು.

ಸ್ತ್ರೀವಾದಿ ಹಿನ್ನೆಲೆಯಲ್ಲಿ ಇಸ್ಲಾಂ ಧರ್ಮದ ಕೆಲವು ಅಹಿತ ಕಾನೂನುಗಳನ್ನು ಪರಾಮರ್ಶಿಸುವ, ಅದನ್ನು ನೋಡಬಯಸುವ ಬಾನು ಮುಷ್ತಾಕ್ ಅವರು ಇಸ್ಲಾಂ ಧರ್ಮದಲ್ಲಿ ಪುರುಷರಂತೆ ಮಹಿಳೆಯರಿಗೂ ಸ್ವಾತಂತ್ರ್ಯ ಹಾಗೂ ಧರ್ಮದ ಆಚರಣೆಯಲ್ಲಿ ಸ್ತ್ರೀಯರಿಗೆ ಸಮಾನತೆ ಬೇಕೆಂದು ಹೋರಾಟ ಮಾಡಿದ ದಿಟ್ಟ ಮಹಿಳೆ ಸಾರಾಅಬೂಬಕ್ಕರ್ ಅವರಂತೆಯೇ ಬಾನು ಮುಷ್ತಾಕ್ ರವರು ಸಹ ಲಂಕೇಶ್ ಪತ್ರಿಕೆಯ ಮೂಲಕ ಸಂವೇದನೆಯ ಹಿನ್ನೆಲೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಬಾನು ಅವರಲ್ಲಿ ಚಿಗುರುತ್ತಿದ್ದ ಸಾಹಿತ್ಯಾಸಕ್ತಿಯನ್ನು ಗುರುತಿಸಿ, ಬೆಳೆಸಿದ ಪಿ.ಲಂಕೇಶ್ ಅವರು ಬಾನು ಮುಷ್ತಾಕ್ ಅವರನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದರು. ಬಾನುರವರೇ ಹೇಳುವಂತೆ "ಮಹಿಳೆ ನನ್ನ ಮುಖ್ಯ ಕಾಳಜಿ. ಹೀಗಾಗಿ ನನ್ನ ಎಲ್ಲಾ ಕತೆಗಳಲ್ಲೂ

ಅವಳು ವಿರಾಜಿಸಿದ್ದಾಳೆ" ಎಂದು ಹೇಳುವ ಬಾನುರವರ ಕತೆಗಳಲ್ಲಿ ಸ್ತ್ರೀಪರ ಕಾಳಜಿಗಳು ಅಂತರ್ವಾಹಿನಿಯಾಗಿ ಹರಿಯುತ್ತವೆ.[೨೩]

ಬಾನುಮುಷ್ತಾಕ್‌ರವರು 'ರೆಹಮಾನ್ ಮತ್ತು ಅಖ್ತರಾ ಬಾನು" ದಂಪತಿಗಳಿಗೆ ಬಾನುಮುಷ್ತಾಕ್ ಅವರು ೧೯೫೪ರಲ್ಲಿ ಹಾಸನ ನಗರ ಪ್ರದೇಶದಲ್ಲಿ ಜನಿಸಿದರು. ಹಾಸನ ನಗರದ ಸಂತ ಫಿಲೋಮಿನ ವಿದ್ಯಾಸಂಸ್ಥೆಯ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು, ಕೆ.ಆರ್.ಎಸ್. ಹಾಗೂ ಚಾಮರಾಜ ನಗರದಲ್ಲಿ ಪ್ರೌಢಶಿಕ್ಷಣವನ್ನು ಪಡೆದರು. ಹಾಸನ ಜಿಲ್ಲೆಯ ಸರ್ಕಾರಿ ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣ ಮತ್ತು ವಿಜ್ಞಾನ ವಿಭಾಗದಲ್ಲಿ ಪದವಿಯನ್ನು ಪಡೆದರು. ನಂತರ ಹಾಸನದ ಕೃಷ್ಣ ಕಾಲೇಜಿನಲ್ಲಿ ಕಾನೂನು ಪದವಿಯನ್ನು ಪೂರೈಸಿದರು.

'ಬಾನು ಮುಷ್ತಾಕ್'ರವರು ಕಾನೂನು ಅಧ್ಯಯನದ ಜೊತೆಗೆ ಸಮಾಜ ಸೇವಕಿಯಾಗಿಯೂ ಹಲವಾರು ಕಡೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ೧೯೮೩ರಲ್ಲಿ ಹಾಸನ ನಗರಸಭೆಗೆ ಎರಡು ವರ್ಷ ಅವಧಿಯ ಸದಸ್ಯತ್ವ, ಹಾಸನ ಜಿಲ್ಲಾ ಆಸ್ಪತ್ರೆ ಚಾಮರಾಜೇಂದ್ರ ಆಸ್ಪತ್ರೆಯ ಸಂದರ್ಶಕ ಮಂಡಳಿಯ ಅಧ್ಯಕ್ಷೆ ಹಾಗೂ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಮಸ್ಯೆ ಮತ್ತು ಹಾಸನ ನಗರ ಗ್ರಂಥಾಲಯ ಸಮಿತಿಯ ಸದಸ್ಯೆಯಾಗಿ ಕೆಲಸಮಾಡಿದ್ದಾರೆ. ಅಲ್ಲದೆ ಬೆಂಗಳೂರು ಆಕಾಶವಾಣಿ ಕೇಂದ್ರದ ಸಲಹಾ ಮಂಡಳಿಯ ಸದಸ್ಯೆಯಾಗಿಯೂ, ೧೯೯೩ರ ಹಾಸನ ಜಿಲ್ಲಾ ಸಮತಾ ವೇದಿಕೆಯ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ ಹಾಸನ ಮಹಿಳಾ ವಿಕಾಸ ವೇದಿಕೆಯ ಅಧ್ಯಕ್ಷೆಯಾಗಿ, ೧೯೯೫ರಿಂದ ಮೂರು ವರ್ಷಗಳ ಕಾಲ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿ, ೧೯೮೧ರಿಂದ ಕೆಲಕಾಲ ಪತ್ರಕರ್ತೆಯೂ ಆಗಿ, ಸಾರ್ವಜನಿಕ ಸೇವೆಗಳಲ್ಲಿ ಸಕ್ರಿಯವಾಗಿ ಪಾತ್ರವಹಿಸಿದ್ದಾರೆ. ಪ್ರಸ್ತುತ ಹಾಸನದಲ್ಲಿ ನ್ಯಾಯವಾದಿಯಾಗಿದ್ದಾರೆ.

ಬಾನು ಮುಷ್ತಾಕ್‌ರವರು ಬರೆದ ಮೊದಲ ಕವನ ಸಂಕಲನವೆಂದರೆ "ಕಳಶ ಹೊತ್ತ ಹುಡುಗಿ", ಹೆಜ್ಜೆ ಮೂಡಿದ ಹಾದಿ, ಬೆಂಕಿಮಳೆ, 'ಬೊಗಸೆ ತುಂಬಾ ನೀರು' ಇವರ ಕಥಾಸಂಕಲನಗಳು. "ಕುಬ್ರಾ" ಹಾಗೂ "ಬಡವರ ಮಗಳು ಹೆಣ್ಣಲ್ಲ" ಈ ಎರಡೂ ಕಾದಂಬರಿಗಳು. ಇವರ 'ಹೆಜ್ಜೆ ಮೂಡಿದ ಹಾದಿ' ಕಥಾಸಂಕಲನದಲ್ಲಿ ಪ್ರಕಟವಾಗಿರುವ 'ಪರಕೀಯ' ಎಂಬ ಕಥೆಯನ್ನು ಹಿಂದಿ ಭಾಷೆಗೆ ಅನುವಾದ ಮಾಡಿದ್ದಾರೆ. ಅನುವಾದಗೊಂಡಿರುವ ಈ ಕಥೆಯನ್ನು ಉತ್ತರ ಪ್ರದೇಶದ ಹಿಂದಿ ಅಕಾಡೆಮಿಯ ಪ್ರಕಟಣೆಯಾದ 'ಇಂದ್ರಪ್ರಸ್ಥ ಭಾರತೀ'ಯಲ್ಲಿ ಪ್ರಕಟಿಸಲಾಗಿದೆ. ಬೆಂಗಳೂರು–ಆಕಾಶವಾಣಿ ವಾಣಿಜ್ಯ ಕೇಂದ್ರದ ಸಹಯೋಗದಲ್ಲಿ ನಿರ್ಮಿಸಿದ ಸದರಿ

---

೨೩. ಕೆ.ಷರೀಫಾ, (ಸಂ.) ರಂಗರಾಜ್ ವನದುರ್ಗ, ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ, ಪು. ೧೩೩.

ರೇಡಿಯೋ ನಾಟಕಕ್ಕೆ ೧೯೯೧ರಲ್ಲಿ "International Women for Radio and Television" ಬಹುಮಾನ ಸಂದಿದೆ. 'ಅಮ್ಮನ ಸೀರೆ' ಎಂಬ ಕಥೆಯೂ ಸಹ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ೧೯೯೯ರ ಕರ್ನಾಟಕ ಲೇಖಕಿಯರ ಸಂಘದ "ಗುಡಿ ಬಂಡೆ ಪೂರ್ಣಿಮಾ ಉದಯೋನ್ಮುಖ ಕವಯತ್ರಿ" ಬಹುಮಾನ ಇವರಿಗೆ ದೊರೆತಿದೆ.

ಬಾನು ಮುಷ್ತಾಕ್ ಅವರು ಕೆಲವು ಕಥೆಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಸಂಕಲನಗಳಲ್ಲಿ ಪ್ರಕಟಗೊಂಡಿದೆ. ೧೯೮೪ರಲ್ಲಿ ಕಾಳೇಗೌಡ ನಾಗವಾರರ ಸಂಪಾದಕತ್ವದಲ್ಲಿ ರಾಹಿಲ ಎಂಬ ಕನ್ಯೆಯ ಕಥೆಯನ್ನು, ೧೯೮೭ರಲ್ಲಿ 'ನಾ. ಡಿಸೋಜ' ಅವರ ಸಂಪಾದಕತ್ವದಲ್ಲಿ ಸರಿದ ಕಾರ್ಮೋಡ ಕಥೆಯನ್ನು 'ಅಮರೇಶ್ ನುಗಡೋಣಿ ಅವರ ಸಂಪಾದಕತ್ವದಲ್ಲಿ 'ಒಮ್ಮೆ ಹೆಣ್ಣಾಗು ಪ್ರಭುವೆ' ಎಂಬ ಕಥೆಯನ್ನು ಪ್ರಕಟಿಸಲಾಗಿದೆ. ೧೯೯೯ರಲ್ಲಿ ಡಾ. ಜಿ.ಎಸ್.ಅಮೂರರ ನಾಯಕತ್ವದಲ್ಲಿ ಪ್ರಿಸಂ ಪ್ರಕಾಶನದ ವತಿಯಿಂದ ಹೊರಬಂದಿರುವ 'ಅವಳ ಕಥೆಗಳು' ಅತ್ಯುತ್ತಮ ಕಥೆ ಎಂದು 'ಸರಿದ ಕಾರ್ಮೋಡ' ಎಂಬ ಕಥೆಯನ್ನು ಪ್ರಕಟಿಸಲಾಗಿದೆ. ಎರಡನೇ ಕಥಾಸಂಕಲನ 'ಬೆಂಕಿಮಳೆ'ಯನ್ನು ನೆಲಮನೆ ಪ್ರಕಾಶನದಿಂದ ಪ್ರಕಟಿಸಲಾಗಿದೆ. ಇವರ ಈ ಕಥಾಸಂಕಲನಕ್ಕೆ ೧೯೯೯ರ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ೨೦೦೦ ವರ್ಷದ ಹೆಚ್.ವಿ.ಸಾವಿತ್ರಮ್ಮ ದತ್ತಿ ನಿಧಿ ಬಹುಮಾನಗಳೂ ಸಂದಿವೆ.

ಹಾಸನ ನಗರ ಹಾಗೂ ಚಾಮರಾಜನಗರದ ಸುತ್ತ-ಮುತ್ತಲಿನ ಭಾಷಿಕ, ಸಾಮಾಜಿಕ ವಾತಾವರಣದ ದಟ್ಟ ಪ್ರಭಾವವನ್ನು ಇವರ ಕೃತಿಗಳಲ್ಲಿ ಕಾಣಬಹುದು. ಧರ್ಮದ ಹೆಸರಿನಲ್ಲಿ ಸ್ತ್ರೀಯನ್ನು ಶೋಷಿಸುವ ರೀತಿಯನ್ನು ಬಾನು ಅವರು ಪುರುಷ ಪ್ರಧಾನ ವ್ಯವಸ್ಥೆಯ ಹಿನ್ನೆಲೆಯಲ್ಲಿ ಚಿತ್ರಿಸುತ್ತಾರೆ. ಬರಿಯ ಮುಸ್ಲಿಂ ಸಮಾಜವನ್ನೇ ಅಲ್ಲದೇ ಮುಸ್ಲಿಂ ಪಾತ್ರಗಳ ಜೊತೆಗೆ ಪೂರಕವಾಗಿ ತರುವ ಹಿಂದೂ ಪಾತ್ರಗಳ ಚಿತ್ರಣವು ಇವರ ಜಾತ್ಯಾತೀತ ದೃಷ್ಟಿಗೆ ನಿದರ್ಶನವಾಗಿವೆ. ತಮ್ಮ ಕೃತಿಗಳು ಹಾಗೂ ಬರಹಗಳ ಮುಖಾಂತರ ಆಚರಣೆ, ಅಂಧಾನುಕರಣೆಗಳನ್ನೂ ಪರಿಚಯಿಸಿಕೊಡುವುದರ ಮೂಲಕ ವಿಚಾರಕ್ಕೆ ದಾರಿಮಾಡಿಕೊಟ್ಟಿದ್ದಾರೆ. ಓದುಗರನ್ನು ಅದರಲ್ಲೋ ಸಂಪ್ರದಾಯಬದ್ಧ ಮುಸ್ಲಿಂ ಬಾಂಧವರಿಗೆ, ವಿಶೇಷವಾಗಿ ಮುಸ್ಲಿಂ ಹೆಣ್ಣುಮಕ್ಕಳಿಗೆ ಚಿಂತನೆಮಾಡುವ ಶಕ್ತಿಯನ್ನು, ತಮ್ಮ ನೆಲೆಯನ್ನು ಕಂಡುಕೊಳ್ಳಲು ಬರೆಯುವ ಬಾನುಮುಷ್ತಾಕ್‌ರವರಿಂದ ಇನ್ನಷ್ಟು ಸೃಜನಶೀಲ ಚಿಂತನಾಪರ ಕೃತಿಗಳು, ವಿಚಾರಗಳು ಹೊರಬರಬೇಕೆಂದು ಆಶಿಸಲಾಗಿದೆ.

--

ಅಧ್ಯಾಯ : ಐದು

ಬೆಂಕಿಮಳೆ ಮತ್ತು ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಕಥಾಸಂಕಲನಗಳ ವಿಶ್ಲೇಷಣೆ

೧) ಬಾನುಮುಷ್ತಾಕ್‌ರವರ ಬೆಂಕಿಮಳೆ ಕಥಾಸಂಕಲನ:

"ಬೆಂಕಿಮಳೆ" ಕಥಾಸಂಕಲನವು 'ಬಾನು ಮುಷ್ತಾಕ್'ರವರ ೨ನೆಯ ಕಥಾಸಂಕಲನವಾಗಿದೆ. ಈ ಕಥಾಸಂಕಲನದಲ್ಲಿ ಖುರಾನಿನ ನೀತಿಯನ್ನು ತಮಗೆ ಬೇಕಾದಂತೆ ಬದಲಿಸಿಕೊಂಡಿರುವ ಪುರುಷ ಪ್ರಧಾನ ಸಮಾಜ ಹೆಣ್ಣಿಗೆ ಸ್ವಾತಂತ್ರ್ಯ ಕೊಡದೆ ಅಬಲೆಯನ್ನಾಗಿಸಿ ಚಿತ್ರಿಸಿರುವುದನ್ನು ಟೀಕಿಸಿದ್ದಾರೆ. ಇದರ ಉದ್ದೇಶವನ್ನು ಅವರೇ ಹೇಳುವಂತೆ "ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಪ್ರಪಂಚದಾದ್ಯಂತ ಧರ್ಮ ಮತ್ತು ದೇವರುಗಳನ್ನು ನಿರಾಯಾಸವಾಗಿ ಬಳಸಿಕೊಳ್ಳುವ ಹಲವಾರು ಚಾರಿತ್ರಿಕ ಸನ್ನಿವೇಶಗಳನ್ನು ನೋಡಿದ್ದೇವೆ. "ಮಹಿಳೆ" ನನ್ನ ಮುಖ್ಯ ಕಾಳಜಿ ಹಾಗಾಗಿ ನನ್ನ ಎಲ್ಲಾ ಕತೆಗಳಲ್ಲೂ ಅವಳು ವಿರಾಜಿಸಿದ್ದಾಳೆ ಎನ್ನುತ್ತಾರೆ.

ವೈಜ್ಞಾನಿಕವಾಗಿ ಇಷ್ಟು ಮುಂದಿರುವ ಸಮಾನತೆಯ ಘೋಷಣೆ ಎಲ್ಲೆಲ್ಲೂ ಮೊಳಗುತ್ತಿರುವ ಕಾಲದಲ್ಲೂ ಶೋಷಣೆಗೆ ಒಳಗಾಗಿ ಇರುವ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆಯಲು, ಮುಂದೆ ಬರಲು ಈ ಕಥಾಸಂಕಲನ ಸ್ಫೂರ್ತಿಯಾಗಿದೆ.

ಈ ಕಥಾಸಂಕಲನವು 'ಬೆಂಕಿಮಳೆ', 'ಕರಿನಾಗರಗಳು', 'ಹೃದಯದ ತೀರ್ಪು', 'ದೇವರು ಮತ್ತು ಅಪಘಾತ', 'ಹುಟ್ಟು', 'ಸಾವು', ಮತ್ತು 'ಕೆಂಪುಲುಂಗಿ' ಎಂಬ ಕಥೆಗಳನ್ನು ಒಳಗೊಂಡಿದೆ. ಈ ಎಲ್ಲಾ ಕಥೆಗಳು ಮುಸ್ಲಿಂ ಮಹಿಳೆಯರ ಹೀನಾಯ ಸ್ಥಿತಿಯನ್ನು ತಿಳಿಸುತ್ತದೆ. ಈ ಕಥೆಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಿಕೊಳ್ಳಬಹುದು.

೧) ಮೊದಲ ಭಾಗದಲ್ಲಿ ಹೆಣ್ಣಿನ ವಿವಿಧ ರೀತಿಯ ಶೋಷಣೆಯನ್ನು ವಿವರಿಸುವ ಉದ್ದೇಶ ಹೊತ್ತ ಕಥೆಗಳು.

೨) 'ಹುಟ್ಟು' ಹಾಗೂ 'ಸಾವು' ಮನೋವೈಜ್ಞಾನಿಕ ಕಥೆಗಳು

೩) ಮುಸ್ಲಿಮರ ಆಚರಣೆಯ ಹಿನ್ನೆಲೆಯಲ್ಲಿ ವರ್ಗ ತಾರತಮ್ಯವನ್ನು ಬಿಂಬಿಸುವ ಕಥೆಗಳು.

೧) ಬೆಂಕಿಮಳೆ:-

'ಬೆಂಕಿಮಳೆ' ಎಂಬುದು ಈ ಸಂಕಲನದ ಮೊದಲ ಕಥೆ ಮತ್ತು ಸಂಕಲನದ ಶೀರ್ಷಿಕೆಯೂ ಆಗಿದೆ. ಈ ಕತೆಯಲ್ಲಿ ಆಸ್ತಿಯ ವಿಚಾರ ಮುಖ್ಯವಾಗಿ ಕಾಣುತ್ತಲೇ ಒಳಗೆ

ಹೆಣ್ಣಿನ ಸ್ಥಿತಿಗತಿಗಳನ್ನು ಯಾತನೆಯಲ್ಲಿಯೇ ಉಳಿಸಿರುವುದನ್ನು ತೋರಿಸುತ್ತಾ ಹೋಗುತ್ತದೆ. ತಂದೆ ಸತ್ತು ಹತ್ತು ವರ್ಷಗಳಾದರೂ ಆಸ್ತಿಯನ್ನು ಪಾಲುಮಾಡದೆ ತಾನೇ ಅನುಭವಿಸುತ್ತಾ, ಹೆಂಡತಿಯ ಮನೆಯಿಂದಲೂ ಆಸ್ತಿಯ ಪಾಲನ್ನು ಪಡೆದಿದ್ದನು. ಈ ಮುತುವಲ್ಲಿ ಸಾಹೇಬ. ಇವನು ಮಸೀದಿಯ ಪ್ರಮುಖನಾಗಿ ಮುಸ್ಲಿಂ ಬಾಂಧವರಿಗೆ ಬೇಕಾದ ಅಧಿಕಾರಿಯೂ ಆಗಿದ್ದನು. ಹೀಗೆ ಊರಿನ ಜನಕ್ಕೆ ನ್ಯಾಯ ಹೇಳುವ ಇವನು ತಂಗಿಯರಿಗೆ, ಹೆಂಡತಿಯರಿಗೆ ತನ್ನ ಮನೆಯಲ್ಲಿ ಯಾವುದೇ ಸ್ಥಾನವನ್ನು ನೀಡಲಿಲ್ಲ. ಒಮ್ಮೆ ತಂಗಿ ಜಮೀಲಾ ಬಂದು ತನ್ನ ಪಾಲಿನ ಆಸ್ತಿಯನ್ನು ಕೇಳಿದಾಗ ಸಿಡಿಮಿಡಿಗೊಳ್ಳುತ್ತಾನೆ. ಅವನ ಹಿರಿಯ ತಂಗಿ 'ಸಕೀನಾ' ಗಂಡನನ್ನು ಕಳೆದುಕೊಂಡು ಮೂರು ಮಕ್ಕಳನ್ನು ತನ್ನ ದುಡಿಮೆಯಿಂದ ಸಾಕುವ ಸ್ಥಿತಿ ಇದ್ದರೂ ಅಣ್ಣನನ್ನೂ ಆಸ್ತಿ ಕೇಳದ ಸ್ವಾಭಿಮಾನಿ. ಮಗನಿಗೆ ಕೆಲಸ ಕೊಡಿಸುವ ಸಂದರ್ಭದಲ್ಲಿ ಇನ್‌ಪ್ಲೊಯೆನ್ಸ್ ಪಡೆಯಲು ಊರಿನ ಬೇರೆ ಸಾಮಾನ್ಯರಂತೆ ಸಾಲಿನಲ್ಲಿ ನಿಂತು ಅರ್ಜಿ ನೀಡಿ ತೆರಳುತ್ತಾಳೆ. ಊರಿಗೆಲ್ಲಾ ಉಪಕಾರಿಯಂತೆ ವರ್ತಿಸುವ ಮುತುವಲ್ಲಿ ಮನೆಯಲ್ಲಿ ಹೆಂಡತಿಯಾಗಿ ಸ್ವೀಕರಿಸಿದ್ದ 'ಆರೀಫ'ಳಿಗೆ ಯಾವುದೇ ಬೆಲೆಯನ್ನು ನೀಡುತ್ತಿರಲಿಲ್ಲ. ಅವಳ ಮಾತುಗಳಿಗೆ ಬೆಲೆಯೇ ನೀಡುತ್ತಿರಲಿಲ್ಲ. 'ಜಮೀಲಾ' ಆಸ್ತಿಯನ್ನು ಕೇಳಲು ಬಂದಾಗ, 'ಆರೀಫ' ಮೆದುವಾದ ದನಿಯಲ್ಲಿ ಅವನಿಗೆ 'ಹಕ್‌ದಾರ್ ತರಸೆತೋ ಅಂಗಾರ್‌ಕಾನ್ಹೊ ಬರ್‌ಸೆ' (ಹಕ್ಕುದಾರರು ಮೊರೆ ಇಟ್ಟಲ್ಲಿ ಬೆಂಕಿಮಳೆ ಬಂದೀತು) ಎಂದು ಹೇಳುತ್ತಾಳೆ.[೨೪] ಹಕ್ಕುದಾರ ವಾರಸುದಾರ ಹೊಂದಬೇಕಾದವನು. ಆದ್ದರಿಂದ ಅವನಿಗೆ ಅವನ ಪಾಲಿನದನ್ನು ಕೊಟ್ಟು ಬಿಡಬೇಕೆಂದು ಹೇಳುತ್ತಾಳೆ. ಬೇರೆಯವರ ಹಕ್ಕನ್ನು ಆಸ್ತಿಯನ್ನು ಕಸಿದುಕೊಂಡು ಬಾಳುವುದು ಸರಿಯಾದ ಧರ್ಮವಲ್ಲ. ಹಕ್ಕುದಾರರು ತಮ್ಮ ಪಾಲಿನ ಆಸ್ತಿಯನ್ನು ಕೇಳಿದಾಗಲಾದರೋ ಅದನ್ನು ಕಾಡಿಸದೇ ತಡ ಮಾಡದೆ ಕೊಡಬೇಕು ಅವರು ಕೇಳುವಂತೆ ಮಾಡಬಾರದು.

ಮುದುಕನೊಬ್ಬ ತಮ್ಮ ಕಡೆಯವನೊಬ್ಬ ಪೇಯಿಂಟರ್‌ನ ಶವಕ್ಕಾಗಿ ಅಧಿಕಾರಿಗಳ ಬಳಿಯೆಲ್ಲಾ ಓಡಾಡಿ ಹೂಳಿದ್ದನ್ನು ತೆಗೆಸಿ ಮತ್ತೆ ತಮ್ಮ ಧರ್ಮದ ವಿಧಿಗಳಂತೆ ಸಂಸ್ಕಾರ ಮಾಡಿಸುತ್ತಾನೆ. ಆದರೆ ಅದು ಮುಸ್ಲಿಂನ ಹೆಣವೋ ಅಥವಾ ಬೇರೆ ಧರ್ಮಿಯನದೋ ಎಂಬ ವಿಚಾರವನ್ನು ಮಾತ್ರ ಅವನು ಸರಿಯಾಗಿ ತಿಳಿಯನು. ಅದರ ಸಂಸ್ಕಾರಕ್ಕಾಗಿ ಜನರ ಬಳಿ ದುಡ್ಡನ್ನು ಸಹ ಸಂಗ್ರಹಿಸುತ್ತಾನೆ. ಹೀಗೆ ಮುಸ್ಲಿಮರಿಂದ ಘನತೆ ಸಂಪಾದಿಸಿದರೂ ಸ್ತ್ರೀಯರ ವಿಚಾರದಲ್ಲಿ ಇವನು ಸ್ವಲ್ಪವು ಯೋಚಿಸುವುದಿಲ್ಲ.

ಈ ಕಥೆಯಲ್ಲಿ ಬರುವ ಕಾಗೆಯ ಪ್ರಸಂಗದಿಂದ ಕಾಗೆಗಳಲ್ಲಿ ಅಥವಾ ಮತ್ತಾವುದೇ ಪ್ರಾಣಿಗಳಲ್ಲಿರುವ ಒಗ್ಗಟ್ಟಿನ ಗುಣವನ್ನು ತೋರಿಸುತ್ತದೆ. ಆದರೆ

೨೪. ಬಾನುಮುಷ್ತಾಕ್, ಬೆಂಕಿಮಳೆ, ಪು. ೨.

ಬುದ್ಧಿಜೀವಿಯಾದ ಮನುಷ್ಯನಿಗೆ ತನ್ನ ತಂಗಿ, ಬಾಂಧವರು ಅನುಭವಿಸುತ್ತಿರುವ ನೋವು ಕಷ್ಟಗಳು ಕಾಣಲಾರವು. ಮುತುವಲ್ಲಿ ಈ ವಿಚಾರದಲ್ಲಿ ಕಾಗೆಗಳಿಗಿಂತಲೂ ಕೀಳು ಎನ್ನಬಹುದು.

ಮನೆಯಲ್ಲಿ ೧೫ ದಿನಗಳಿಂದ ಕಾಯಿಲೆ ಬಿದ್ದಿರುವ ಮೆದುಳು ಜ್ವರದಂತಹ ದೊಡ್ಡ ಜ್ವರದಿಂದ ನರಳುತ್ತಿರುವ 'ಅನ್ಸರ್' ಮಗನ ಕಡೆಗೆ ಅವನ ಗಮನ ಸ್ವಲ್ಪವೂ ಇಲ್ಲ. ಹೆಂಡತಿ ಆರೀಫ ಮಗ ಮತ್ತು ಮನೆಯ ಪೂರ್ಣ ಜವಾಬ್ದಾರಿ ಹೊತ್ತಿದಳಾದರೂ, ಅವನಿಗೆ ಅದರ ಬಗೆಗೆ ಗಮನವಿಲ್ಲ ಇದು ಇಲ್ಲಿನ ಮುಖ್ಯ ಅಂಶ. ಮುತುವಲ್ಲಿಯ ಅಧಿಕಾರದಲ್ಲಿರುವ ''ಅನ್ಸರ್' ಮನೆಯಲ್ಲಿಯೂ, ಸಮಾಜದಲ್ಲಿಯೂ ಅದಕ್ಕೆ ತಕ್ಕಂತೆ ವರ್ತಿಸಲು ಸಮರ್ಥನಾಗಿರಲಿಲ್ಲ.

ಜಮೀಲ ತಾನೂ ಆಸ್ತಿ ಕೇಳಲು ಬರುವುದು ಸರಿಯಲ್ಲವೆನಿಸಿದರೂ, ಧರ್ಮದಲ್ಲಿ ನಿಯುಕ್ತನಾಗಿರುವುದುನ್ನು ಕೊಡದಿರುವುದು ಮುತುವಲ್ಲಿಯ ದ್ರೋಹ. ಅವಳು ಮಾತು ''ನನ್ನ ವಿಚಾರವಂತೂ ಹೋಗ್ಲಿ, ಸಕೀನ ಅಕ್ಕನದ್ದೇಳಿ ಇತ್ತ ಗಂಡನೂ ಇಲ್ಲ. ಅತ್ತ ದುಡಿಮೆಯೂ ಇಲ್ಲ''[೨೫] ಎಂಬ ಮಾತುಗಳು ಸಹಾನೂಭೂತಿಯ ಪರವಾಗಿದೆ. ಇಲ್ಲಿ ಬರುವ ಆರೀಫಳು ಕೂಡ ಹೆಣ್ಣಿನ ನ್ಯಾಯದ ಧರ್ಮದ ಪರವಾಗಿರುವುದು ಕಂಡುಬರುತ್ತದೆ. ಅವಳು ಇಲ್ಲಿ ನೋವನ್ನು ಅನುಭವಿಸುತ್ತಿರುವ ಹೆಣ್ಣು.

೨) ಕರಿನಾಗರಗಳು:

'ಕರಿನಾಗರಗಳು' ಕಥೆಯಲ್ಲಿ ಕ್ರೂರ ಪುರುಷನನ್ನು ರೂಪಕವಾಗಿ ಬಳಸಿರುವುದು ಸೂಕ್ತವಾಗಿದೆ. ಪುರುಷ ಕೇವಲ ನಾಗರಹಾವಲ್ಲ, 'ಕರಿನಾಗರ' ಅದು ಹೊರ ನೋಟಕ್ಕೂ ವಿಲಕ್ಷಣವೇ ಅದರ ಮೈಮನಗಳೆಲ್ಲಾ ವಿಷಭರಿತವಾಗಿರುತ್ತದೆ. ಸ್ತ್ರೀಯರ ಬಗೆಗಿನ ಪುರುಷನ ಅಸಹನೆಯೂ ನಾಗರಹಾವಿನ ವಿಷದಂತೆ ಅಪಾಯಕಾರಿಯಾದ್ದರಿಂದ ಈ ಶೀರ್ಷಿಕೆ ಇದಕ್ಕೆ ಔಚಿತ್ಯವೆನಿಸುತ್ತದೆ.

ಗಂಡು ಮಗುವೊಂದನ್ನು ಹಡೆಯದ ಕಾರಣದಿಂದಾಗಿ ಹೆಣ್ಣಿನ ಮೇಲಾದ ಪರಿಣಾಮ, ಶೋಷಣೆಯ ಚಿತ್ರಣವು ಈ ಕತೆಯಲ್ಲಿದೆ. ಈ ಕಥೆಯ ಕೇಂದ್ರ 'ಅಶ್ರಫ್', ಯಾಕೋಬ್‌ನ ಹೆಂಡತಿಯಾಗಿ ಮೂರು ಮಕ್ಕಳನ್ನು ಹೆತ್ತರೂ ಗಂಡುಮಗುವಾಗಲಿಲ್ಲ. ಅವನಿಗಿದ್ದ ಆಸೆಯೆಂದರೆ ತನ್ನಂತೆ ತನ್ನ ಗಂಡುಮಗು ಆಟೋ ಓಡಿಸಬೇಕೆಂಬುದು. ಅದಕ್ಕಾಗಿ ಮತ್ತೊಂದು ಮದುವೆಯೂ ಆಗುತ್ತಾನೆ. ಮೊದಮೊದಲು ಅಶ್ರಫ್‌ಳನ್ನು ರಮಿಸಿ, ತನ್ನವಳನ್ನಾಗಿಸಿಕೊಳ್ಳುತ್ತಿದ್ದ 'ಯಾಕೊಬ್'ನಿಗೆ ಅವಳು ಮೂರು ಹೆಣ್ಣುಮಕ್ಕಳ ತಾಯಿಯಾದಾಗ ಬೇಡವಾದಳು. ಆದರೆ ಇದನ್ನು ಅಶ್ರಫ್ ಮೊದಲಿನಿಂದ

---

೨೫. ಬೆಂಕಿಮಳೆ – ಬಾನುಮುಷ್ತಾಕ್, ಪು. ೪.

ವಿರೋಧಿಸುತ್ತಲೇ ಇದ್ದರೂ ಅವಳ ವಿರೋಧಕ್ಕೆ ಬೆಲೆ ಇಲ್ಲದಂತಾಯಿತು. ಕಾರಣ ಮುಸ್ಲಿಂ ಧರ್ಮದಲ್ಲಿ ಗಂಡು ಎಷ್ಟು ಮದುವೆಯನ್ನು ಬೇಕಾದರೂ ಆಗಬಹುದು. ಮೂರನೇ ಮಗಳು ಮುನ್ನಿ ಹುಟ್ಟಿದ ನಂತರ ಯಾಕೋಬ್ ಅವಳನ್ನು ನೋಡಿಕೊಳ್ಳದೆ ಇದ್ದದ್ದು ಅವಳು ದುಃಸ್ಥಿತಿಗಿಳಿಯಲು ಕಾರಣವಾಯಿತು. ಅವಳು ಜುಲೇಖಳ ಮನೆಗೆ ಕೆಲಸಕ್ಕೆ ಹೋದರೂ ಮುನ್ನಿಯ ಹಸಿವು, ಕಾಯಿಲೆಗಳು ದೈತ್ಯಕಾರದಲ್ಲಿತ್ತು. ಅವಳ ದುಡಿಮೆ ಯಾವುದಕ್ಕೂ ಸಾಲುತ್ತಿರಲಿಲ್ಲ. ಅವರಿಗೆ ಹಾಸಲು, ಹೊದಿಯಲು, ಚಾಪೆ ಕೂಡ ಇರಲಿಲ್ಲ. ಕೆಲಸಕ್ಕೆ ಹೋದಾಗಲೂ ಅಶ್ರಫಗೆ ಮಕ್ಕಳದೇ ಚಿಂತೆ. ಆದರೆ ಅವಳ ಆ ಸ್ಥಿತಿಗೆ ಪುರುಷ ಪ್ರಪಂಚದ ಕಣ್ಣು ಕುರುಡಾಗಿ ವರ್ತಿಸುವುದೇ ಕಾರಣ. ಅವಳ ಗಂಡ ಮತ್ತು ಮಸೀದಿಯ ಮುತ್ತುವಲ್ಲಿಯಾದ 'ಅಬ್ದುಲ್ ಖಾದರ್ ಸಾಹೇಬರು ಇವಳ ಈ ಸ್ಥಿತಿಗೆ ಕಾರಣರು. ಮಸೀದಿಯ ಮುತುವಲ್ಲಿ ಪುರುಷ ಸಮಾಜದ, ಮುಸ್ಲಿಂ ಸಮಾಜದ ಪ್ರತಿನಿಧಿ ಅವನಿಗೆ ಸದಾ ಹೆಂಡತಿಯ ಸೌಂದರ್ಯದ ಆಕರ್ಷಣೆ ಅವಳನ್ನು ತನ್ನ ಅಧಿಕಾರದಿಂದ ಮಕ್ಕಳಾಗದಂತೆ ಹೆಂಡತಿ ಚಿಕಿತ್ಸೆ ಮಾಡಿಸಿಕೊಳ್ಳದೆ ಇರುವಂತೆ ನಿಯಂತ್ರಿಸುತ್ತಾನೆ. ಆದ್ದರಿಂದ ಅವನು ಯಾಕೋಬನಿಗೆ ಸದಾ ಬೆಂಬಲವಿತ್ತೇ ಇದ್ದನು. ಜೊತೆಗೆ ಯಾಕೋಬ್ ಅವನಿಗೆ ಊಟ, ಹೆಂಡ ಕೊಡಿಸುತ್ತಿದ್ದನು. ಇದರಿಂದ ಅಶ್ರಫ್ ಮುತುವಲ್ಲಿಗೆ ನೀಡಿದ ಅರ್ಜಿಗೆ ಯಾವುದೇ ಬೆಲೆ ನೀಡದೆ ನಿರ್ಲಕ್ಷಿಸಿದ. ಸದಾ ಅವಳು ಕಾಯುವಂತೆ ಮಾಡುತ್ತಿದ್ದ, ಆದರೆ ಅಮೀನಾಗೆ ಅಶ್ರಫ್ ಬಂದಾಗ ಬೆಂಬಲ ಕೊಡುತ್ತಾಳೆ. ತನ್ನ ಸ್ಥಿತಿಯನ್ನು ಸುಧಾರಿಸಲು ಅಶ್ರಫ್‌ಗೆ ಜುಲೇಖಳ ಬಳಿ ಕೇಳಿಕೊಂಡು ಬರಲು ತಿಳಿಸುತ್ತಿದ್ದಳು. ಮಗಳು ಮುನ್ನಿಗೆ ಆಹಾರವಿಲ್ಲದಿದ್ದಾಗ ತನ್ನ ಮನೆಯ ಹಿಂದೆ ಅಶ್ರಫ್‌ಳನ್ನು ಕರೆದು ಊಟಕೊಡುತ್ತಿದ್ದಳು.

ಈ ಕಥೆಯಲ್ಲಿ ಬರುವ ಯಾಕೊಬ್ ಮತ್ತು ಅಬ್ದುಲ್ ಖಾದರ್ ಸಾಹೇಬರನ್ನು ಬಿಟ್ಟರೆ ಅಮೀನ, ಜುಲೇಖ ಇತ್ಯಾದಿ ಹೆಂಗಸರೆಲ್ಲಾ ಇವಳನ್ನು ಆ ಸ್ಥಿತಿಯಿಂದ ಪಾರು ಮಾಡಬೇಕೆಂಬ ಹಂಬಲವಿದೆ. ಆದ್ದರಿಂದಲೇ ಅವರು ತಮ್ಮ ಮನೆಯ ಕಾಂಪೌಂಡಿನಲ್ಲಿ ನಿಂತು ಮುತುವಲ್ಲಿಯೂ ನೀಡುವ ತೀರ್ಮಾನಕ್ಕೆ ಕಾಯುತ್ತಿದ್ದರು. ಅಶ್ರಫ್ ನ್ಯಾಯ ಸಿಗದೆ, ಮುನ್ನ ಹಸಿವು, ಕಾಯಿಲೆ, ನಿಶಕ್ತಿ, ಹೊಡೆತಗಳಿಂದ ಸತ್ತಾಗ ಮುತುವಲ್ಲಿಯ ಬಗ್ಗೆ ಕೋಪಗೊಳ್ಳುವುದು. ಮಾರನೆಯ ದಿನ ಅವನು ಮಸೀದಿಯಿಂದ ಹೊರಟಾಗ ಅವರು ತೋರುವ ವರ್ತನೆಯಿಂದ ತಿಳಿಯಬಹುದು. ಮುತುವಲ್ಲಿ ಬೆಳಗಿನ 'ನಮಾಜ್' (ಪ್ರಾರ್ಥನೆ) ಅನ್ನು ಮುಗಿಸಿ ಬರುವಾಗ ಜನರು ಹೆದರಿ ತಾವು ಮಾಡುತ್ತಿದ್ದ ಕೆಲಸ ಬಿಟ್ಟು ಹೋಗುತ್ತಿದ್ದವರು, ಅವನನ್ನು ಲೆಕ್ಕಿಸದೇ ಬೇಕೆಂತಲೇ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅವನನ್ನು ಹಿಯಾಳಿಸುತ್ತಾರೆ. "ಒಬ್ಬಳು 'ಅಲ್ಲಾಹನ ಶಾಪ ನಿನ್ನ ಮೇಲೆ ಎರಗಲಿ', ಸೈತಾನನನ್ನು ಮುಖತಃ ಕಂಡಂತಾಯಿತಲ್ಲ.. ನಾಯಿ ಅಂದ್ರೆ ನಾಯಿ, 'ಹೇ!

ಅಲ್ಲಾಹ್... ನಿನ್ನ ಕೃಪೆಯಿಂದ ಈ ದರಿದ್ರ ಹುಂಜಗಳ ವಂಶ ನಾಶವಾಗಲಿ, ಮಾನ ಮರ್ಯಾದೆ ಇಲ್ಲ. ಅಲ್ಲಾಹುವಿನ ಭಯವಿಲ್ಲ... ಗೋರಿಯ ಹುಳುಗಳಿಗಾಗಿ ದೇಹ ಬೆಳೆಸ್ತಿರೋ... ಕತ್ತೆ ಮುಖದವನೇ ಹಾಳಾಗಿ ಹೋಗು ನಿನಗೆ ಒಳ್ಳೆದಾಗೋಲ್ಲ.. ಖಿಯಾಮತ್‌ನ ದಿನ ನೀನು ಹಂದಿ ಮೂತಿಯಿಂದ ಹುಟ್ಟೇಯಾ ... ಕರಿನಾಗರಗಳು ನಿನ್ನನ್ನು ಸುರುಳಿ ಸುತ್ತಿರಲಿ"[೨೬] ಎಂದು ಬಯ್ಯುತ್ತಾರೆ. ಕಥೆಗಾರ್ತಿಯ ಈ ಕಥೆಯಲ್ಲಿ ಹೆಂಗಸರೆಲ್ಲರ ಮಾತುಗಳಲ್ಲಿ ಪುರುಷನ ಕ್ರೂರ ನಡತೆಯ ವಿರುದ್ಧ ಸಿಡಿದೇಳುವ ಚಿತ್ರಣವಿದೆ.

ಮುತುವಲ್ಲಿ ಸಾಹೇಬ ಮುಖ್ಯಸ್ಥನಾಗಿ ನ್ಯಾಯ ನೀತಿ ಉಪಕಾರಿ ಆಗಬೇಕಾದವನು ಉನ್ನತ ಸ್ಥಾನಕ್ಕೆ ತಕ್ಕಂತೆ ವರ್ತಿಸದೇ ಅಮಾನವೀಯವಾಗಿ ವರ್ತಿಸುವುದು ಅವನ ಅಂತರಾಳದ ವಿಷದ ಕೆಟ್ಟ ಮನಸ್ಸನ್ನು ಸೂಚಿಸುತ್ತದೆ.

ಅಶ್ರಫ್ ಗಂಡ ಮತ್ತು ಮುತುವಲ್ಲಿಯ ಕಠೋರ ನುಡಿ ಮತ್ತು ವಕ್ರ ಪ್ರಶ್ನೆಗಳಿಗೆ ಉತ್ತರಿಸಲು ಆಗದೆ ಇರುವುದು ಅವಳ ಅನಕ್ಷರತೆ. ಆದ್ದರಿಂದಲೇ ಅವಳು ಮುತುವಲ್ಲಿಯ ಮಾತುಗಳನ್ನು ಒಪ್ಪಿ, ತಾನು ತನ್ನ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಾಳೆ. ಆದ್ದರಿಂದ ಇಲ್ಲಿ ಮಹಿಳೆಯರಿಗೆ ಶಿಕ್ಷಣ ಮತ್ತು ಮಾತನಾಡುವ ಶಕ್ತಿ ಇರಬೇಕೆಂಬ ಆಶಯವನು, ಕಥೆಗಾರ್ತಿ ವ್ಯಕ್ತಪಡಿಸಿದ್ದಾರೆ.

೨) ಹೃದಯದ ತೀರ್ಪು:

ಈ ಕತೆಯಲ್ಲಿ ಹೆಣ್ಣಿನಿಂದಲೇ ಮತ್ತೊಂದು ಹೆಣ್ಣಿಗಾಗುವ ಶೋಷಣೆಯ ನೋವಿನ ಚಿತ್ರವಿದೆ. 'ಯೂಸುಫ್' ಮತ್ತು 'ಅಖಿಲ' ಗಂಡಹೆಂಡತಿ. 'ಮೆಹಬೂಬ್ಬಿ ಯೂಸುಫ್'ನ ತಾಯಿ. ಗಂಡ ಸತ್ತಾಗಿನಿಂದ ಮೆಹಬೂಬ್ ಬೀ ಯೂಸುಫ್‌ನನ್ನು ಅತ್ಯಂತ ಕಷ್ಟದಿಂದ ದುಡಿದು ಸಾಕಿದಳು. ತುತ್ತು ಅನ್ನಕ್ಕೂ ಕಷ್ಟಪಡುವ ಸ್ಥಿತಿ ಅವಳಿಗಿತ್ತು. ಊಟ ಕಡಿಮೆ ಇದ್ದಾಗ ಮಗನಿಗೆ ಕಥೆ ಹೇಳುತ್ತಾ ಮೊದಲೇ ಕೈತೊಳೆಯುವಂತೆ ಮಾಡುತ್ತಿದ್ದಳು. ಇದು ಅವರ ಬಡತನದ ಮಟ್ಟವನ್ನು ತಿಳಿಸುತ್ತದೆ. ಯೂಸುಫ್‌ಗೆ ಆ ಕಾರಣದಿಂದಲೇ ತಾಯಿಯ ಮೇಲೆ ಅಪಾರ ಪ್ರೀತಿಯಿತ್ತು. ಶಾಲೆಯ ಶಿಕ್ಷಣ ಪಡೆಯದಿದ್ದರೂ ಹಣ್ಣು, ಸೌತೆಕಾಯಿಗಳನ್ನು ತೆಳುವಾಗಿ ಹೆಚ್ಚಿ ಮಾರಾಟ ಮಾಡುತ್ತಿದ್ದನು. ಹೀಗೆಯೇ ವ್ಯಾಪಾರವನ್ನು ಅಭಿವೃದ್ಧಿಗೊಳಿಸಿ, ಹಣ್ಣಿನ ಅಂಗಡಿಯನ್ನೇ ಇಡುವಷ್ಟು ಮುಂದುವರೆದಿದ್ದ. ತಾಯಿ ಕಷ್ಟದಿಂದ ಮಗನನ್ನು ಸಾಕಿ 'ಅಖಿಲ' ಎಂಬ ಹುಡುಗಿಯೊಡನೆ ವಿವಾಹವನ್ನು ಮಾಡಿಸಿದ್ದಳು. ಮಗ ಸೊಸೆಯರಿಗೆ ರಾಜ, ಮುನ್ನಾ, ಬಾಬು, ಚೋಟು ಎಂಬ ನಾಲ್ಕು ಗಂಡುಮಕ್ಕಳು ಇದ್ದರು. ಹೀಗಾಗಿ ಅವರಿಗೆ ಜೀವನಕ್ಕೆ

೨೬. ಬೆಂಕಿಮಳೆ – ಬಾನುಮುಷ್ತಾಕ್, ಪು. ೩೨.

ಯಾವುದೇ ಆರ್ಥಿಕ ಸಮಸ್ಯೆಯಂತೂ ಆಗಲಿಲ್ಲ. 'ಯೂಸುಫ' ಕೈತುಂಬ ದುಡಿಯುತ್ತಿದ್ದ. ಆದರೆ ಅವನಿಗಿದ್ದ ದೊಡ್ಡ ಚಿಂತೆಯಿದ್ದರೆ ಹೆಂಡತಿಯಿಂದ ತಾಯಿಗೆ ಆಗುತ್ತಿದ್ದ ನೋವು. ಯೂಸುಫ್ ತನ್ನ ಮೇಲೆ ಹೆಚ್ಚಿನ ಪ್ರೀತಿ ತೋರದೆ ತಾಯಿಯ ಮೇಲೆ ಈಗಲೊ ಅಷ್ಟೇ ಪ್ರೀತಿಯನ್ನು ಉಳಿಸಿಕೊಂಡಿದ್ದು ಅವಳ ಅಸಹನೆಗೆ ಕಾರಣವಾಗಿತ್ತು. ಆದರೂ ಅವಳದು ಅತಿಯಾದ ಬಯಕೆ. ಪ್ರೀತಿಯನ್ನು ಯಾರಿಂದಲೊ ಕೇಳಿ ಪಡೆಯಲಾಗದು. ಅದು ಹೃದಯದಿಂದ ಬರುವಂತದ್ದು. ಪ್ರೀತಿಯಿಂದ ದ್ವೇಷವನ್ನು ಗೆಲ್ಲಬಹುದು. ಆದರೆ ಅವಳು ತನ್ನ ಅಸಹನೆಯಿಂದ ಇರುವ ಪ್ರೀತಿಯನ್ನು ಕಳೆದುಕೊಳ್ಳುವ ಸ್ಥಿತಿ ತಲುಪಿದಳೆನ್ನಬಹುದು. ಯೂಸುಫ್, ಮನಸ್ಸು ಮಾಡಿದ್ದರೆ ಅಖಿಲಳನ್ನು ಬಿಟ್ಟು ಬಿಡಬಹುದಿತ್ತು. ಆದರೆ ಅವನಿಗೆ ತನ್ನ ತಾಯಿಯ ಮೇಲಿದ್ದಷ್ಟೇ ಪ್ರೀತಿ ಅವಳ ಮೇಲೂ ಇದ್ದುದರಿಂದಲೇ ಅವಳಿಗೆ ಯಾವುದೇ ತೊಂದರೆ ಕೊಡದೆ ಸಾಕುತ್ತಿದ್ದನು. ಆದರೂ ಅವನು ತನ್ನ ತಾಯಿಯ ಮೇಲೆ ದ್ವೇಷದಿಂದ ಜಗಳ ಕಾಯುತ್ತಿದ್ದುದು ಅವನು ತನ್ನ ನಿರ್ಧಾರ ಬದಲಿಸುವಂತಾಯಿತು. ಮೊದಲೇ ತನ್ನ ತಾಯಿಯನ್ನು, ಹೆಂಡತಿಯನ್ನು ರಕ್ಷಿಸಲು ಮನೆಯ ಮುಂದಿನ ಕೋಣೆಗೆ ಇದ್ದ ಬಾಗಿಲಿಗೆ ಗೋಡೆ ಕಟ್ಟಿ ಬೇರೆ ವಾಸವಾಗಿರುವಂತೆ ವ್ಯವಸ್ಥೆ ಮಾಡಿದ್ದ.

ಮಧ್ಯಾಹ್ನ ಅಖಿಲಾಳ ಮನೆಯಲ್ಲಿ ಊಟ ಮಾಡಿದರೆ, ರಾತ್ರಿ ತಾಯಿಯ ಮನೆಯಲ್ಲಿ ಊಟ ಮಾಡುತ್ತಿದ್ದ. ಹಲವು ದಿನ, ವರ್ಷಗಳ ಜಗಳದ ನಂತರ ತಾಯಿಗೆ ಬೇರೆ ಮದುವೆಮಾಡಿ ನೆಮ್ಮದಿಯಿಂದ ಇರುವಂತೆ ಮಾಡುವ ಎಂದು ಯೂಸುಫ್ ಮಾಡುವ ನಿರ್ಧಾರ ಅಖಿಲಾಳನ್ನು ಭಯಗೊಳಿಸಿತು. ಅದನ್ನು ತಡೆಯಲು ಅವಳು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು.

ಇಲ್ಲಿ ತಾಯಿ ವೃದ್ಧೆಯಾಗಿಯೂ ಮತ್ತೊಂದು ಮದುವೆಗೆ ಸಮತ್ತಿಸುದುದೇ ಧರ್ಮದ ಕಟ್ಟಳೆಯನ್ನು ಮೀರುವ ತೀವ್ರ ಪರಿವರ್ತನೆಯ ನಿರ್ಧಾರವಾಗಿ ಕಾಣುತ್ತದೆ. ಯೂಸುಫ್ ಇಷ್ಟು ವಯಸ್ಸಾದ ತಾಯಿಗೆ ಮದುವೆ ಮಾಡುವುದು ಮುಸ್ಲಿಂ ಸಮುದಾಯದಲ್ಲಿ ಆಗಬಹುದಾದ ಹೊಸ ಸಾಧ್ಯತೆಗಳನ್ನು ಎತ್ತಿಹಿಡಿಯುತ್ತದೆ. ಗಂಡ-ಹೆಂಡತಿ ಸತ್ತರೆ ಎಷ್ಟು ಬೇಕಾದರೂ ಮದುವೆಯಾಗಬಹುದೆಂಬ ನಿಯಮವಿದೆ. ಆದರೆ ಹೆಣ್ಣಿಗೆ ಆ ಅವಕಾಶಗಳಿಲ್ಲ. ಇಲ್ಲಿ ತಾಯಿಗೆ ಮದುವೆಮಾಡಿಸುವ ಮೂಲಕ ಆಗಬಹುದಾದ, ಮಾಡಬಹುದಾದ್ದನ್ನು ಯೂಸುಫ್‌ನ ಮೂಲಕ ಲೇಖಕಿ ತರುತ್ತಾರೆ. ತಾಯಿಗೆ ಮಗನೊಬ್ಬನ ಮದುವೆಮಾಡುವುದು ವಿಪರ್ಯಾಸವಾಗಿ ಕಂಡರೂ, ಇಲ್ಲಿ ಹೊಸ ಸಾಧ್ಯತೆಯನ್ನು ಎತ್ತಿಹಿಡಿದಿರುವುದು ಗಮನಿಸಬೇಕಾದ ಅಂಶ.

ಕೊನೆಯಲ್ಲಿ ಮಗನ ಪ್ರಯತ್ನಗಳನ್ನು ಸಾರ್ಥಕಗೊಳಿಸುವಂತೆ ತಾಯಿ ಆಡುವ ಮಾತುಗಳು ಹೃದಯದಿಂದ ಬಂದವುಗಳು. ಆದ್ದರಿಂದ ಇಲ್ಲಿ "ಹೃದಯದ ತೀರ್ಪು" ಎಂಬ ಶೀರ್ಷಿಕೆ ಒಪ್ಪುತ್ತದೆ.

೪) ದೇವರು ಮತ್ತು ಅಪಘಾತ:

ಈ ಕಥೆಯಲ್ಲಿ ಒಡಲಿನಾಳದಲ್ಲಿ ಬಡತನ, ಹಸಿವುಗಳಿಂದ ಬೆಂದು ಪ್ರಾಣಿಯಂತೆ ಜೀವಿಸುತ್ತಿರುವ ಕರುಣಾಜನಕ ಹೆಣ್ಣಿನ ಸ್ಥಿತಿ ಈ ಕಥೆಯಲ್ಲಿ ಕರುಳು ಮಿಡಿಯುವಂತೆ ಚಿತ್ರಿತವಾಗಿದೆ. ಸಾವು ಎಂಬುದು ಒಬ್ಬರ ಬಾಳಿನ ಅಂತ್ಯ ಮತ್ತೊಬ್ಬರಿಗೆ ಜೀವನವಾಗುವ ಸಾಧ್ಯತೆಯನ್ನು ಇಲ್ಲಿ ಹೇಳುತ್ತಾರೆ.

ಊರಿನ ಕೊನೆಯ ಕೆರೆಯ ಅಂಗಳದಲ್ಲಿ 'ಮರಿಯಮ್‌ಬೀ' ಮಳೆ ಬಂದರೆ ಮುಳುಗಿ ಹೋಗುವ ಗುಡಿಸಲಿನಲ್ಲಿ ವಾಸವಾಗಿರುವಾಕೆ. ಇವಳ ಮಗಳು ಹಸೀನಾ ೨೦ ದಿನಗಳ ಬಾಣಂತಿ ಮಗುವಿಗೆ ಕುಡಿಸಲು ಹಾಲು ಇಲ್ಲದ ಸ್ಥಿತಿ ಇವರದು. ಸತ್ತ ಹೆಂಗಸರ ಹೆಣಕ್ಕೆ 'ಗುಸುಲ್' ಶಾಸ್ತ್ರವನ್ನು ಮಾಡುವ ಕಾಯಕದಲ್ಲಿ ತೊಡಗಿದ್ದುದರಿಂದ ಮುಸ್ಲಿಂ ಬಾಂಧವರೆಲ್ಲಾ ಅವಳನ್ನು 'ಗುಸ್ಸಾಲಿನ್ ಚಿಕ್ಕಮ್ಮ' ಎಂದೇ ಕರೆಯುತ್ತಿದ್ದರು. ಜೊತೆಗೆ ಕಾಫಿ ತೋಟದ ಮಾಲೀಕರ ಮನೆಯಲ್ಲಿ ಜೀತಕ್ಕಿದ್ದು ಜೀವನ ನಡೆಸುತ್ತಿದ್ದ ಅವಳಿಗೆ ಈಗ ೨೭ ದಿನಗಳಿಂದ ಕೆಲಸವಿಲ್ಲದೆ ಇದ್ದ ಸ್ಥಿತಿಯೂ ದಾರಿದ್ರ್ಯ ತಲುಪಿ ಕಂಗಾಲಾಗುತ್ತಾಳೆ. ಈ ನಡುವೆ ಮಗಳಿಗೆ ತನ್ನ ಅತ್ತೆಯ ಮನೆಯವರನ್ನೆಲ್ಲಾ ಸಂತಸ-ಪಡಿಸಬೇಕೆಂದು ಆಸೆ ಬೇರೆ.

ಕೆಲಸವಿಲ್ಲದೆ ಮಳೆಯ ಗಜಿಬಿಜಿ, ಹೊಟ್ಟೆಹಸಿವು, ಕಾಫಿಪುಡಿ ಇಲ್ಲದ ಸ್ಥಿತಿ ಇವೆಲ್ಲವುಗಳ ನಡುವೆ 'ಮರಿಯಮ್‌ಬೀ'ಗೆ ಉಂಟಾದ ಆಲೋಚನೆ ಮಾನವೀಯತೆ-ಯನ್ನು ಮೀರಿದ ಮಾನವ ಸಹಜವಾದುದಾಗಿದೆ. ಅವಳಿಗೆ ಖಬರ್‌ಸ್ತಾನ್ (ಸ್ಮಶಾನ) ಕರೀಮ್ ಎಂಬ 'ಗುಸ್ಸಾಲಿನ್' ತನ್ನ ಕಷ್ಟದ ಸಂದರ್ಭದಲ್ಲಿ ಮಾಡುತ್ತಿದ್ದ ಕೆಲಸ ನೆನಪಿಗೆ ಬರುತ್ತದೆ. ಮುಸ್ಲಿಮರ ನಂಬಿಕೆಯ ಪ್ರಕಾರ ರಾತ್ರಿವೇಳೆಯಲ್ಲಿ 'ಖಬರ್ಸ್ತಾನ್ (ಸ್ಮಶಾನ)ದಲ್ಲಿರುವ ಗೋರಿಗೆ ಗುದ್ದಲಿಯನ್ನು ಅಡಿಮೇಲು ಮಾಡಿ ಬಡಿದರೆ ಮುಸ್ಲಿಮರ ಆ ಗೋರಿಯಲ್ಲಿರುವ ಶವ ಗಂಡಿನದಾದರೆ ಒಬ್ಬ ಪುರುಷನು ಅಥವಾ ಹೆಣ್ಣಿನದಾದರೆ ಒಬ್ಬಳು ಹೆಣ್ಣು ಸಾಯುತ್ತಾಳೆ. ಅಂತೆಯೇ 'ಮರಿಯಮ್ ಬೀ'ಗೆ ಈ ಕೆಲಸವನ್ನು ತಾನು ಮಾಡಿದರೆ ತನಗೂ "ಗುಸುಲ್" ಮಾಡಲು ಕೆಲಸ ದೊರೆತು, ಹೊಟ್ಟೆಗೆ ಒಂದಿಷ್ಟು ಹಿಟ್ಟು ಸಿಗಬಹುದೆಂದು ಆಕೆ ಯೋಚಿಸುತ್ತಾಳೆ. ಅವಳ ಆಲೋಚನೆಗೆ ಸೂಕ್ತವಾಗಿ ಕಂಟ್ರ್ಯಾಕ್ಟರ್ ಆದಮ್ ಸಾಹೇಬರ ಸೊಸೆ, ಮಗಳು ಮತ್ತು ಮೊಮ್ಮಗಳು ಇವರ ಸಾವು ಇವಳಿಗೆ ಸದಾವಕಾಶವಾಯಿತು. 'ಗುಸಲ್' ಕಾರ್ಯ ನೆರವೇರಿಸಲು ಅವಳಿಗೆ ಅವರ ಮನೆಯಿಂದ ಕರೆಯೂ ಬಂದಿತು. ದುಃಖದ ಈ ಸಮಗರ್ಭ ಇವಳಿಗೆ ಸಂತಸ ತಂದಿತು.

ಸಂತೋಷದಿಂದಲೇ ಒಂದು ಮೌನ ತುಂಬಿದ ಮನೆಯಲ್ಲಿ ಒಂದು ಜೀನತ್, ರೇಹಾನ್ ಮತ್ತು ಅಸ್ಮರ ಶವಗಳಿಗೆ ಗುಸಲನ್ನು ಆರಂಭಿಸಿದಳು. 'ಗುಸುಲ್' ಎಂದರೆ "ಸತ್ತವರ ಶವಗಳನ್ನು ಮಣ್ಣಿನಲ್ಲಿ ಮುಚ್ಚುವ ಮುನ್ನ ಉಗುರು ಸಂಧಿಯ ಕೊಳೆಯನ್ನು ತೆಗೆದು 'ಕಫನ್'ನಲ್ಲಿ (ಬಿಳಿಬಟ್ಟೆ) ಸುತ್ತಬೇಕು. ಹೆಣಕ್ಕೆ ಸ್ನಾನ ಮಾಡಿಸಿ, ಅಲಂಕರಿಸಲು ಅಂದರೆ ಮಣ್ಣು ಮಾಡಲು ಹೆಣವನ್ನು ತಯಾರು ಮಾಡುವುದು".

'ಅದಮ್' ಸಾಹೇಬರ ಮನೆಯಲ್ಲಿ ಮರಿಯಮ್ ಬೀ ಜೀನತ್‌ಳಿಗೆ ಮೊದಲು ಗುಸುಲ್ ಮಾಡಿದಳು. ಆಗ ಅವಳು ನೆನೆಸಿಕೊಳ್ಳುವ ಅವಳ ತಾಯಿಯ ಮಾತುಗಳು "ಏನಂತ ತಿಳಿದಿದ್ದೀಯ ಮಗಳೇ ಈ ಹೆಣ್ಣು ಜನ್ಮ....... ಹೆಂಗಸು ಶೀಲವಂತೆ ಅಂತ ಅನ್ನಿಸಿಕೊಳ್ಳಬೇಕಾದರೆ ಅವಳು ಸತ್ತು ಮೂರು ದಿನ ಆಗ್ಬೇಕು".[೨೭] ಈ ಮಾತುಗಳು ಹೆಣ್ಣು ಸತ್ತರೂ ಶವಕ್ಕೆ ನೆಮ್ಮದಿಯಿಲ್ಲ ಎಂಬುದನ್ನು ಹೆಣ್ಣಿನ ಶೋಷಣೆಯನ್ನು ಚಿತ್ರಿಸುತ್ತದೆ. ಜೀನತ್‌ಳ ಹೆಣಕ್ಕೆ ಗುಸುಲ್ ಮಾಡಿದ ನಂತರ ಅವಳು ಊಟಮಾಡಲು ಮಗಳ ನೆನಮ, ಸ್ಥಿತಿಗಳು ಕಾಡಿದರೂ ಅವಳ ಹಸಿವು ಅದನ್ನು ದೂರವಾಗಿಸುವುದು. ಹಸಿವಿನ ತೀವ್ರತೆಯನ್ನು ತೋರಿಸುತ್ತದೆ. ಹಸಿವಾದವನಿಗೆ ಅನ್ನ ಕಂಡರೆ ಎಲ್ಲವೂ ಮರೆಯುತ್ತದೆ. ಊಟದ ನಂತರ 'ಮರಿಯಮ್ ಬೀ' ರೇಹಾನ್, ಅಸ್ಮರ ಗುಸುಲ್ ಅನ್ನು ಮಾಡಿ ಮುಗಿಸಿದಳು.

ಶಾಸ್ತ್ರ ಮುಗಿದ ಮೇಲೆ 'ಮರಿಯಮ್ ಬೀ' ಹಲವು ದಿನಗಳಿಂದ ಕಾಣದ ಬಿಸಿನೀರಿನಲ್ಲಿ ಸ್ನಾನಮುಗಿಸಿದಳು. ತೊಡಲು ಬಟ್ಟೆ ಇಲ್ಲದಿದ್ದರೂ ಸ್ನಾನ ಮಾಡಲು ತೊಡಗುವುದು ಅವಳ ಸ್ಥಿತಿಯ ದ್ಯೋತಕ. ಕೊನೆಯ ಸ್ಥಿತಿಯಲ್ಲಿ ಅವಳು ಅಂದುಕೊಳ್ಳುವುದು "ದಾನೆ ದಾನೆ ಪೆ ಲಿಖಾ ಹೈ ಖಾನೆ ವಾಲೇಕ ನಾಮ್" (ಪ್ರತಿ ಅನ್ನದ ಅಗುಳಿನ ಮೇಲೆ ಅದನ್ನು ತಿನ್ನುವವರ ಹೆಸರು ಬರೆದಿರುತ್ತದೆ) ಎಂಬ ಮಾತು ಬಡವರಿಗೆ ಆ ಕಾರಣದಿಂದಲೇ ಅನ್ನವಿಲ್ಲವೆಂದು ತನ್ನ ಸ್ಥಿತಿಯನ್ನು ಆಕೆ ಒಪ್ಪಿಬಿಡುತ್ತಾಳೆ. ಒಂದೆಡೆ ಶ್ರೀಮಂತರ ಮನೆಯಲ್ಲಿ ತಿಂದು ಚೆಲ್ಲುವಷ್ಟು ಅನ್ನ, ಇನ್ನೊಂದೆಡೆ ತಿನ್ನಲು ಗತಿಯಿಲ್ಲದ ಬಡವರು ಇದು ಇಂದಿನ ಇಂತಹ ಸ್ಥಿತಿ. ರಕ್ತದಲ್ಲಿ ತೊಯ್ದಿದ್ದ ಬಟ್ಟೆಗಳನ್ನು ತಾನು ಬಳಸಲು ಒಪ್ಪಿಕೊಂಡು ಸಂತೋಷಪಡುವ ಸ್ಥಿತಿ. 'ಮರಿಯಮ್ ಬೀ' ಕೊನೆಯಲ್ಲಿ ಅಲ್ಲಿದ್ದ ಅಕ್ಕಿ, ಧಾನ್ಯಗಳನ್ನು ತಂದು ಮಗಳಿಗೆ ತಿನ್ನಿಸುವುದು ಅವಳ ಕರುಣಾಜನಕ ಸ್ಥಿತಿ, ಅಂತೂ ಅವಳು ತನ್ನ ಮಗಳನ್ನು ಉಳಿಸಿಕೊಂಡಳು. ಗಂಡನಿಲ್ಲದಿದ್ದರೂ ತನ್ನ ಕರುಳಿನ ಕುಡಿಯನ್ನು ಉಳಿಸಿಕೊಳ್ಳುವಲ್ಲಿ ಅವಳ ಶ್ರಮ ಪ್ರಯತ್ನಗಳು ಮುಖ್ಯವೆನಿಸುತ್ತವೆ. ಹೆಣ್ಣು ತಾನೇ ಧೈರ್ಯದಿಂದ ಹೆಣಗಳಿಗೆ ಸ್ನಾನ ಮಾಡಿಸುವುದು ಬಾಳಬೇಕೆಂಬ ಆಸೆಯನ್ನು ತೋರಿಸುತ್ತದೆ.

---

೨೭. ಅದೇ, ಪು. ೬೪-೬೫.

ದೇವರು ಬಡವರ ಮೊರೆಯನ್ನು ಆಲಿಸುತ್ತಾನೆ ಎಂಬಂತೆ ಅಪಘಾತ ಮಾಡಿಸಿ, ಇವಳ ದುಡಿಮೆಗೆ ದಾರಿ ತೋರಿಸುವಂತಾಗಿದೆ. ಜೊತೆಗೆ ದಾನ ಸಿಗುವುದು ಜೀವನಾಧಾರವಾಯಿತು. ಈ ಅರ್ಥದಲ್ಲಿ ಈ ಕಥೆಗೆ 'ದೇವರು ಮತ್ತು ಅಪಘಾತ' ಶೀರ್ಷಿಕೆ ಉಚಿತವಾಗಿದೆ.

ಇಸ್ಲಾಂ ಧರ್ಮದ ಶವಸಂಸ್ಕಾರ ಪದ್ಧತಿಯನ್ನು, ನಿಯಮಗಳನ್ನು ಚಿತ್ರಿಸುತ್ತವೆ. ಬಡವರ ಬಾಳಿನ ಹಸಿವಿನ ತೀವ್ರತೆಯನ್ನು ಕಟ್ಟಿಕೊಡುತ್ತದೆ. ಹಸಿವು ಮತ್ತು ಕರ್ತವ್ಯಗಳ ನಡುವೆಯೂ ಮಗಳ ಬಗೆಗಿನ ಅವಳ ಚಿಂತೆ, ಕರುಣೆ, ಮುಕ್ತಿ ಸಂಬಂಧಗಳು ಕಾಣಿಸುತ್ತವೆ. ಅರಕ್ಷಿತ, ಆಶಿಕ್ಷಿತ, ಹೆಣ್ಣಿನ ಹೋರಾಟದ ಬದುಕು ಇವಳದಾಗಲು ಮುಸ್ಲಿಂ ಸಮಾಜದಲ್ಲಿ ಹೆಣ್ಣನ್ನು ಕಾಣುತ್ತಿರುವ ಸ್ಥಿತಿಯನ್ನು ತಿಳಿಸುತ್ತದೆ. ಇದಕ್ಕೆ ಅವಳಿಗೆ ಇರದ ಶಿಕ್ಷಣ ಮತ್ತು ಅದನ್ನು ಒಪ್ಪಿಕೊಂಡ ಅವಳ ಸ್ಥಿತಿಯೇ ಕಾರಣ.

೮) ಹುಟ್ಟು:

ಈ ಕಥೆಯಲ್ಲಿ ತಂದೆ, ತಾಯಿ '೯' ಜನ ಅಣ್ಣಂದಿರು ಮೊದಲೆ ಮದುವೆಗೆ ನಿಯೋಜಿತವಾದ ಗಂಡು ಎಲ್ಲರನ್ನು ತ್ಯಜಿಸಿ ನಿಶಾತ್‌ಜಯಶೀಲನ ಪ್ರೀತಿಯೆಡೆಗೆ ತೆರಳುವುದು ಕಥೆಯ ಮೊದಲ ಘಟ್ಟ. ಎರಡನೇ ಘಟ್ಟದಲ್ಲಿ ತವರಿನ ಪ್ರೀತಿ, ಅವರು ನಿರಾಕರಿಸಿದರೂ ಮಗಳನ್ನೂ ತವರಿನ ಮನೆಗೆ ಕಳುಹಿಸುವ ಪ್ರಯತ್ನ ಮಾಡಿ ಸಫಲಳಾಗುವುದು.

ಸುಂದರಿಯಾದ 'ನಿಶಾಂತ್' 'ಸಯ್ಯದ್ ಸಾಹೇಬ'ರ '೯' ಗಂಡುಮಕ್ಕಳ ನಂತರದಲ್ಲಿ ಹುಟ್ಟಿದ ಒಬ್ಬಳೇ ಮಗಳು. ಮಗುವಾಗಿದ್ದಾಗ ಎರಡನೇ ಅಣ್ಣ 'ಜುನೇದ್'ನೊಡನೆ ಕೋಪ, ಸಿಟ್ಟು, ಪ್ರೀತಿಗಳೊಡನೆ ಬೆಳೆಯುತ್ತಾಳೆ. ದೊಡ್ಡವಳಾದಾಗ ಅವನ ಪ್ರೀತಿ, ವಿಶ್ವಾಸ, ನಂಬಿಕೆಗಳಿಂದಲೇ ಕಾಲೇಜು ಮೆಟ್ಟಿಲು ಹತ್ತಿದವಳು. ಗಣಿತ ಪಾಠಕ್ಕೆಂದು ನಿಯೋಜಿತನಾದ ಜಯಶೀಲನಿಗೆ ತನ್ನ ಪ್ರೀತಿಯನ್ನು, ಮನಸ್ಸನ್ನು ತೆರೆದಳು, ಅವನ ಪ್ರೀತಿಗೆ ಕೈಚಾಚಿದಳು.

ಮನೆಯವರಿಗೆ ಮಾತ್ರವಲ್ಲ ಅಕ್ಕ, ತಂಗಿ, ಬಂಧುಗಳಿಗೆ ಸಹಾಯದ ಹಸ್ತ ಚಾಚುವ ಉದಾತ್ತ ಮನೋಭಾವದ ಸೈಯ್ಯದ್ ಅಹಮದ್ ಸಾಹೇಬರು ಹೆಣ್ಣು ಮಗಳೆಂಬ ಕಾರಣಕ್ಕೆ ಸುಂದರಿ ಎಂಬ ಕಾರಣಕ್ಕೆ ನಂಬಿಕೆ ಇಡದೆ ಹೋದರು. ಅವರು ಇಂತಹ ಉದಾತ್ತ ಮನಸ್ಸಿನವರಾದರೂ ಒಬ್ಬ ಪುರುಷನಾಗಿ, ಗಂಡನಾಗಿ, ತನ್ನ ಹೆಂಡತಿಯ ಮೇಲೆ ದೌರ್ಜನ್ಯ ಇಟ್ಟಿದ್ದರು. ಇದು ನಿಶಾತ್ ಪತ್ರದಲ್ಲಿ ಬರೆಯುವ ಮಾತುಗಳಿಂದ ಸ್ಪಷ್ಟವಾಗುತ್ತದೆ. ಇದು ಪುರುಷನ ಕ್ರೌರ್ಯ ದಬ್ಬಾಳಿಕೆ ಅದು ಅಮ್ಮ ಹೇಳುತ್ತಿದ್ದಳು. "ನೋಡು ನಿಶಾತ್.... ಗೌರಿಗೆ ಆ ಶಿವ ತವರಿಗೆ ಕಳುಹಿಸುವುದಿಲ್ಲ

ವಂತೆ.... (ನಿಮ್ಮ ತಂದೆ ಹಾಗೆ) ಆದರೆ ತವರಿನ ಈ ಓಲೆಯ ಬೂದಿಯನ್ನಾದರೂ ತಿಂದು ಬರ್ತೇನೆ'' ತವರಿನವರು ಬಡವರಾದರೆ ಪ್ರೀತಿಗೇನೂ ಕೊರತೆ ಇಲ್ಲ ಎಂದು ಗಂಡನನ್ನು ಒಪ್ಪಿಸಿ ಹೋಗುತ್ತಾಳೆ. ಮಾರನೇ ದಿನವೇ ಗಣೇಶ ಕರೆಯಲು ಬರ್ತಾನೆ, ಆಗ ಅವಳು ಅತ್ತುಕೊಂಡು ವಾಪಸ್ಸು ಗಂಡನ ಮನೆಗೆ ಹೋಗ್ತಾಳೆ. ನೋಡು..... 'ಈ ಮಳೆ ಬರ್ತಿದೆಯಲ್ಲ ಅದು ಗೌರಿಯ ಅಳುವಿನದು''[೨೮] ಎಂದು ಅಮ್ಮ ನಿಮ್ಮನ್ನು ಸುತ್ತು ಬಳಸಿ ದೂರುತ್ತಿದ್ದಳು ಎಂಬಲ್ಲಿ ಅರ್ಥವಾಗುತ್ತದೆ. ಅವಳ ತಾಯಿಗೆ ತವರಿನ ಮನೆಗೆ ಹೋಗಲು ಬಿಡುತ್ತಿರಲಿಲ್ಲ ಸೈಯ್ಯದ್ ಅಹಮದ್.

ನಿಶಾತ್ ಜಯಶೀಳನೊಡನೆ ಮದುವೆಯಾಗಿ ಹೋದಾಗ ತಮ್ಮ ಪ್ರತಿಷ್ಠೆಗೆ ಕುಂದು ಬಂದೀತೆಂದು ಆರು ತಿಂಗಳು ಕೋಣೆಯೊಳಗೆ ಹೊಕ್ಕಿದ್ದ. ಅವರು ಅದನ್ನು ನಿವಾರಿಸಿಕೊಳ್ಳಲು ಮನಸ್ಸಿನಿಂದ ದೂರ ಅಟ್ಟಿ ಅವಳು ಸತ್ತಳೆಂದು ಭಾವಿಸಿ, ಸಂಸ್ಕಾರ ಶಾಸ್ತ್ರ ಮಾಡುವುದು ಅವನು ಕಠೋರ, ಅಂತಹ ತನ್ನ ಮನಸ್ಸಿಗೆ ಸೀಮ ತನ್ನ ನಡವಳಿಕೆಗಳಿಂದ ಬದಲಿಸಿ, ಕರಗಿಸಿ ತನ್ನ ಮನಸ್ಸಿಗೆ ದೊರೆಯದಿದ್ದ ಪ್ರೀತಿಯನ್ನು ಪಡೆಯುವಲ್ಲಿ ಸಫಲಳಾಗುತ್ತಾಳೆ.

ಈ ಕಥೆಯಲ್ಲಿ ಪ್ರೀತಿಯ ಮರುಹುಟ್ಟು ಕಥೆಯನ್ನು ಸುಖಾಂತವಾಗಿಸುತ್ತದೆ. ಇದು ಮನೋವೈಜ್ಞಾನಿಕ ಕಥೆ ಎನ್ನಬಹುದು. ಧರ್ಮ, ಸಮಾಜದ ಕಟ್ಟಳೆಗಳಿಗೆ ಬದ್ಧನಾಗಿ ಮಗನನ್ನು ಭೌತಿಕವಾಗಿ ದೂರವಾಗಿಸಿ ಮನಸ್ಸಿನಿಂದ ಪ್ರಯತ್ನಪಟ್ಟು ದೂರವಾಗಿಸಿದ್ದರೂ ಮೊಮ್ಮಗಳಿಂದ ಪ್ರೀತಿ ಹುಟ್ಟುವುದು ಮನುಷ್ಯ ಸಹಜ ಧರ್ಮ.

ಇಲ್ಲಿ ಬಾನುಮುಷ್ತಾಕ್‌ರ ಜಾತ್ಯಾತೀತ ಮನೋಭಾವನೆ ವ್ಯಕ್ತವಾಗುತ್ತದೆ. ಜಾತಿ, ವರ್ಗಗಳ ಸುಳಿಯಲ್ಲಿ ಸಿಲುಕಿರುವ ಈ ಸಮಾಜದಲ್ಲಿ ಜನರು ವಿರೋಧಿಸುವ ಪ್ರಯತ್ನ ಮಾಡಿದಾಗ ಎದುರಾಗುವ ಸಮಸ್ಯೆಗಳು ದೊಡ್ಡವು. ಧರ್ಮ, ಆಚರಣೆ, ನಂಬಿಕೆಗಳಿಗೆ ಬದ್ಧವಾಗಿರುವವರಿಗೆ ಜಾತಿ, ಧರ್ಮ ದೊಡ್ಡದು. ಆದರೆ ಪ್ರೀತಿಗೆ ಬೆಲೆ ನೀಡುವವರಿಗೆ ಧರ್ಮ, ಜಾತಿ, ಬಂಧುಗಳಿಗಿಂತ ಪ್ರೀತಿಯೇ ದೊಡ್ಡದಾಗಿ ಕಾಣುತ್ತದೆ. ಪ್ರೀತಿಗೆ ಕಣ್ಣಿಲ್ಲ ಎಂಬ ಮಾತಿದೆ. ಅಂದರೆ ಪ್ರೀತಿ ಹೇಳಿ-ಕೇಳಿ ಬರುವಂತದ್ದಲ್ಲ. ಅದು ಹೃದಯದಿಂದ ಬರುವಂತಹುದು. ನಿಶಾತ್‌ಗೆ ಷಹೀದ್‌ನ ಬಗ್ಗೆ ಮನಸ್ಸು, ಪ್ರೀತಿ ಉಳಿಯಲಿ ಎಂದು ನಡೆಸುವ ಪ್ರಯತ್ನಗಳೆಲ್ಲ ವಿಫಲವಾಗುತ್ತವೆ. ಕಾವಲಿನಲ್ಲಿಯೂ ಜಯಶೀಲನ ಬಗ್ಗೆ ಹುಟ್ಟುವ ಪ್ರೀತಿ ನಿಜವಾದುದು. ಸಖನ ಪ್ರೀತಿಯ ಮುಂದೆ ತಂದೆ, ತಾಯಿ, ಅಣ್ಣಂದಿರ ಪ್ರೀತಿಯು ಕಡಿಮೆಯದೆ, ಅದನ್ನು ಮೀರಿಸುವಂತಹುದು ಯಾವುದೂ ಆಗುವುದಿಲ್ಲ. ಇಲ್ಲಿ ನಿಶಾತ್ ಕೂಡ ಜಯಶೀಲನ ಕಣ್ಣೋಟಕ್ಕೆ ಸೋತು ಅವಳು '೯' ಜನ ಅಣ್ಣಂದಿರು

---

೨೮. ಅದೇ, ಪು. ೬೩.

ಅದರಲ್ಲೂ ಅವಳ ಬಗ್ಗೆ ಅನುಮಾನಿಸದ ಜುನೇದ್ ಅಣ್ಣನನ್ನು ಪ್ರೀತಿಯ ತಂದೆ, ತಾಯಿಯನ್ನು ಆಕೆ ತೊರೆಯುತ್ತಾಳೆ. ಆದರೆ ಇದು ಧರ್ಮ, ಸಮಾಜಗಳಿಗಾಗಿ ಮಾತ್ರ ಅವಳ ಮನಸ್ಸಿನಲ್ಲಿ ಅವರೆಲ್ಲರ ಬಗ್ಗೆ ಇರುವ ಪ್ರೀತಿ ಅಳಿಸಲಾಗದ್ದು.

ಕ್ರೂರ ಜಾತಿ ವ್ಯವಸ್ಥೆಯ ಈ ಸಮಾಜದಲ್ಲಿ ಹೆಣ್ಣು ಮಗಳಿಗೆ ತಾನು ಇಚ್ಚಿಸಿದ ಗಂಡನನ್ನು ಮದುವೆಯಾಗುವ ಸ್ವಾತಂತ್ರ್ಯವಿಲ್ಲದಿರುವುದು ಒಂದು ವೇಳೆ ಆದರೆ ತನಗಾಗುವ ಮಾನಸಿಕ ಯಾತನೆ ಬಂಧುಗಳ ನೆನಪಿನಲ್ಲೇ ಆರೋಪಗಳೊಂದಿಗೆ ಉಳಿಯಬೇಕಾದ ಜೀವನ ಇವು ಪುರುಷ ಪ್ರಧಾನ, ಧಾರ್ಮಿಕ ಬದ್ಧ ಹೆಣ್ಣಿಗೆ ಹೇರಿರುವ ನಿರ್ಬಂಧವನ್ನು ತೋರಿಸುತ್ತದೆ.

ಇಲ್ಲಿ ನಿಶಾತ್‌ಳನ್ನು ಕಥೆಗಾರ್ತಿ ಈ ಧಾರ್ಮಿಕ ವ್ಯವಸ್ಥೆಯ ವಿರುದ್ಧ ಬಂಡೇಳುವ ಅದನ್ನು ನಿರಾಕರಿಸಿ ಮುನ್ನೆಡೆಯುವ ದೃಢ ಮನಸ್ಕಳನ್ನಾಗಿ ಚಿತ್ರಿಸುತ್ತಾ ಬಾಲ್ಯವಿವಾಹ, ಜಾತಿ, ಧರ್ಮ ಇವುಗಳನ್ನು ತೀವ್ರವಾಗಿ ಪ್ರತಿಭಟಿಸುತ್ತದೆ.

ಧರ್ಮಕ್ಕೆ ನಿಷ್ಠನಾಗಿದ್ದ ತಂದೆಯಿಂದ ಶಾಶ್ವತವಾಗಿ ದೂರವಾಗಿದ್ದ ನಿಶಾತ್ ತನ್ನ ಕರುಳ ಕುಡಿಯಿಂದ ತಂದೆಯ ಹೃದಯದಲ್ಲಿ ಮತ್ತೊಮ್ಮೆ ಮರು ಹುಟ್ಟುತ್ತಾಳೆ. ಆದ್ದರಿಂದ 'ಹುಟ್ಟು ಶೀರ್ಷಿಕೆ ಈ ಕಥೆಗೆ ಸೂಕ್ತವೆನಿಸುತ್ತದೆ. ಕುತೂಹಲದಿಂದ ಓದಿಸಿಕೊಂಡು ಹೋಗುವ ಕಥೆ ಕೊನೆಯಲ್ಲಿ ದುಃಖವನ್ನು ತೀವ್ರಗೊಳಿಸಿ ಶಾಂತಿಯನ್ನು ನೀಡುತ್ತಾ ಮನಸ್ಸಿನ ಶೋಧವನ್ನು ಮಾಡುತ್ತದೆ.

೬) ಸಾವು:

ಈ ಕಥೆಯು ಒಂದು ಮನೋ ವೈಜ್ಞಾನಿಕ ಕಥೆಯಾಗಿದೆ. ತಂದೆಯ ಸಾವಿನ ನೋವಿನಲ್ಲಿ ಮುಳುಗಿ ಅಸ್ವಸ್ಥಳಾಗಿದ್ದವಳು ತನ್ನ ಪ್ರೀತಿಯನ್ನು ಹಾತೊರೆಯುತ್ತಿದ್ದ ಜೀವವನ್ನು ಕಂಡು ಪುನಶ್ಚೇತನಗೊಳ್ಳುವ ತನ್ನ ಪ್ರೀತಿಯನ್ನು ನೀಡುವ ಸುಖಾಂತ ಕಥೆ. ಪ್ರೀತಿಯಿಂದ ಕೆಲವೊಮ್ಮೆ ಸಾವನ್ನು ಗೆಲ್ಲಬಹುದೆಂಬ ಸಂದೇಶವಿದೆ. ಜಗತ್ತಿನ ಜೀವಗಳಿಗೆಲ್ಲ ಸಾವು ಖಚಿತ, ನಿಶ್ಚಿತ. ಅದನ್ನು ತಿಳಿದೂ ಅದರಿಂದ ಭಯಗೊಳ್ಳುವ ಚಿಂತೆಗೀಡಾಗುವ ಅವಳು ಸಾವಿನ ಅನುಭವವನ್ನು ಸಾವಿನ ಅನುಭವ ಪಡೆದು ಮತ್ತೆ ಬದುಕಿನೆಡೆಗೆ ಮುಖ ಮಾಡುವುದು ಮಗನ ಪ್ರೀತಿಗಾಗಿ. ಇಲ್ಲಿ 'ಸಭಾ' ಕಥೆಯ ಕೇಂದ್ರಬಿಂದು. ಇವಳು ತನ್ನನ್ನು ಮಗುವಾದಾಗಿನಿಂದ ಪ್ರೀತಿಯಿಂದ ಸಾಕಿದ, ತನ್ನೆಲ್ಲಾ ಸುಖ–ದುಃಖಗಳ ಸಂದರ್ಭಗಳಲ್ಲಿ ತನ್ನೊಡನೆ ಇದ್ದು ತನಗೊಂದು ದಾರಿ ತೋರಿಸಿದ ತಂದೆ–ತಾಯಿ ಸಾವು ಅವಳನ್ನು ವರ್ಷಗಳಿಂದ ನರಳಿ ಮತ್ತೆ ಸಾವಿನ ದವಡೆಯಿಂದ ಆಚೆಗೆ ಬರುತ್ತಾಳೆ. ಬಾಲ್ಯದಲ್ಲಿ ಅವಳು ಆಸ್ಪತ್ರೆಯಲ್ಲಿ ಸಾವೊಂದನ್ನು ಕಂಡು ದುಃಖಗೊಂಡಾಗ ಸಾವಿನ ಬಗೆಗೆ ಅವಳ ಅಪ್ಪ ಹೀಗೆ ಹೇಳುತ್ತಾನೆ. ''ಸಾವು

ಬಯಕೆಗಳಿಗೆ ತಕ್ಕಂತೆ ಬದುಕುವುದು ಸುಲಭ. ಆದರೆ ಜೀವ ನಮ್ಮ ಅಳತೆಗೆ ತಕ್ಕಂತೆ ಕತ್ತರಿಸಿ ಹೊಲಿಯುವ ಬಟ್ಟೆಯಲ್ಲ ಸಬಾ..... ನೀನು ಅರ್ಥ ಮಾಡಿಕೋಬೇಕು.ಮಗಳೇ..... ಬದುಕಿನ ಸುಖಗಳನ್ನು ನಾವು ಅನುಭವಿಸುವಂತೆ ದುಃಖಗಳನ್ನೇಕೆ ಅನುಭವಿಸುವುದಿಲ್ಲ? ಸಿಹಿಯನ್ನು ತಿಂದು ಸಂತೋಷಪಡುವವರು ಕಹಿ ಒಂಚೂರು ನಾಲಿಗೆಗೆ ತಾಕಿದ ಕೂಡಲೇ ಸಿಂಡರಿಸುವುದೇಕೆ? ಅದನ್ನು ನಿರಾಕರಿಸುವುದೇಕೆ? ಅದನ್ನು ಅನುಭವಿಸಲೇಬೇಕಾದ ಅನಿವಾರ್ಯತೆ ಒಂದೆಡೆ..... ಆದರೆ ನಿರಾಕರಣೆ ಇನ್ನೊಂದೆಡೆ.... ಇದರಿಂದ ಹೆಚ್ಚು ಒತ್ತಡ ಮತ್ತು ಹೆಚ್ಚು ದುಃಖ....."[೨೯] ಎಂಬ ನೀತಿಯ ಮಾತುಗಳಲ್ಲಿ ಜೀವನ ಸಿದ್ಧಾಂತವಡಗಿದೆ. ನಮ್ಮಿಷ್ಟ ಬಂದಂತೆ ನಾವು ಜಗತ್ತಿನಲ್ಲಿ ಬದುಕಬಹುದು. ಆದರೆ ಅದನ್ನು ಮೀರಿ ನಿಲ್ಲುತ್ತದೆ ಬದುಕು. ಬದುಕಿನಲ್ಲಿ ಕಷ್ಟಸುಖಗಳನ್ನು ಅನುಭವಿಸುವಲ್ಲಿಯೂ ನಿರ್ಲಿಪ್ತತೆ ಇದ್ದರೆ ಬದುಕು ಶಾಂತವಾಗಿ ಸಾಗುತ್ತದೆಂಬ ಜೀವನದ ಸತ್ಯವನ್ನು ಹೇಳುತ್ತಾನೆ.

ಸಭಾಳಿಗೆ ಸಾವು ಎಂಬುದರ ಬಗ್ಗೆ ಮೊದಲಿನಿಂದಲೇ ಅದು ಬದುಕಿನ ಆರಂಭವೋ ಅಂತ್ಯವೋ ಎಂಬುದರ ಬಗ್ಗೆ ದ್ವಂದ್ವವಿದೆ. ಆದರೆ ಅವಳ ಅಪ್ಪ ಅದನ್ನು "ಸಾವನ್ನು ಅಪೇಕ್ಷಿಸಬಾರದು ಆದರೆ ಸಾವು ಶತಃ ಸಿದ್ಧ" ಒಂದಲ್ಲ ಒಂದು ದಿನ ನಾವು ಅದರೊಡನೆ ಮುಖಾಮುಖಿಯಾಗುತ್ತೇವೆ. ಸಾವನ್ನು ಎದುರಿಸಬೇಕು ಎಂಬುದು ನಮಗೆ ಬದುಕಿನಲ್ಲಿ ಸಿಗುವ ಪ್ರಿಪರೇಷನ್. ಸಾವು ನಮಗೆ ಸ್ನೇಹಿತನೂ ಅಲ್ಲ, ಶತೃವೂ ಅಲ್ಲ, ಅಂತ್ಯವೂ ಅಲ್ಲ, ಆರಂಭವೂ ಅಲ್ಲ, ಅದು ಕೂಡ ಬದುಕಿನಂತೆ ಒಂದು ಪ್ರಕ್ರಿಯೆ. ಅದನ್ನು ನಾವು ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕಾದ್ದಿಲ್ಲ. ಬದಲಿಗೆ ಅದನ್ನು ಅನುಭವಿಸಬೇಕು ಎಂದು ಹೇಳುವಲ್ಲಿ ಮತ್ತು 'ಮಹಾತ್ಮರ ಗುಟ್ಟು ಮರಣದಲ್ಲಿ ನೋಡು", ಅವರು ಯಾವುದೇ ಸಾಧನೆಗಳನ್ನು ಮಾಡಲು, ಕೊನೆಗೆ ಅದರಲ್ಲಿ ಎಂತಹ ಸಾವು ಬಂದರೂ ಎದುರಿಸುವಲ್ಲಿ ಅವರ ಮನಸ್ಸನ್ನು ತೆರೆಯುತ್ತಾರೆ. ಆದ್ದರಿಂದಲೇ ಸಾವಿನ ಅನುಭವಗಳಿಗೆ ಮನಸ್ಸನ್ನು ಮುಕ್ತವಾಗಿಸುವ ಶಕ್ತಿಯಲ್ಲಿ ಬದುಕಿನ ಸಾರ್ಥಕತೆಯೂ ಇದೆಯೇನೋ, ಗಾಂಧೀ, ಬುದ್ಧ, ಕ್ರಿಸ್ತನಂತಹ ವ್ಯಕ್ತಿಗಳು ಮಹಾತ್ಮರಾದುದು ಅದರಿಂದ. ಇಷ್ಟೆಲ್ಲಾ ತಿಳುವಳಿಕೆಗಳನ್ನು ತಂದೆ ನೀಡಿದ್ದರೂ ಅವಳು ಅವನ ಸಾವಿನಿಂದ ನೊಂದು ಆಘಾತಗೊಳ್ಳುವುದು ಕಂಡು ಬರುತ್ತದೆ. 'ಸಬಾ'ಳ ಮಗ ಬಸ್ಸಿನಲ್ಲಿ ಹೋಗುವಾಗ ಅವಳನ್ನು ಸಲಹಿದ್ದು ಅವನ ನಿಜವಾದ ತಾಯಿಯ ಪ್ರೀತಿಯಾಗುತ್ತದೆ. ಇದು ಮತ್ತೆ ಅವಳನ್ನು ಬದುಕಿನ ಕಡೆಗೆ ಎಳೆಯುತ್ತದೆ. ತಾನು ಬದುಕಿ ತನ್ನ ಮಗನಿಗೆ ಪ್ರೀತಿಯನ್ನು ನೀಡಬೇಕೆಂಬ ಭವಿಷ್ಯ ಅವಳ ಕಣ್ಣನ್ನು ತುಂಬುತ್ತದೆ. ಆದ್ದರಿಂದಲೇ ಅವಳು ಕೊನೆಯಲ್ಲಿ "ಅಬ್ಬಾ, ನಾಹಿದ್‌ನನ್ನು ಸದ್ಯಕ್ಕೆ ಅನಾಥನನ್ನಾಗಿ ಮಾಡಲಾರೆ. ನನ್ನಂತೆ ಪ್ರತಿ ಘಳಿಗೆಯಲ್ಲೂ ಅವನನ್ನು ಸಾಯಗೊಳಿಸಲಾರೆ. ನನಗೆ

೨೯. ಅದೇ, ಪು. ೧೧೩-೧೧೪

ನಿಮ್ಮ ಅವಶ್ಯಕತೆಗಿಂತ ಅವನಿಗೆ ನನ್ನ ಅಗತ್ಯ ಹೆಚ್ಚಿದೆ..... ಖುದಾ ಹಾಫೀಜ್' ಎಂಬ ತೀರ್ಮಾನಕ್ಕೆ ಬರುತ್ತಾಳೆ. ಇದರಿಂದ ಅವಳ ಮಗನ ಭವಿಷ್ಯ ಸುಖವಾಗಿರಲು ಕಾರಣವಾಯಿತು. ತಾನು ಪಡೆದುದನ್ನು ಮಗನಿಗೆ ನೀಡಲು ಸಹಾಯಕವಾಯಿತು. ಇದರಿಂದ ಅವಳಿಗೆ ನಾವು ಇಲ್ಲಿನ ಪಾತ್ರಧಾರಿಗಳು ಮಾತ್ರ ಬದುಕು, ಸಾವು ನಮ್ಮೆಲ್ಲರನ್ನು ಮೀರಿದ ಶಕ್ತಿಗಳು ಎಂಬುದು ಅರಿವಾಗಿ ಸಾವು ಬಂದಾಗ ಸ್ವೀಕರಿಸಬೇಕೆಂಬ ಸಮಸ್ಥಿತಿಗೆ ಅವಳು ಬರುತ್ತಾಳೆ.

೭) ಕೆಂಪು ಲುಂಗಿ:

ಈ ಕಥೆಯ ಬಗ್ಗೆ 'ಬಾನುಮುಷ್ತಾಕ್'ರವರೇ ಹೇಳಿರುವಂತೆ "ಮುಸ್ಲಿಮರ ಒಂದು ಆಚರಣೆಯ ಹಿನ್ನೆಲೆಯಲ್ಲಿ ವರ್ಗ ತಾರತಮ್ಯ ಬಿಂಬಿಸುವ ಹಿನ್ನೆಲೆಯಿಂದ ಕೂಡಿದೆ" ಎನ್ನುತ್ತಾರೆ.

ಬೇಸಿಗೆಯಲ್ಲಿ ರಜೆಯನ್ನು ಒಂದೆಡೆ ಸೇರಿ ಸಂಭ್ರಮದಿಂದ ಕಳೆಯುತ್ತಿರುವುದರಿಂದ ಆರಂಭವಾಗುವ ಕಥೆ ನಂತರ ಮುಸ್ಲಿಮರ ಆಚರಣೆಯಾದ 'ಖತ್ನ ಅಥವಾ ಸುನ್ನತ್ (ಮುಂಜಿ) ಆಚರಣೆಯತ್ತ ಸಾಗುತ್ತದೆ. ಅವರ ನಂಬಿಕೆಯಂತೆ 'ಸುನ್ನತ್, ಮಾಡಿಸಿಕೊಳ್ಳದವರು ಮುಸ್ಲಿಂ ಧರ್ಮಕ್ಕೆ ಸೇರಲಾರರು. ಆದ್ದರಿಂದ ಸಣ್ಣ ವಯಸ್ಸಿನಲ್ಲಿಯೇ ಎಲ್ಲಾ ಹುಡುಗರಿಗೂ ಸುನ್ನತ್ ಮಾಡಿಸುವರು. ಅದು ಅವರಲ್ಲಿ ಕಡ್ಡಾಯವಾದ ಹೇರಿಕೆಯಾದರೂ ಅದು ಅಹಿಂಸೆಯ ಆಚರಣೆಯಾಗಿ ಕಾಣುತ್ತದೆ. ಅವೆಲ್ಲವುಗಳ ನಡುವೆ ಗೋದಿ, ಕೊಬ್ಬರಿ, ಸಕ್ಕರೆ ಇತ್ಯಾದಿಗಳ ದಾನ ಬಡವರಿಗೆ ಒಂದು ಹೊತ್ತಿನ ಊಟ ನೀಡುವಲ್ಲಿ ಒಳ್ಳೆಯದಾಗುತ್ತದೆ. ಇದರಿಂದ ಸಂಪತ್ತಿನ ಒಂದು ಭಾಗದ ಹಂಚಿಕೆಯಾಗುತ್ತದೆ.

'ಖತ್ನ' ಮುಸ್ಲಿಂ ಜನಾಂಗದವರಲ್ಲಿ ಬಡವ-ಶ್ರೀಮಂತರೆನ್ನದೆ ಎಲ್ಲರಿಗೂ ಕಡ್ಡಾಯವಾಗಿ ಆಗಬೇಕಾದ ಶಾಸ್ತ್ರ. ಆ ತಾಲ್ಲೂಕಿನಲ್ಲಿಯೇ ಶ್ರೀಮಂತನೆನಿಸಿದ್ದ 'ಲತೀಫ ಅಹಮದ್'ನ ಮಕ್ಕಳಿಗೆ ಖತ್ನ ಆಗದಿದ್ದುದು ಮತ್ತು ತಂಗಿ-ತಮ್ಮಂದಿರ ಮಕ್ಕಳೆಲ್ಲಾ ಒಂದೆಡೆ ಸೇರಿದಾಗ ಒಟ್ಟಿಗೆ ಅವರೆಲ್ಲರಿಗೆ ಮಾಡುವ ಯೋಚನೆ ಮಾಡಿ, ದಿನವನ್ನು ಗುರ್ತುಮಾಡುತ್ತಾರೆ. ಆ ದಿನ ಶಾಸ್ತ್ರ ಮಾಡಿಸಿಕೊಳ್ಳಲು ಊರಿನ ಬೇರೆ ಮಕ್ಕಳಿಗೂ ಅವಕಾಶ ಒದಗಿಸುತ್ತಾರೆ. ಅದಕ್ಕಾಗಿ ಎಲ್ಲಾ ಸಿದ್ಧತೆಗಳಾಗಿ ಆ ದಿನಕ್ಕೆ 'ಕೆಂಪುಲುಂಗಿ', ಧಾನ್ಯಗಳು, ಹಣ್ಣು ಎಲ್ಲವೂ ಸಿದ್ಧವಾದವು. ಲತೀಫ್ ತನ್ನ ಮಕ್ಕಳಿಗೆ ಒಂದಿಷ್ಟು ಕೆಂಪು ಕಾಣದಂತಹ ಲುಂಗಿ ತರಿಸಿದ್ದ. ಖತ್ನ ಆದ ನಂತರ ಡಾಕ್ಟರರ ವಿಶೇಷ ಚಿಕಿತ್ಸೆಗೆ ಹೇಳಲಾಗಿತ್ತು. ಆದರೆ ಈ ವಿಶೇಷವಾದ ಉಪಚಾರ ಬಡಮಕ್ಕಳಿಗೆ ಇರಲಿಲ್ಲ.

ಖತ್ನದ ಆಚರಣೆ ವಿವರವಾಗಿದೆ. ಗುರ್ತಾದ ದಿನದಂದು ಮಸೀದಿಯಲ್ಲಿ ಸಣ್ಣ ವಯಸ್ಸಿನ ಹುಡುಗರಿಗೆ ತಾಮ್ರದ ಬಿಂದಿಗೆಯ ಮೇಲೆ ಕೂರಿಸಿ ತೊಡೆಗಳನ್ನು ಅಗಲಿಸಿ ಮಾಡುವ ಶಾಸ್ತ್ರವಾಗಿದೆ. ಆ ನೋವನ್ನು ಮರೆಸಲು "ದೀನ್" ಅಥವಾ "ಅಲ್ಲಾ" ಎಂದು ಹೇಳಿಸುತ್ತಾರೆ. ಕೊನೆಯಲ್ಲಿ 'ಖತ್ನ' ಮಾಡಿಸಿಕೊಂಡವರಿಗೆ ಕೊಬ್ಬರಿ, ಸಕ್ಕರೆ, ಗೋದಿ, ಬೆಣ್ಣೆಗಳ ದಾನ ನೀಡುವುದು. ಈ ಕಥೆಯಲ್ಲಿ ಎದ್ದು ಕಾಣುವ ಅಂಶವೆಂದರೆ ಶ್ರೀಮಂತರ ಮಕ್ಕಳಿಗೆ ಖತ್ನ ಆದಾಗ ವಿವಿಧ ರೀತಿಯ ಚಿನ್ನದ ಆಭರಣಗಳು, ವಸ್ತ್ರಗಳು, ಉಡುಗೊರೆಯಾಗಿ ಬರುತ್ತವೆ. ಆದರೆ ಬಡವರ ಮಕ್ಕಳಿಗೆ ಇವರು ಕೊಡುವ ದಾನ ಅಷ್ಟೇ.

ಇಲ್ಲಿ ಬರುವ ಹೆಂಗಸರು ನಮ್ಮ ಗಮನ ಸೆಳೆಯುತ್ತಾರೆ. ಒಬ್ಬಳು ತನ್ನ ಮಗನನ್ನು ಕರೆದು ತಂದು ಅವನಿಗೆ ಸರಿಯಾಗಿ 'ಖತ್ನ' ಆಗಿಲ್ಲ ಮತ್ತೊಮ್ಮೆ ಮಾಡಿ ಎನ್ನುವುದು, ಒಂದು ಹೊತ್ತಿನ ಊಟಕ್ಕಾಗಿ ಆದರೆ ಅಲ್ಲಿ ಜನ ಅವಳಿಗೆ ಏನನ್ನು ಕೊಡದೆ ಹಂಗಿಸಿ ಕಳುಹಿಸುವುದು ಅಹಂಕಾರ ಅಟ್ಟಹಾಸದ ಚಿತ್ರಣ. ಅಲ್ಲಿಗೆ ಬಂದ ಮತ್ತೊಬ್ಬಳಿಗೆ 'ಲತೀಫ್' ಸಾಹೇಬರು ನೂರರ ನೋಟೊಂದನ್ನು ನೀಡುವುದು ಉದಾತ್ತ ಗುಣಕ್ಕೆ ಸಾಕ್ಷಿಯಾಗಿದೆ. ಆದರೂ ತಮ್ಮ ಮಕ್ಕಳಿಗೆ ಮಾತ್ರ ವಿಶೇಷ ರೀತಿಯ ಚಿಕಿತ್ಸೆ ವಿಧಾನಗಳನ್ನು ಅನುಸರಿಸುವುದು ತಾರತಮ್ಯವೆನಿಸುವುದು. ಆ ಇಬ್ಬರು ಹೆಂಗಸರು ಮುಸ್ಲಿಮರಲ್ಲಿ ಯಾವ ಹೀನಾಯ ಸ್ಥಿತಿಯಲ್ಲಿದ್ದಾರೆಂಬುದನ್ನು ತಿಳಿಸುತ್ತದೆ.

ಖತ್ನ ಆದ ನಂತರ ಅವರ ಮಗ 'ಸಮದ್' ಮತ್ತು ಇತರ ಮಕ್ಕಳಿಗೆ ಡಾಕ್ಟರ್‌ರಿಂದ ವಿಶೇಷ ಚಿಕಿತ್ಸೆ ನೀಡಿಸಿದರೂ ಗಾಯವು ಮಾಯದೆ, ಹೆಚ್ಚುತ್ತಲೇ ಹೋಗುತ್ತದೆ. ಆದರೆ ಅಡುಗೆ ಮಾಡುವ 'ಫಾತಿಮಾ ಬೀ' ಯ ಮಗ ಆರೀಫ್‌ಗೆ ಒಂದು ದಿನದಲ್ಲೇ ವಾಸಿಯಾಗುತ್ತದೆ. ಸಮದ್‌ನ ತಾಯಿ ರಜಿಯಾ ಅಂದುಕೊಳ್ಳುವುದು "ಖಾರ್ ಕು ಖುದಾ ಕ ಯಾರ್, ಗರೀಬ್ ಕು ಪರ್‌ವರ್‌ದಿಗಾರ್"[೨೦] ಅಂದರೆ ಹಣವಂತರಿಗೆ ಸಹಾಯವಾದರೆ, ಬಡವರಿಗೆ ದೇವರ ನೆರವು ಎಂಬುದರಲ್ಲಿ ಕಥೆಯ ಉದ್ದೇಶವಾಗಿದೆ.

ಇಲ್ಲಿ ಕೊನೆಯಲ್ಲಿ ಎದ್ದು ಕಾಣುವ ಮತ್ತೊಂದು ಅಂಶವೆಂದರೆ ಬಡವರಾದರೂ, ಶ್ರೀಮಂತರಾದರೂ ಹೆಣ್ಣಿನ ತಾಯ್ತನ ಒಂದೇ, ಅವಳು ನೋವಿಗೆ, ದುಃಖಕ್ಕೆ ಮಿಡಿಯುತ್ತಾಳೆ. ಅದು ಎಂತಹುದೇ ನೋವು ಆಗಿರಬಹುದು ಇಲ್ಲಿ ತನ್ನ ಮಗನ ತಾಯಿಯು ಗಾಯ ವಾಸಿಯಾಗದಿರುವ ದುಃಖ ರಜಿಯಾಳಿಗೆ ಇದೆ. ಆದರೆ ಆರೀಫ್ ಬಟ್ಟೆಗಳು ಹರಿದಿರುವುದನ್ನು ಕಂಡು ಕರುಣೆಯಿಂದ ತನ್ನ ಮಗನ ಬಟ್ಟೆಗಳನ್ನು

೨೦. ಅದೇ, ಪು. ೧೩೪

ನೀಡುವುದು ಮಾನವೀಯವಾದ ಅಂಶವಾಗಿದೆ. ಅವಳ ಕರುಣೆ, ಮಮತೆ, ವಾತ್ಸಲ್ಯದ ಗುಣಗಳು ಇಲ್ಲಿ ಮೆರೆದಿವೆ.

"ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು" ಸಾರಾ ಅಬೂಬಕ್ಕರ್

ಭಾರತದಲ್ಲಿರುವ ಹಿಂದೂ-ಮುಸ್ಲಿಂ ಧರ್ಮಗಳಲ್ಲಿ ಹಿಂದೂ ಧರ್ಮ ಇಲ್ಲಿನ ಮೂಲದ್ದು; ಅದರಲ್ಲಿನ ದೋಷಗಳ ನಿವಾರಣೆಗೆ ಆಗಾಗ್ಗೆ ಕೆಲಸ ನಡೆದಿದೆ. ಆದರೆ ಕನ್ನಡದಲ್ಲಿ ಇದುವರೆಗೆ ಕಾಣಿಸದೆ ಇದ್ದ ಮುಸ್ಲಿಂ ಪ್ರಪಂಚವು ಇತ್ತೀಚಿನ ದಶಕದಲ್ಲಿ ಸಾಹಿತ್ಯ ಪ್ರತಿನಿಧಿಗಳಿಂದ ಸಿಡಿದೆದ್ದು ಸಮಾನತೆಯ ಹಕ್ಕುಗಳಿಗಾಗಿ ಬಿಗಿ ಕಟ್ಟಳೆಗಳನ್ನು ಮೀರಿ ಬಂದಿವೆ. ಮತೀಯ ಆವರಣದೊಳಗೆ ಶೋಷಣೆಗೆ ಒಳಗಾಗುವ ಮಹಿಳೆ ತನ್ನ ಅಸ್ತಿತ್ವದ ಬಗ್ಗೆ, ತನ್ನ ಜೀವನ ಕ್ರಮದ ಬಗ್ಗೆ ಯಾವುದೇ ಹಿಂಜರಿಕೆ ಆಘಾತಗಳ ಭಯವಿರದೆ ಅಭಿವ್ಯಕ್ತಿಸಿರುವ ಸಾರಾ ಅಬೂಬಕ್ಕರ್‌ರವರದು ಒಂದು ಸಾಧನೆಯೇ ಸರಿ. ಸಾಮಾನ್ಯವಾಗಿ ಇವರ ಹಲವು ಕಥೆಗಳು ಮುಸ್ಲಿಂ ಜನಾಂಗದ ಪರಿಸ್ಥಿತಿಯನ್ನು ಸಮರ್ಥವಾಗಿ ಹೇಳುತ್ತವೆ. ಸಾರಾ ರವರ ಬರವಣಿಗೆಯನ್ನು ಕುರಿತು 'ಕೋದಂಡರಾಮ' ರವರು ಹೀಗೆ ಹೇಳುತ್ತಾರೆ. "ಸಾರಾ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಬರೆಯುತ್ತಿದ್ದಾರೆ. ಅವರ ಎಲ್ಲ ಘಟಕಗಳೂ ಇದರಿಂದ ಪ್ರಭಾವಿತವಾಗಿವೆ.. ಈಚೆಗೆ ಬರೆಯುತ್ತಿರುವ ಲೇಖಕಿಯರ ಪ್ರಧಾನ ಕೇಂದ್ರ, ಪರಂಪರೆ ಮತ್ತು ಆಧುನಿಕತೆಗಳಲ್ಲಿ ಹೆಣ್ಣಿನ ಬದುಕನ್ನು ಚಿತ್ರಿಸುವುದೇ ಆಗಿದೆ. ಸಾರಾ ಇವರಿಗಿಂತ ಭಿನ್ನ ಅನ್ನಿಸುವುದು, ಇದುವರೆಗೆ ಅಭಿವ್ಯಕ್ತಿಗೆ ಮರೆಯಾಗಿದ್ದ ಜನಾಂಗದ ಬದುಕನ್ನು ನಿರ್ಲಿಪ್ತವಾಗಿ ದಾಖಲಿಸುತ್ತಾರೆ ಎಂಬ ಕಾರಣಕ್ಕಾಗಿ ಜೊತೆಗೆ ಅವರ ಬರಹ ಪರಂಪರೆಯ ಸಾಂಸ್ಕೃತಿಕ ಗ್ರಹಿಕೆಗಳಿಗೆ ಸೀಮಿತವಾಗಿದೆ. ಒಂದು ಜನಾಂಗದ ಬದುಕನ್ನು ಪ್ರಥಮವಾಗಿ ಪರಿಚಯ ಮಾಡಿಕೊಡುತ್ತಿರುವ ಸಂದರ್ಭಕ್ಕೆ ಈ ಶ್ರಮವೇ ಹೆಚ್ಚು ಸ್ವೀಕಾರಾರ್ಹವಾದುದು. ಸಾಧ್ಯತೆಯ ಬದುಕು ಹರಿಯುವ ಗತಿಗೆ ಸಂಬಂಧಿಸಿದಂತೆ ಆರೋಗ್ಯವಾಗಿರುತ್ತದೆ. ಆದುದರಿಂದ ಸಾರಾ ಅವರ ಬರವಣಿಗೆಯ ದಿಕ್ಕು ಸ್ಪಷ್ಟವಾಗುತ್ತದೆ. ಈಗಿರುವ ಸ್ಥಿತಿಯಲ್ಲಿ ಮುಸ್ಲಿಂ ಲೇಖಕಿಯರಲ್ಲಿ ಸಾರಾ ದಟ್ಟ ಅನುಭವವುಳ್ಳ ಯಾವುದನ್ನು ಹೇಗೆ ಹೇಳಬೇಕೆಂಬ ಪ್ರಜ್ಞೆಯುಳ್ಳ ಲೇಖಕಿ"[೩೧] ಎಂಬ ಅವರ ಮಾತನ್ನು ಒಪ್ಪಿಕೊಳ್ಳಬಹುದಾಗಿದೆ.

೧) ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು:

'ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು' ಸಂಕಲನವು ಕಥೆ ಮತ್ತು ಶೀರ್ಷಿಕೆಯೂ ಆಗಿದೆ. ದೇಶ ವಿಭಾಗವಾಗಿ ಸ್ವತಂತ್ರಗೊಂಡ ದಿವಸ ಮತ್ತು ನಂತರದ ಸ್ಥಿತಿಯನ್ನು ವಿವರಿಸಿದ್ದಾರೆ. ಒಂದು ಮಗುವಿನ ಸಂಕೇತದ ಮೂಲಕ ಸಾಗುವ ಕಥೆಯೂ, ದೇಶವು

---

೩೧. ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ – ಎನ್.ಕೆ.ಕೋದಂಡರಾಮ.

ಬಡ ಕೂಸಿನಂತೆ ರೋಗಗ್ರಸ್ತವಾಗಿ ಹಲವು ಸಮಸ್ಯೆಗಳಿಂದ ನರಳುತ್ತಿರುವುದನ್ನು ಹೇಳುತ್ತದೆ. ಈ ಎಲ್ಲಾ ಸಮಸ್ಯೆಗಳಿಗೆ ಅವಿವೇಕ, ಸ್ವಾರ್ಥ, ಆಸೆ, ಕುಹಕಗಳಿಂದ ದೇಶವು ಒಂದು, ಹಿಂದೂ ಮತ್ತೊಂದು ಮುಸ್ಲಿಂ ದೇಶಗಳಾಗಿ ವಿಭಾಗ ಹೊಂದಿದ್ದರೂ ಕಾಶ್ಮೀರ ವಿಷಯ ಇತ್ಯರ್ಥವಾಗದೆ ಅದರಿಂದ ಸಂಭವಿಸಿದ ಹಲವು ಸಮಸ್ಯೆಗಳನ್ನು ಹೇಳುತ್ತದೆ. ಇದು ೧೯೪೭ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಬಂದ ದಿನವಾಗಿದೆ, ತಾಯಿಯೊಬ್ಬಳು ಮಗುವನ್ನು ಹುಟ್ಟಿಸಿದಾಗ ಮನೆಯವರು ಸಂಭ್ರಮಿಸುವಂತೆ ದೇಶದಲ್ಲೆ ಸಂತೋಷವಿದೆ. ಆದರೆ ಅದಕ್ಕಾಗಿ ನಡೆದ ಘಟನೆಗಳನ್ನು ಸಾರಾ ಹೀಗೆ ಹೇಳುತ್ತಾರೆ. ''ಬಹಳ ದೀರ್ಘಕಾಲದ ಗರ್ಭದ ಬಳಿಕ ಮಗುವೊಂದು ಹುಟ್ಟಿತ್ತು. ಗರ್ಭ ದೀರ್ಘವಾಗಿತ್ತು ಎಂದೆನೇ? ಹೌದು, ಏನಿಲ್ಲೆಂದರೂ ಹತ್ತಿರ ಹತ್ತಿರ ನೂರು ವರ್ಷಗಳ ಗರ್ಭ! ಗರ್ಭ ಬೆಳೆದಂತೆ ನೋವುಗಳೆಷ್ಟೋ, ನರಕ ಯಾತನೆ, ಮಗು ಹುಟ್ಟಿದಂತೆ ಮಾಡಿದ ಪಿತೂರಿಗಳೆಷ್ಟೋ ಬೆಳವಣಿಗೆಯೇ ಕುಂಠಿತಗೊಳ್ಳುವಂತೆ ಹೊಟ್ಟೆಗೆ ಬಿದ್ದ ಏಟುಗಳೆಷ್ಟೋ, ಬಿಳಿಯರ ಬೂಟುಗಾಲಿನ ಒಡೆತ ತಿಂದೂ ತಿಂದೂ ಗರ್ಭ ಬೆಳೆಯುತ್ತಲೇ ಇತ್ತು. ಗರ್ಭಪಾತಕ್ಕಾಗಿ ಕುಡಿಸಿದ ನೂರಾರು ಔಷಧಗಳೂ ವಿಫಲಗೊಂಡವು. ಯಾವ ಒತ್ತಡಕ್ಕೂ ಮಣಿಯದೆ, ಯಾವ ಏಟಿಗೂ ಜಗ್ಗದೆ, ಯಾವ ಔಷಧವು ಫಲ ನೀಡದೆ ಗರ್ಭ ಮತ್ತಷ್ಟು ಪುಷ್ಟಿಗೊಂಡು ಬೆಳೆಯುತ್ತಲೇ ಇತ್ತು''.[೩೨]

ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹಲವು ಚಳುವಳಿ, ಚಟುವಟಿಕೆಗಳಲ್ಲಿ ಚಳುವಳಿಗಾರರನ್ನು ಬ್ರಿಟಿಷರು ದಮನಗೊಳಿಸಿದರು. ಅಹಿಂಸೆ, ಶಾಂತಿ, ಮಂತ್ರಗಳನ್ನೆಲ್ಲಾ ಭಂಗಗೊಳಿಸಲಾರಂಭಿಸದರೂ ಪೂರ್ಣವಾಗಿ ನಾಶಗೊಳಿಸಲು ಆಗಲಿಲ್ಲ. ಹಳ್ಳಿ-ಹಳ್ಳಿಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಎರಡು ದೇಶಗಳಾಗಿ, ಘೋಷಣೆ, ಚಳುವಳಿಗಳು ಮೊಳಗಿದವು. ಕೆಲವರಿಗೆ ಅದು ಬೇಡವಾದರೂ ತಾಯಿಗೆ ಅವಳಿ ಕೂಸುಗಳು ಹುಟ್ಟುವಂತೆ ದೇಶ ವಿಭಜನೆಯಾಗಿ ಎರಡು ದೇಶಗಳೆಂದು ಘೋಷಿಸಲ್ಪಟ್ಟಿತು. ಹೀಗೆ ಹಲವು ವರ್ಷಗಳ ಪರಿಶ್ರಮದಿಂದ ಜನಿಸಿದ ದೇಶ, ಹಲವು ಪ್ರಾಂತ್ಯ ಬೇಧಗಳ, ಭಾಷಾವಾರು ಪ್ರಾಂತ್ಯ ತಲೆಯ ಭಾಗದಲ್ಲಿ ಕಾಶ್ಮೀರ ವಿಚಾರ ಇಂದಿಗೂ ಬಗೆಹರಿಯದ ಸಮಸ್ಯೆಯಾಗಿದೆ. ಕಾಶ್ಮೀರ ಯಾವ ದೇಶಕ್ಕೆ ಸೇರಬೇಕೆಂಬ ವಿಷಯವಾಗಿ ಹಲವು ದೇಶಗಳ ರಾಜಕೀಯ ನಾಯಕರು ಚರ್ಚಿಸಿದರೂ ಯಾರಿಂದಲೂ ಪರಿಹಾರ ಸಿಗಲಿಲ್ಲ. ಅದು ವಿಶ್ವಸಂಸ್ಥೆಗೂ ಹೋಯಿತು. ಇನ್ನು ಕೂಡ ಇತ್ಯರ್ಥವಾಗದೆ ಉಳಿದಿದೆ.

ಗಡಿ ಪ್ರದೇಶಗಳಲ್ಲಿ ಕೊಲೆ, ಸುಲಿಗೆ, ಇದಕ್ಕೆಲ್ಲಾ ತಾತ್ಕಾಲಿಕ ಪರಿಹಾರವಿದೆಯೇ ಹೊರತು ಶಾಶ್ವತವಾಗಿಲ್ಲ. ಜನರಲ್ಲಿ ಪರಸ್ಪರ ಸಾಮರಸ್ಯ ಇಲ್ಲದಿರಲು ಇದೇ ಕಾರಣ. ಇಡೀ ದೇಶವೇ ದುಃಖದ ಮಡುವಿನಲ್ಲಿ ಪರಿತಪಿಸುತ್ತಿದ್ದು ನೋವು, ಸಂಕಟ, ಕೊಲೆ,

---

೩೨. ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಸಾರಾ ಅಬೂಬಕ್ಕರ್, ಪು. ೪

ಸುಲಿಗೆ, ಹೇಯಕೃತ್ಯಗಳು ದಿನೇ ದಿನೇ ಬೆಳೆಯುತ್ತಲೇ ಇದೆ. ಸ್ವಾತಂತ್ರ್ಯದ ಕೊನೆಗೆ ಮಾಯದ ಗಾಯ ಇಡೀ ದೇಶವನ್ನೇ ವ್ಯಾಪಿಸಿದೆ ಎಂಬುದನ್ನು ತಾಯಿಗೆ ತಲೆ ಸೇರಿಸಿಕೊಂಡಿರುವ ಎರಡು ಮಕ್ಕಳು ಹುಟ್ಟಿದಾಗ ಮತ್ತು ಅನಾರೋಗ್ಯದಿಂದ ಕೂಡಿರುವ ಆ ಮಕ್ಕಳ ಸ್ಥಿತಿಯನ್ನು ಹೇಳುತ್ತಾರೆ. ಆ ಮಕ್ಕಳಿಗೆ ತಲೆಯ ಭಾಗದ ಕೂಡುವಿಕೆ ಯಾವುದೇ ವೈದ್ಯರ ಚಿಕಿತ್ಸೆಯಿಂದಲೋ ಬೇರ್ಪಡಿಸಲು ಸಾಧ್ಯವಿಲ್ಲ. ಅದಕ್ಕಾಗಿ ಸಾಕಷ್ಟು ಹಣ ಮಾತ್ರ ವ್ಯಯವಾಗಿದೆ. ಆದರೆ ಆ ತಲೆ ಭಾಗದ ಕಡಿತ ಮಾತ್ರ ಕಡಿಮೆಯಾಗದೆ ಮೈಗೆಲ್ಲಾ ವ್ಯಾಪಿಸಿದೆ. ಆದ್ದರಿಂದ ಗಾಯ ಹೆಚ್ಚಿದೆ. ದೇಹ ಬಡವಾಗಿದೆ, ಯಾವುದೇ ಆರೋಗ್ಯಕರ ಸ್ಥಿತಿಯಿಲ್ಲ ಎಂಬುದನ್ನು ವಿವರಿಸುತ್ತಾ ದೇಶದ ಸ್ಥಿತಿಯೂ ಹೀಗೆಯೇ ಎಂಬುದನ್ನು ಹೇಳಿದ್ದಾರೆ. ಅಲ್ಲದೆ ಮಧ್ಯರಾತ್ರಿಯಲ್ಲಿ ೧೨ ಗಂಟೆಗೆ ಸ್ವಾತಂತ್ರ್ಯ ಬಂದಿದ್ದನ್ನು 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು' ಎಂದು ಅರ್ಥೈಸಿದ್ದಾರೆ.

೨) ಯುದ್ಧ:

ಈ ಕಥೆಯಲ್ಲಿ 'ಸಾರಾ'ರವರು ಯುದ್ಧದ ಭೀಕರತೆ ಅದು ಸಾಮಾನ್ಯರ ಮೇಲೆ ಮತ್ತು ರಕ್ಷಕರ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಹೇಳಿದ್ದಾರೆ. 'ರಾಹಿಲ್' ಎಂಬ ವೈದ್ಯ ಯುದ್ಧದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ನೀಡುತ್ತಾ ವಿಮಾನದಲ್ಲಿ ಬರುತ್ತಿದ್ದವನು ಆಕಸ್ಮಿಕವಾಗಿ ವಿಮಾನ ಸ್ಫೋಟಿಸಿ ಸಮುದ್ರದಲ್ಲಿ ಬೀಳುತ್ತಾನೆ. ದಾರಿ ಕಾಣದೆ ಇದ್ದಾಗ ಮಿಂಚೊಂದು ಮಿಂಚಿ ದೂರದಲ್ಲಿ ಮನೆಯೊಂದಿರುವ ಸುಳಿವು ದೊರೆತು ದಡವು ಸೇರಿ ಅಲ್ಲಿದ್ದ ಮನೆಯ ಬಳಿಗೆ ಬರುತ್ತಾನೆ. ಬಾಗಿಲು ತೆಗೆಯುವಾಗ ಆ ಮನೆಯ ಮುದುಕಿ "ಗಾಯ? ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ"?[೩೩] ಎಂದುಕೊಳ್ಳುವುದು ಯುದ್ಧದ ಪರಿಣಾಮವನ್ನು ಸೂಚಿಸುತ್ತದೆ. ಮುದುಕಿಯ ಸೊಸೆಗೆ ಹೆರಿಗೆಯ ನೋವಾದಾಗ 'ರಾಹಿಲ್' ತನ್ನ ಗಾಯದ ನಡುವೆಯೂ ಅವಳಿಗೆ ಅಪಾಯವಾಗದಂತೆ ಹೆರಿಗೆ ಮಾಡಿಸುತ್ತಾನೆ. ಸಾಯಬೇಕಾದ ಸೊಸೆ ಬದುಕುತ್ತಾಳೆ. ಈ ರಾಹಿಲ್ ಶತ್ರು ದೇಶದವನೆಂದು ತಿಳಿದಾಗ ಮುದುಕಿಗೆ ಕೋಪಬರುತ್ತದೆ. ತನ್ನ ಮಗ ಸತ್ತ ಕೂಡಲೇ ರಾಹಿಲ್‌ನನ್ನು ಕೊಲ್ಲಲು ಧಾವಿಸುತ್ತಾಳೆ. ಆದರೆ ಸೊಸೆ ತನಗೆ ಜೀವದಾನ ಮಾಡಿದ್ದನ್ನು ನೆನೆದು ಅತ್ತೆಯನ್ನು ಕುರಿತು "ಅವರು ನನ್ನನ್ನು ಬದುಕಿಸಿದ್ದನ್ನು ಮರೆತಿರಾ? ಯಾರ ತಪ್ಪಿಗೆ ಯಾರಿಗೆ ಶಿಕ್ಷೆ"? ಎಂದು ಸಮಾಧಾನ ಪಡಿಸುತ್ತಾಳೆ.

'ರಾಹಿಲ್' ಯುದ್ಧದ ಬಗ್ಗೆ ಹೇಳುತ್ತಾ ತನ್ನ ಮನೆಯವರೆಲ್ಲಾ ಮಡಿದು ತಾನು ಏಕಾಂಗಿಯಾಗಿರುವುದನ್ನು ಹೇಳುತ್ತಾನೆ. ಕೊನೆಯಲ್ಲಿ ಎರಡು ದೇಶಗಳ ಯುದ್ಧ

---

೩೩. ಅದೇ, ಪು. ೧೩.

ನಿಂತುದನ್ನು ಟಿ.ವಿ.ಯಲ್ಲಿ ನೋಡಿ ತನ್ನ ದೇಶಕ್ಕೆ ಹೊರಡಲು ಸಿದ್ಧವಾದಾಗ ಮುದುಕಿ "ನೋಡಪ್ಪಾ ಊರಿನಲ್ಲಿ ನಿನಗಾರು ಇಲ್ಲವೆನ್ನುತ್ತೀ, ನಾನು ಮಗನನ್ನು ಮೊಮ್ಮಗುವನ್ನು ಕಳೆದುಕೊಂಡ ಓರ್ವ ನತದೃಷ್ಟೆ, ನೀನೇಕೆ ನನ್ನ ಮಗನಾಗೆ ಇಲ್ಲೇ ಇರಬಾರದು?" ಎಂದಳು ಅಂತೂ ರಾಹಿಲ್ ಅದೇ ದೇಶದಲ್ಲಿ ಉಳಿದ.

ಕಥೆಯ ಕೊನೆಯಲ್ಲಿ ಮುದುಕಿ ರಾಷ್ಟ್ರನಾಯಕರು ಟಿ.ವಿ.ಯಲ್ಲಿ ಕೈಕುಲುಕಿದ್ದನ್ನು ನೋಡಿ "ಎಷ್ಟೋ ಜನ ತಾಯಂದಿರು ಮತ್ತು ಪತ್ನಿಯರ ಹೃದಯಗಳಿಂದ ಹರಿಯುತ್ತಿದೆಯಲ್ಲಾ ನೆತ್ತರು, ಅದನ್ನು ಕಟ್ಟಿ ಕಟ್ಟಿ ನಿಲ್ಲಿಸಲು ಯಾವ ತಂತ್ರಜ್ಞರನ್ನು ಕರೆತರುತ್ತಾರೆ ಇವರು? ಈ ಮೂರ್ಖರ ವಿರುದ್ಧ ದಂಗೆ ಏಳುವುದೇ ಈಗ ನಮ್ಮ ಮುಂದಿರುವ ದಾರಿ" ಎನ್ನುತ್ತಾಳೆ. ಇಲ್ಲಿ ದೇಶದ ನಾಯಕರುಗಳ ವಿರುದ್ಧ ತಿರುಗಿ ಬೀಳುವಂತೆ ಸಾಮಾನ್ಯನು ಎಚ್ಚೆತ್ತುಕೊಳ್ಳಬೇಕೆಂಬ ಎಚ್ಚರಿಕೆ ಇದೆ.

ಈ ಕಥೆಯ ಮೂಲಕ ಕಥೆಗಾರ್ತಿ ಎರಡು ರಾಷ್ಟ್ರಗಳ ನಾಯಕರ ಸ್ವಾರ್ಥಕ್ಕಾಗಿ ಬಲಿಯಾಗುವ ಸೈನಿಕರು, ಅಮಾಯಕ ಜನಗಳ ಸ್ಥಿತಿಯನ್ನು ಹೇಳುತ್ತಾರೆ. ಅವರಿಗೆ ಇಷ್ಟವಿಲ್ಲದಿದ್ದರೂ ಹೋರಾಡಬೇಕಾದ, ದ್ವೇಷವಿಲ್ಲದಿದ್ದರೂ ಕೊಲ್ಲಬೇಕಾದ ಸಾಮಾನ್ಯರ ಬದುಕು ಇದು ಎಂದು ಹೇಳುತ್ತಾರೆ.

೩) ಅರಕ್ಷಿತ:

ಈ ಕಥೆಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಅರಕ್ಷಿತರಾದ ಜನರ ಜೀವನ ಚಿತ್ರಣವಿದೆ. ಐದು ಹೆಣ್ಣುಮಕ್ಕಳು ಮತ್ತು ಒಂದು ಗಂಡು ಮಗುವನ್ನು ಹೊಂದಿದ್ದ 'ಕೈಜಮ್ಮ'ಳ ಜೀವನ ಚಿತ್ರಣವಿದೆ. ಅವಳ ಗಂಡ ಉಸ್ಮಾನ್' ತರೀಕೆರೆಯಲ್ಲಿ ವ್ಯಾಪಾರ ಮಾಡಿಕೊಂಡಿರುವಾತ. ತನಗಿಷ್ಟ ಬಂದಾಗ ಒಂದೆರಡು ದಿನ ಇದ್ದು, ಹೆಂಡತಿಯೊಡನೆ ರಮಿಸಿ ಹೋಗುತ್ತಾನೆ. ಮೊದಲ ಮಗಳು ಜುಲೇಕಳಿಗೆ ಮದುವೆಯಾಗಿ, ಹೊಸ ಮನೆಯನ್ನು ಸೇರುತ್ತಾರೆ. ಉಸ್ಮಾನ್ ಈ ಬಾರಿ ತರೀಕೆರೆಗೆ ಹೋದವನು ಒಂದು ವರ್ಷವಾದರೂ ಬಾರದೆ, ದುಡ್ಡನ್ನು ಕಳುಹಿಸದೆ ಇದ್ದುದರಿಂದ ಕೈಜಮ್ಮ ೧೧ ವರ್ಷದ 'ಹಮೀದ್'ನನ್ನು ಚಿಕ್ಕಮಗಳೂರಿಗೆ ಕಳುಹಿಸುತ್ತಾಳೆ. ಅಲ್ಲಿ ಕೋಮುಗಲಭೆಯ ಕಾರಣದಿಂದ ಅವನ ಅಂಗಡಿ, ಮನೆ ಸುಟ್ಟುಹೋಗುತ್ತದೆ. ಅದರಲ್ಲಿ ಅವನು ತಪ್ಪಿಸಿಕೊಂಡ. ಆದರೆ ಮಗ ಅಲ್ಲಿಗೆ ಸೇರಿದ.

'ಉಸ್ಮಾನ್' ದುಡಿಮೆಗೆ ಬೇರೆ ಊರಿಗೆ ಹೋಗಿ, ಎಷ್ಟು ದಿನಗಳಾದರೂ ಬಾರದಿರುವುದು ಈ ಸಂದರ್ಭದಲ್ಲಿ ೬ ಮಕ್ಕಳ ತಾಯಿಯಾದ ಕೈಜಮ್ಮ ಹೊಟ್ಟೆ ಪಾಡಿಗಾಗಿ ಮಕ್ಕಳೊಂದಿಗೆ ಬೀಡಿಕಟ್ಟಿದರೂ ಅವರ ದುಡಿಮೆ ಸಾಲದೆ, ಬಡ್ಡಿಗೆ ತೀರ್ಮಾನವಾಗುತ್ತಿತ್ತು. ಗಂಡನಿಂದ ತಲಾಖ್ ಪಡೆದ ಫರೀದ ತನ್ನ ಮಗಳು

ಜಮೀಲಳಿಗೆ ಬಾಣಂತನ ಮಾಡುವ ನೆವದಲ್ಲಿ ಗಂಡನಿಗೆ ಹತ್ತಿರವಾಗಲು ನಡೆಸಿದ ಉಪಾಯಗಳೆಲ್ಲಾ ನೆಲಕಚ್ಚಿದವು. ಇದರಿಂದ ಅವಳ ಬಾಳು ಕತ್ತಲ ರಾತ್ರಿಯ ಬಿರುಗಾಳಿಯಲ್ಲಿ ಸಮುದ್ರದಲ್ಲಿ ದೋಣಿ ತೇಲುವಂತೆ ಆಯಿತು.

೪) ದೋಣಿ ಸಾಗಲಿ:

ಈ ಕಥೆಯಲ್ಲಿ 'ಸಾರಾ ಅಬೂಬಕ್ಕರ್'ರವರು ಸಮಾಜದಲ್ಲಿ ಹೆಣ್ಣಿನ ಸ್ಥಾನವನ್ನು, ನಗರ ಜೀವನದ ರಾತ್ರಿಯ ವೇಳೆಯ ಹೆಣ್ಣಿನ ಗೋಳನ್ನು ಚಿತ್ರಿಸಿದ್ದಾರೆ. 'ಗಿರಿಜಾ ಹಳ್ಳಿಯಿಂದ ಮಗಳ ಮನೆಗೆ ಬಾಣಂತನ ಮಾಡಲು ಹೋಗುವಾಗ ಮನೆಯಲ್ಲಿ ಸಾವಿತ್ರಿಗೆ ಹೇಳುವ ಮಾತುಗಳು ಗಮನಾರ್ಹ. ಹೆಣ್ಣು ಒಂದು ಹೆಜ್ಜೆ ತಪ್ಪಿದರೂ ಸಾಯುವ ತನಕ ಆಕೆ ಕೊರಗಬೇಕಾಗುತ್ತದೆ. 'ಮಾನ' ಹೊಟ್ಟೆಗಿಂತಲೂ ಶ್ರೇಷ್ಠವಾದುದು" ಎಂಬ ಮಾತು ಸಮಾಜದಲ್ಲಿ ಹೆಣ್ಣು ಅವಳದಲ್ಲದ ತಪ್ಪುಗಳಿಗಾಗಿಯೇ ಕೆಲವೊಮ್ಮೆ ಅನುಭವಿಸಬೇಕಾದ ಸ್ಥಿತಿಯನ್ನು ಹೇಳುತ್ತದೆ. ಹೆಣ್ಣಿನ ಬಾಳಿನಲ್ಲಿ 'ಮಾನ' ಬಹಳ ಮುಖ್ಯವಾದದ್ದು. ಯಾವುದೇ ಪರಿಣಾಮ ಆಕೆಯ ಮೇಲೆ ಆಗುವುದರಿಂದ ಅವಳು ಎಚ್ಚರಿಕೆಯಿಂದ ಇರಬೇಕಾಗುತ್ತದೆ.

ಮೊದಲೋ ಒಗಟಾಗಿ ಕಾಣುತ್ತಿದ್ದ ನಗರ ಜೀವನ ಗಿರಿಜಮ್ಮಳಿಗೆ ಈಗ ಸ್ಪಷ್ಟವಾಗ ತೊಡಗಿತು. ಒಂದು ರಾತ್ರಿ ಹೆಣ್ಣಿನ ಧ್ವನಿ ಕೇಳಿಸಿ, ಎಚ್ಚರಗೊಂಡ ಗಿರಿಜಮ್ಮ ಕಿಟಕಿಯ ಬಳಿ ನಿಂತಾಗ ಎದುರು ಮನೆಯಲ್ಲಿ ಹಲವು ಗಂಡಸರು ವೇಶ್ಯೆಯೊಬ್ಬಳಿಗೆ ಹಣ ನೀಡದೆ ಸತಾಯಿಸುತ್ತಿದ್ದುದನ್ನು, ಅವಳಿಗೆ ಹೊಡೆದು ಟ್ಯಾಕ್ಸಿಯಲ್ಲಿ ಹಾಕಿದ್ದನ್ನು ಕಂಡು ಗಂಡು ಜಾತಿಯ ಬಗೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದಳು. ಅವಳಿಗೆ ತನ್ನ ಗಂಡ ಮತ್ತು ಮಗ ಒಳ್ಳೆಯವರಾದರೂ, ಒಮ್ಮೆ ನಂಬಲಾಗದ ಮಾನಸಿಕ ಸ್ಥಿತಿಯುಂಟಾಗುತ್ತದೆ. "ರಾತ್ರಿಯ ಈ ಕರಾಳ ದೃಶ್ಯ ಅವಳಿಗೆ ತಾನು ಮನೆಯಲ್ಲಿ ಬಿಟ್ಟುಬಂದ ಸಾವಿತ್ರಿಯ ಬಗ್ಗೆ ಭಯ ತರುತ್ತದೆ. ಆದರೆ ಬೆಳಗಾದಾಗ ಅದಾವುದು ನಡೆದೆ ಇಲ್ಲವೇನೋ ಎಂಬಂತೆ ನಗರದ ಮತ್ತೊಂದು ಸುಂದರವಾದ ಮೂಕ ಮಲ್ಲಿಗೆ...... ಮಲ್ಲೀಗೆ .... ಎಂಬ ಶಬ್ದೊಡನೆ ಆರಂಭವಾಗುತ್ತದೆ."[೩೪]

ರಾತ್ರಿಯ ಬದುಕು ಮಾತ್ರ ಗಿರಿಜಾಳಿಗೆ ಅವಳ ಕಲ್ಪನೆ ಮೀರಿದ್ದಾಗಿದೆ. ಹಾಗೆಯೇ ಸಂಸಾರದಲ್ಲಿ ನಡೆಯುವ ಹಲವಾರು ಕಾಮುಕ ಬದುಕಿನ ನೆಲೆಗಳನ್ನು ಪ್ರಮುಖ ಬಿಂದುಗಳನ್ನಾಗಿ ಇಟ್ಟುಕೊಂಡು ಕಥೆಯನ್ನು ನೇಯ್ದು, ಬದುಕಿನ ಸತ್ಯವನ್ನು ಹೊರಗೆಡುಹುತ್ತಾರೆ.

---

೩೪. ಅದೇ, ಪು. ೫೩.

ಕೊನೆಯಲ್ಲಿ ಗಿರಿಜಮ್ಮ ಆಡುವ ಮಾತುಗಳು "ಏನು ಮಾಡುವುದು? ನಿನ್ನ ವಸ್ತುವನ್ನು ನೀನು ಜೋಪಾನ ಮಾಡಿದಂತೆ ನನ್ನ ವಸ್ತುವನ್ನು ನಾನಾದರೂ ಜೋಪಾನ ಮಾಡಬೇಕೋ ಬೇಡವೋ? ನಮ್ಮಂತಹ ಹೆಂಗಸರ ಬದುಕೆಲ್ಲವೂ ನಮ್ಮ ವಸ್ತುವನ್ನು ಜೋಪಾನ ಮಾಡುವುದರಲ್ಲೇ ಕಳೆದುಹೋಗುತ್ತದೋ ಏನೋ, ನಾವಿಬ್ಬರೂ ಒಂದೇ ದೋಣಿಯ ಪಯಣಿಗರು. ನಿನ್ನ ಬದುಕು ನಿನಗೆ, ನನ್ನ ಬದುಕು ನನಗೆ" ಎಂಬಲ್ಲಿ ಕಾಮುಕನಾದ ಗಂಡು, ಸಮಾಜದಲ್ಲಿ ಹೆಣ್ಣಿನ ಜವಾಬ್ದಾರಿ ಎದ್ದು ಕಾಣುತ್ತದೆ. ಏಕೆಂದರೆ ಇದರಿಂದ ಯಾರ ಬಾಳು ಹಾಳಾಗಬಾರದೆಂಬುದು ಹೆಣ್ಣಿನ ಕಾಳಜಿಯಾಗಿದೆ.

೫) ನಿಯಮ – ನಿಯಮಗಳ ನಡುವೆ:

ಈ ಕಥೆಯಲ್ಲಿ ವಿನಾಕಾರಣ ನೋವಿಗೆ ಒಳಗಾಗುವ ಹೆಣ್ಣಿನ ಚಿತ್ರಣವಿದೆ. ಅವಳು ದುಃಖದಲ್ಲಿ ಬೆಂದು ಅನಾರೋಗ್ಯದಲ್ಲಿ ಮರಣಹೊಂದಿ ಮುಕ್ತಿ ಕಾಣುತ್ತಾಳೆ.

'ಜೋಹರಾ' ಎರಡು ಮಕ್ಕಳ ತಾಯಿಯಾಗಿ, ಮೂರನೆಯ ಮಗುವಿಗೆ ಜನ್ಮ ನೀಡಲಿರುವವಳು. ಚಿಕ್ಕವಳಿದ್ದಾಗಿನಿಂದ ತನ್ನ ತಾಯಿಯೊಡನೆ ಶ್ರೀಮಂತರ ಮನೆಯ ಕೂಲಿ ಕೆಲಸ ಮಾಡಿ, ಪವನುಗಳು ಬೆಂಡೋಲೆ, ಆಲಿಕತ್ತು ಕೊಂಡಿದ್ದಳು. ಇದರಿಂದಲೇ ಅವಳಿಗೆ ಮದುವೆಯೂ ಆದದ್ದು. ಗಂಡ ಒಂದು ದಿನ ಜೋಹರಾಳ ಕಿವಿಯ ಓಲೆಯನ್ನು ಕೇಳುತ್ತಾನೆ. ಆದರೆ ಅದು ಅವಳ ಹಲವು ವರ್ಷಗಳ ಪರಿಶ್ರಮದ ಫಲ. ತಾಯಿಯ ಕಾಣಿಕೆಯಾಗಿದ್ದರಿಂದ ಅವಳ ಸಮ್ಮತಿ ಪಡೆಯಬೇಕೆನ್ನುತ್ತಾಳೆ. ಇದರಿಂದ ಕೋಪಗೊಂಡ ಅವಳ ಗಂಡ 'ಖಾದರ್' ಅವಳಿಗೆ ತಲಾಕ್ ನೀಡುತ್ತಾನೆ. ಮೂರು ಮಕ್ಕಳ ತಾಯಿ 'ಜೋಹರಾ ತನ್ನ ತಾಯಿಯ ಮನೆಯಲ್ಲಿ ಜೀವನ ಸಾಗಿಸುವಂತಾಯಿತು. ಆದರೆ ತಾಯಿ ಮತ್ತು ತಮ್ಮನ ಚುಚ್ಚು ನುಡಿಗಳು, ಮಕ್ಕಳು ತನ್ನ ಅನಾರೋಗ್ಯ ಈ ಎಲ್ಲವುಗಳ ನಡುವೆ ಅವಳು ಮತ್ತಷ್ಟು ಬೆಂದು ಹೋದಳು. ಹೆಂಡತಿಯಿಂದ ದೂರವಾದ ಖಾದರ್‌ಗೆ ಬೇಸರವಾಗಿ ಮರುಮದುವೆ ಮಾಡಿಕೊಳ್ಳಲು ತಿಳಿಸಿದಾಗ ಜೋಹರಾ ನಿರಾಕರಿಸುತ್ತಾಳೆ. ಅವಳ ಮುಟ್ಟು ಬೇರೆ ನಿಂತಿದ್ದರಿಂದ, ಆದರೆ ಮನೆಯ ಸ್ಥಿತಿ ತನ್ನ ಭವಿಷ್ಯವನ್ನು ನೆನೆದು ಮದುವೆಗೆ ತಡವಾಗಿ ಒಪ್ಪುತ್ತಾಳೆ. ಆದರೆ ಅವಳಿಗೆ ಮದುವೆಯಾಗಲು ಅವಳು ಋತುಸ್ನಾನ ಮಾಡಬೇಕಾದ್ದರಿಂದ ತಾಯಿ ಆಮಿನ ನಾಟಿ ವೈದ್ಯರಿಂದ ತಂದ ಔಷಧಿ ವ್ಯತಿರಿಕ್ತವಾಗಿ ಅವಳು ಮತ್ತಷ್ಟು ಅನಾರೋಗ್ಯ, ಜ್ವರಗಳಿಂದ ನರಳಿ, ರಕ್ತಸ್ರಾವವಾಗಿ, ನಿಶ್ಯಕ್ತಿಯಿಂದ ಮರಣಹೊಂದುತ್ತಾಳೆ.

ಇಲ್ಲಿ ಜೋಹರಾ ಎಲ್ಲವನ್ನು ಸ್ವೀಕರಿಸಬೇಕೆಂದು ಇಷ್ಟಪಡುವವಳಲ್ಲ. ಆದರೆ ತಾಯಿಯ ಒತ್ತಾಯದಿಂದ ಮತ್ತಷ್ಟು ಕಷ್ಟಕ್ಕೀಡಾಗುತ್ತಾಳೆ. "ಖಾದರ್ ಅವಳ ಓಲೆ ಕೇಳಿದಾಗ ತಾನು ಕಷ್ಟಪಟ್ಟು ದುಡಿದ ಒಡವೆ ಕೊಡುವುದಿಲ್ಲವೆನ್ನುತ್ತಾಳೆ. ಖಾದರ್

'ತಲಾಖ್' ನೀಡಿದಾಗ ಗಂಡ-ಹೆಂಡತಿಯರ ಸಂಬಂಧ ಮೂರು ಬಾರಿ ತಲಾಖ್ ಹೇಳಿದರೆ ಮುಗಿಯಿತೇ? ಆತನ ಮಗು ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿದ್ದರೂ ಆತನ ರಕ್ತ ಮೈಯಲೆಲ್ಲಾ ಹರಿದಾಡುತ್ತಿದ್ದರೂ ಈ ಮೂರು ಶಬ್ದಗಳು ತನ್ನನ್ನು ಎಂದೆಂದಿಗೂ ಬೇರ್ಪಡಿಸುವಷ್ಟು ಶಕ್ತಿಯುತವಾಗಿವೆಯೇ? ತಾನೂ ಕೂಡ ಹೀಗೆಯೇ ಮೂರು ಶಬ್ದಗಳನ್ನುಚ್ಛರಿಸಿಆತನನ್ನು ಬಿಡುಗಡೆಗೊಳಿಸಬಹುದೇ? ಎಂದೆಲ್ಲಾ ಪ್ರಶ್ನಿಸುತ್ತಾಳೆ. ಇದು ಪುರುಷ ತಾನೇ ನಿರ್ಮಿಸಿ, ಹೆಣ್ಣನ್ನು ಬಂಧಿಸಿರುವ ಕಟ್ಟಳೆಗೆ ಹೆಣ್ಣುಮಗಳು ಹಾಕಿದ ಪೆಟ್ಟಾಗಿದೆ."[೩೫]

ಆದರೆ ಗಂಡ ಖಾದರ್ ಮುಂದೆ ಅವಳನ್ನೇ ಮರುಮದುವೆ ಆಗಬೇಕೆಂದಾಗ ಸಿಡಿಮಿಡಿಗೊಳ್ಳುತ್ತಾಳೆ. ಸಂಪ್ರದಾಯಕ್ಕೆ ಸೋತು ಪ್ರಕೃತಿ ಧರ್ಮಕ್ಕೆ ವಿರುದ್ಧವಾಗಿ ವರ್ತಿಸಲು ಆರಂಭವಾಗುತ್ತದೆ. ಧರ್ಮದ ನಿಯಮ ಪಾಲಿಸಲು ಪ್ರಕೃತಿ ನಿಯಮದ ವಿರುದ್ಧ ಹೋರಾಟ ಆರಂಭವಾಯಿತು. ಆದರೂ ಪ್ರಯತ್ನಗಳೆಲ್ಲಾ ವಿಫಲವಾಗಿ ಮರಣವೇ ಅವಳಿಗೆ ಮುಕ್ತಿಯಾಯಿತು. 'ತಲಾಖ್ ರೀತಿಯ ಧರ್ಮ ನಿಯಮಗಳ ನಡುವೆ ಹೆಣ್ಣಿನ ಬಾಳು ಕೊನೆಗೊಂಡಿದೆ.

೬. "ನೀರು":

ನೀರು ಕಥೆಯಲ್ಲಿ ಭಾರತೀಯ ಮಧ್ಯಮ ವರ್ಗದ ಸಾಮಾನ್ಯ ಹೆಣ್ಣು, ಇವಳ ಕನಸು ದೊಡ್ಡದು ಅದಕ್ಕೆ ಅವಳಿದ್ದ ಸ್ಥಿತಿಯೇ ಕಾರಣವಾಗಿತ್ತು. ಅವರ ಮನೆಯಲ್ಲಿ ಒಮ್ಮೆಯೂ ನೀರಿನ ಗೋಳು ತಪ್ಪುತ್ತಿರಲಿಲ್ಲ. ಒಮ್ಮೆ ನೀರಿದ್ದರೆ ಮತ್ತೊಮ್ಮೆ ಇಲ್ಲ. ಬರಲು ಆರಂಭಿಸಿ ತಕ್ಷಣ ನಿಲ್ಲುತ್ತದೆ. ಬಂದರೆ ತುಂಬುವ ಮೊದಲೇ ಗಮನಕ್ಕೆ ಬಾರದೆ ಹರಿದು ಹೋಗುತ್ತದೆ. ಇನ್ನು ಬಚ್ಚಲು ಮನೆಯಲ್ಲಿ ಪಾಚಿಕಟ್ಟಿದ್ದ ಗೋಡೆಗಳು, ಇವೆಲ್ಲವುಗಳಿಂದ ಬೇಸತ್ತ 'ಭಾರತಿ'ಗೆ ಸಮನಾಗಿ ರಭಸವಾಗಿ ದಿನವಿಡೀ ನೀರು ಹರಿದು ಬರುವಂತಹ ದೊಡ್ಡ ನಲ್ಲಿ ಇರುವ ಬಚ್ಚಲಿನಲ್ಲಿ ಬಾಳು ಪೂರ್ತಿ ಸ್ನಾನ ಮಾಡಬೇಕೆಂಬ ಆಸೆ! ಆದರೆ ಅಲ್ಲಿಯೂ ಇರಬಹುದಾದ ದೋಷಗಳು ಆಕೆಗೆ ಕಾಣದವು. ಅದರ ಅರಿವು ಅವಳಿಗೆ ಆಗುವುದು ಗೆಳತಿಯಿಂದ. "ಕಲ್ಯಾಣಮಂಟಪದಲ್ಲಿ ವಿಶಾಲ ಬಚ್ಚಲಿನ ಸದಾ ರಭಸವಾಗಿ ಹರಿಯುವ ಬಚ್ಚಲಿನಲ್ಲಿ ಹೊಗೆ, ಬಿಸಿನೀರುಗಳ ನಡುವೆ ಕಷ್ಟದಿಂದ ಸ್ನಾನ ಮಾಡಿ, ಸಾಯದೆ ಬದುಕಿ ಹೊರಬಂದಾಗ ಮಧ್ಯಮ ವರ್ಗದ ಜನರ ಬದುಕೆ ಇಷ್ಟು ಇರುವುದರಲ್ಲಿ ಉತ್ತಮ ವ್ಯವಸ್ಥೆ ಇರುವುದಿಲ್ಲ. ಆದರೆ ಶ್ರೀಮಂತರಿಗೆ ಬೇಕಾದ

೩೫. ಅದೇ, ಪು. ೮೫.

ವ್ಯವಸ್ಥೆಗಳು ಸರಿಯಾಗಿ ಇರುವುದರಿಂದ ಅವರಿಗೆ ಯಾವುದೇ ತೊಂದರೆ ಇರುವುದಿಲ್ಲ."[೩೬]

ಹೀಗೆ ಈ ಕಥೆಯೂ ಕುತೂಹಲದಿಂದ ಓದಿಸಿಕೊಂಡು ಹೋಗುವ ಧಾಟಿಯಲ್ಲಿದೆ.

----

೩೬. ಅದೇ, ಪು. ೯೯–೧೦೦.

ಅಧ್ಯಾಯ : ಆರು

"ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು"
ಮತ್ತು
'ಬೆಂಕಿಮಳೆ' ಕಥಾಸಂಕಲನಗಳ ತೌಲನಿಕ ಅಧ್ಯಯನ

ಕರ್ನಾಟಕದಲ್ಲಿ ಲಿಂಗಭೇದ ನೀತಿ ಮತ್ತು ಅಸಮಾನತೆಯ ವಿರುದ್ಧದ ಹೋರಾಟ ತೀವ್ರವಾಗಿ "ಮಹಿಳಾ ಸಾಹಿತ್ಯ" ಎಂಬ ಹೆಸರುಗಳಿಸಿ ಬೆಳೆಯುತ್ತಿರುವ ಇಂದಿನ ಸಾಹಿತ್ಯ ಘಟ್ಟದಲ್ಲಿ, ಸಾಹಿತ್ಯ ಸೇವೆಯಲ್ಲಿ ತೊಡಗಿರುವ ಮಹಿಳೆಯರು ಅದರಲ್ಲೂ ಇವರು ಮುಸ್ಲಿಂ ಜನಾಂಗದವರಾಗಿದ್ದು, ಅವರ ಜನಾಂಗದ ಮತ್ತು ಸಮಾಜದ ಬೇರೆ ಹೆಣ್ಣು ಮಕ್ಕಳ ವಿವಿಧ ರೀತಿಯ ಶೋಷಿತ ಬದುಕನ್ನು ತಮ್ಮ ಕಥಾಸಂಕಲನಗಳಲ್ಲಿ ನೀಡಿದ್ದಾರೆ. 'ಬಾನು ಮುಷ್ತಾಖ್ ಮತ್ತು 'ಸಾರಾ ಅಬೂಬಕ್ಕರ್' ಪುರುಷನ ದೌರ್ಜನ್ಯ, ಅಸಹನೆ, ತಿರಸ್ಕಾರಗಳಿಗೆ ಒಳಗಾಗಿಯೂ ಅದನ್ನು ಒಪ್ಪಿಕೊಂಡೆ ಬಂದಿರುವ ಸ್ತ್ರೀಯರಿಗೆ ಅದನ್ನು ವಿರೋಧಿಸಿ, ಸಮಾನತೆ ಪಡೆಯಲು ದಾರಿದೀಪವಾಗಿದ್ದಾರೆ.

ಹೆಣ್ಣಿನ ಉದ್ಧಾರಕ್ಕಾಗಿ ತಮಗೆ ಎದುರಾದ ಪ್ರತಿರೋಧಗಳನ್ನು ಸಹಿಸಿದ್ದಾರೆ. ಆದುದರಿಂದ ಇವರಿಬ್ಬರ ಸ್ತ್ರೀ ಸಂವೇದನೆ ಮಾನವೋದ್ಧಾರದ ಹಾದಿಯದು. ಆದುದರಿಂದ ಇವೆರಡು ಸಂಕಲನಗಳ ಉದ್ದೇಶ. ಶೋಷಿತ ಮಹಿಳೆಯ ಬದುಕನ್ನು ವಿವಿಧ ನೆಲೆಗಳಲ್ಲಿ ಚಿತ್ರಿಸುವುದು. 'ಬಾನು ಮುಷ್ತಾಕ್'ರ "ಬೆಂಕಿಮಳೆ" ಮತ್ತು ಸಾರಾ ಅಬೂಬಕ್ಕರ್'ರವರ "ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು". ಈ ಕಥೆಗಳಲ್ಲಿರುವ ಮಹಿಳೆಯರ ಬದುಕಿನ ಸ್ಥಿತಿ-ಗತಿಗಳ ಸಾಮ್ಯವೈಷಮ್ಯಗಳನ್ನು ಗುರುತಿಸುವ ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

'ಬೆಂಕಿಮಳೆ' ಕಥೆಯಲ್ಲಿ 'ಮುತುವಲ್ಲಿ ಸಾಹೇಬರನ್ನು ತಂಗಿ ಜಮೀಲಾ ಆಸ್ತಿಯನ್ನು ಕೇಳಲು ಬರುವುದು. ಅದಕ್ಕಾಗಿ ಅತ್ತೆಗೆ 'ಆರೀಫಾ' "ಹಕ್‌ದಾರ್ ತರ್‌ಸೆತೋ ಅಂಗಾರ್‌ಕಾ ಸ್ಟೊ ಬರ್‌ಸೆ"[೩೭] (ಹಕ್ಕುದಾರ ಮೊರೆ ಇಟ್ಟಲ್ಲಿ ಬೆಂಕಿಮಳೆ ಬಂದೀತು) ಎಂದಿರುವ ಮಾತುಗಳು ಕಥೆಯ ಮೂಲೋದ್ದೇಶವನ್ನು ಹೇಳುತ್ತದೆ. ಮುತುವಲ್ಲಿ ತಾನು ತನ್ನ ಹೆಂಡತಿ ಮನೆಯಿಂದ ಅವಳ ಪಾಲಿನ ಆಸ್ತಿಯನ್ನು ಪಡೆದಿದ್ದರಿಂದ, ಜಮೀಲಾ ಕೊಡ ಸಕೀನಾ ಅಕ್ಕನ ಪರವಾಗಿಯೂ ಆಸ್ತಿಯಲ್ಲಿ ಪಾಲನ್ನು ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ.

ತಂದೆ ಸತ್ತು ಹತ್ತು ವರ್ಷದ ನಂತರವೂ ಅವನು ಆಸ್ತಿಯನ್ನು ಅನುಭವಿಸುತ್ತಲೇ ಇದ್ದರೂ ಕೊಡದೆ ಇರುವುದು ಅದರಲ್ಲೂ ಗಂಡನನ್ನು ಕಳೆದುಕೊಂಡು ಕಷ್ಟಪಟ್ಟು

---

೩೭. ಬೆಂಕಿಮಳೆ – ಬಾನುಮುಷ್ತಾಕ್, ಪು. ೨

ದುಡಿದು ಮಕ್ಕಳನ್ನು ಸಾಕುತ್ತಿದ್ದ ಸಕೀನಾಳನ್ನು ನೋಡದೆ ಇದ್ದುದು ಪುರುಷನ ಅಧಿಕಾರದಿಂದ ರೂಪಿಸಿಕೊಂಡ ಪ್ರಪಂಚದಿಂದ ಜಮೀಲಾ ಕೇಳಿದಾಗಲೇ ಅವನು ಅದಕ್ಕೆ ಉತ್ತರಿಸದೆ ಹೋದುದು ತಪ್ಪಾಗುತ್ತದೆ. ಹೊರಗಡೆ ಅಧಿಕಾರಿಯಾಗಿ ಯಾವುದೇ ಹೆಣಕ್ಕೆ, ಜನರಿಗೆ ಪರದಾಡುವ ಇವನು ಮನೆಯ ಜವಾಬ್ದಾರಿಯನ್ನೇ ಸರಿಯಾಗಿ ನಿಭಾಯಿಸದೆ ಹೋಗುತ್ತಾನೆ.

ಅಧಿಕಾರದ ಹೆಸರಿನಲ್ಲಿ ಹೆಣ್ಣಿನ ಪ್ರಪಂಚಕ್ಕೆ ಮೋಸ ಮಾಡಿರುವ ಪ್ರತಿನಿಧಿಯಾದ ಇವನನ್ನು ವಿರೋಧಿಸಲು ಕಥೆಗಾರ್ತಿಯೂ ಹೆಣ್ಣಿಗೆ ಧರ್ಮಬದ್ಧವಾಗಿ ಬಂದಿರುವ ಆಸ್ತಿಯನ್ನು ನೀಡಬೇಕೆಂದು ಜಮೀಲಳ ಮೂಲಕ ಸ್ತ್ರೀಪರವಾದ ಧ್ವನಿಯನ್ನೆತ್ತಿದ್ದಾರೆ. ಜಮೀಲ ಇಲ್ಲಿ ಎಲ್ಲಾ ಹೆಣ್ಣುಮಕ್ಕಳ ಪ್ರತಿನಿಧಿಯಾಗಬಲ್ಲಳು. ಜಮೀಲಾ ಆಸ್ತಿ ಕೇಳಲು ಬಂದಾಗ ನೀವು ಇಷ್ಟೆಲ್ಲಾ ಪಂಚಾಯ್ತಿ ತೀರ್ಮಾನಗಳನ್ನು ಮಾಡುವವರು, ನೀವೇ ನಮ್ಮನ್ನು ಕರೆದು....... ತಗೋ ನಿನ್ನ ಪಾಲನ್ನು ಅನ್ಬೇಕಿತ್ತು. ನನ್ನ ವಿಚಾರವಂತೂ ಹೋಗ್ಲಿ.... ಸಕೀನಾ ಅಕ್ಕನದ್ದೇಳಿ...... ಇತ್ತ ಗಂಡನೂ ಇಲ್ಲಿ..... ಅತ್ತ ದುಡಿಯುವ ಗಂಡು ಮಕ್ಕಳೂ ಇಲ್ಲ. ಬೆಳೆದ ಇಬ್ಬರು ಮಕ್ಕಳ ಮದುವೆಯನ್ನು ಹೇಗೆ ಮಾಡಬೇಕು? ಎಂದು ಪ್ರಶ್ನಿಸುತ್ತಾಳೆ.

ಹೆಣ್ಣುಮಕ್ಕಳು ಅದರಲ್ಲೂ ಸಂಪ್ರದಾಯ, ಕಟ್ಟಳೆಗಳ ನಡುವೆ ಬೆಳೆದವರು ತಾವಾಗಿಯೇ ತಮ್ಮ ಹಕ್ಕುಗಳನ್ನು ಕೇಳಲಾರರು ಅವರ ಹಕ್ಕುಗಳನ್ನು ಜವಾಬ್ದಾರಿಯಿರುವವರು ನೀಡಬೇಕು ಎಂಬ ಅಂಶವನ್ನು ತಿಳಿಯಬಹುದು. ಇದು ಬಾನುಮುಷ್ತಾಕ್‌ರ ಹೆಣ್ಣಿನ ಪರವಾದ ಸಂವೇದನೆಯಾಗಿದೆ. ಅದೇ ರೀತಿ 'ಸಾರಾ'ರವರು ಕೂಡ ಧರ್ಮದಂತೆ ಹೆಣ್ಣುಮಕ್ಕಳಿಗೆ ಆಸ್ತಿಯನ್ನು ನೀಡದೆ ಹೆಣ್ಣು ಮಗುವೆಂಬ ಕಾರಣಕ್ಕಾಗಿ ಕಿರಿಯ ಮಗಳಿಗೆ ಶಾಲೆಗೂ ಕಳುಹಿಸದೆ, ಮದುವೆಯ ಸಮಯದಲ್ಲೂ ದಡ್ಡ ಹುಡುಗನನ್ನು ಮದುವೆ ಮಾಡಿಕೊಟ್ಟು ಅವಳ ಸ್ವಂತ ಪರಿಶ್ರಮದಿಂದ ದುಡಿಯುವಂತೆ ತನ್ನ ಸಂಸಾರವನ್ನು ಸಾಕಿಕೊಳ್ಳುವಂತೆ ಮಾಡುತ್ತಾನೆ.

ಆದರೆ ಕಡೆಗಾಲದಲ್ಲಿ ತನ್ನನ್ನು ಅವಳು ನೋಡಿಕೊಳ್ಳಬೇಕೆಂದು ಕೇಳುತ್ತಾ ಆಸ್ತಿಯನ್ನು ಹಂಚುವಾಗ ಮತ್ತೆ ಇಬ್ಬಗೆಯ ನೀತಿಯನ್ನು ಅನುಸರಿಸಿ, ಗಂಡುಮಕ್ಕಳಿಗೆ ಮಾತ್ರ ಆಸ್ತಿಯನ್ನು ಪಾಲುಮಾಡುತ್ತಾನೆ. ಮಗಳು ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಏನೂ ಇಲ್ಲವೇ? ಎಂದು ಕೇಳಿದರೂ "ನಿಮಗೆ ಮದುವೆ ಮಾಡಿಕೊಡಲಿಲ್ಲವೇ? ನ್ಯಾಯಾಲಯಕ್ಕೆ ಹೋದರೂ ಅಲ್ಲೂ ಇರುವವರು. ನಾವೇ ಎಂಬುದನ್ನು ಮರೆತೆಯಾ?"[೩೮] ಎನ್ನುವುದು ಅಲ್ಲಿಯೂ ಪುರುಷರ ಕೈವಾಡವೇ ನಡೆಯುತ್ತದೆ.

---

೩೮. ಅದೇ, ಪು. ೪.

ಆಸ್ತಿಯನ್ನು ನೀನು ಹಕ್ಕುದಾರಳಾದರೂ ನಾನು ಅದನ್ನು ನೀಡಲಾರೆ ಎಂಬ ಭಾವನೆ ಇದೆ. ಇಂದು ಅಣ್ಣನಾಗಲಿ, ಅಪ್ಪನಾಗಲಿ, ತಮ್ಮ ಪುರುಷತ್ವವನ್ನು ಸಾಧಿಸಲು ಆಡುವ ಅಟ್ಟಹಾಸದ ನುಡಿ ಮತ್ತು ಸಮಾಜದಲ್ಲಿ ಹಿಂದಿನಿಂದ ಕೆಲವರಲ್ಲಿ ಅಣ್ಣ ಮತ್ತು ಮುತುವಲ್ಲಿಯಲ್ಲಿ ಬಂದಿರುವ ಗುಣ.

ಈ ಎರಡು ಕಥೆಗಳಲ್ಲಿ ಮುತ್ತುವಲ್ಲಿ ಮತ್ತು ತಂಗಿಯ ಅಣ್ಣ ಒಂದೇ ಗುಣಗಳನ್ನು ಹೊಂದಿರುವವರು. ಮುತುವಲ್ಲಿ ಅತ್ತೆಯ ಮನೆಯಿಂದ ಆಸ್ತಿಯನ್ನು ಕೇಳದೆ ಪಡೆಯುತ್ತಾನೆ. ಆದರೆ 'ಸುಣ್ಣ ಕಥೆಯಲ್ಲಿ ಅಣ್ಣ ತಂದೆಯಿಂದಲೇ ಆಸ್ತಿಯನ್ನು ಪಡೆದಾಗಲೂ ಆಸ್ತಿಯನ್ನು ತಂಗಿಗೆ ನೀಡದೆ ಅವರನ್ನು ವಂಚಿಸುತ್ತಾನೆ. ಇಲ್ಲಿ ಸಕೀನಾಳಿಗೆ ಗಂಡನಿಲ್ಲ. ಆದರೆ ಸುಣ್ಣ ಕಥೆಯಲ್ಲಿ ಅವಳಿಗೆ ಗಂಡನಿದ್ದು ಪ್ರಯೋಜನವಿಲ್ಲ. ಮುತುವಲ್ಲಿ ಮತ್ತು ಅಣ್ಣಂದಿರು ಇದನ್ನು ಯೋಚಿಸಬೇಕಿತ್ತು. ಆದರೆ ಕೇಳಿದರೂ ಅದನ್ನು ನಿರಾಕರಿಸುತ್ತಾರೆ. ಬಾನುಮುಷ್ತಾಕ್ ಮತ್ತು ಸಾರಾ ಅಬೂಬಕ್ಕರ್ ಇಬ್ಬರು ಲೇಖಕಿಯರು ಇಲ್ಲಿ ಜಮೀಲ ಮತ್ತು ತಂಗಿಯರಿಬ್ಬರ ಮೂಲಕ ಕಾನೂನಿನ ಉಪಯೋಗ ಪಡೆಯಲು ಹೆಣ್ಣುಮಕ್ಕಳಿಗೆ ಸಹಾಯಕವಾಗುವಂತೆ ಮಾತನಾಡಿಸಿದ್ದಾರೆ. ಶ್ರೀಮಂತರಿಗೆ ಆಸ್ತಿಯ ಅವಶ್ಯಕತೆ ಇಲ್ಲ. ಆದರೆ ಸಕೀನಾಳಂತ ಸ್ಥಿತಿಯಲ್ಲಿರುವವರಿಗೆ ಇದ್ದೇ ಇದೆ. ಅದನ್ನು ನೀಡಿದರೆ ನ್ಯಾಯ, ಮಾನವೀಯ ಗುಣ ಹೊಂದಿದಂತಾಗುತ್ತದೆ.

ಬಾನುಮುಷ್ತಾಕ್'ರ 'ಕರಿನಾಗರಗಳು' ಕಥೆ ಮತ್ತು ಸಾರಾ ಅವರ 'ಅರಕ್ಷಿತ ಕಥೆಗಲು ಒಂದು ರೀತಿಯಿಂದ ಸಾಮ್ಯತೆ ಪಡೆದಿವೆ. ಕರಿನಾಗರಗಳು ಕಥೆಯಲ್ಲಿ ಗಂಡುಮಕ್ಕಳಿಲ್ಲವೆಂಬ ಕಾರಣಕ್ಕಾಗಿ ಯಾಕೊಬ್ ತನ್ನ ಹೆಂಡತಿ ಅಶ್ರಫ್‌ಳನ್ನು ಬಿಟ್ಟು ಬೇರೆ ಮದುವೆಯಾಗುತ್ತಾನೆ. ಬೇರೆ ಮದುವೆಯಾದರೂ ಧರ್ಮದ ಕಟ್ಟಳೆಯಂತೆ ಅವಳಿಗೆ ನೀಡುವ ಎಲ್ಲಾ ಸವಲತ್ತುಗಳನ್ನು ಈಕೆಗೂ ನೀಡಬೇಕು. ಆದರೆ ಯಾಕೊಬ್ ಇಲ್ಲಿ ಅವಳನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಂಡು ಬಂದು ಮಗುವಿನ ಸಾವಿಗೆ ಕಾರಣನಾಗುತ್ತಾನೆ. ಅಶ್ರಫ್ ಬಹಳ ಕಷ್ಟದಿಂದ ಮಗಳನ್ನು ಉಳಿಸಿಕೊಳ್ಳಲು ಮಾಡುವ ಪ್ರಯತ್ನಗಳೆಲ್ಲ ವಿಫಲವಾಗುತ್ತವೆ.

ಮುತುವಲ್ಲಿಯಾದ ಅಬ್ದುಲ್ ಕಾದರ್ ಸಾಹೇಬ ಒಂದು ಅಧಿಕಾರದಲ್ಲಿದ್ದು ಅವಳಿಗೆ ನ್ಯಾಯವನ್ನು ದೊರಕಿಸದೆ ಅವನ ಹೆಣ್ಣಿನ ಬಗೆಗಿನ ಅಸಹನೆ, ನಿರ್ಲಕ್ಷ್ಯ ಭಾವನೆಗಳನ್ನು ತೋರುತ್ತಾನೆ. "ಆದ್ದರಿಂದಲೇ ಅಶ್ರಫ್ ಸಾಮಾಜಿಕವಾಗಿ, ಆರ್ಥಿಕವಾಗಿ, ಯಾವುದೇ ರಕ್ಷಣೆಗಳಿಲ್ಲದೆ ಅರಕ್ಷಿತಳಾಗಿ ನಿಕೃಷ್ಟ ಜೀವನ ಸಾಗಿಸುತ್ತಾಳೆ. ಇಂತಹ ಸ್ಥಿತಿಯಲ್ಲಿ ಅವಳು ಮಕ್ಕಳಿಗಾಗಿ ಮತುವಲ್ಲಿಯಲ್ಲಿ ನ್ಯಾಯವನ್ನು ಬೇಡಲು

ಹೋರಾಡುತ್ತಾಳೆ. ಇದರ ಮೂಲಕ ಬಾನುಮುಷ್ತಾಕರ ಹೆಣ್ಣಿನ ಪರ ಸಂವೇದನಾ ದೃಷ್ಟಿ ಕಾಣುತ್ತದೆ."[೨೯]

ಸಾರಾ ಅಬೂಬಕ್ಕರ್‌ರವರ ಅರಕ್ಷಿತ ಕಥೆಯಲ್ಲಿ ಕೈಜಮ್ಮ ಹಲವು ಹೆಣ್ಣುಮಕ್ಕಳ ನಂತರ ಒಂದು ಗಂಡು ಮಗುವನ್ನು ಹೆತ್ತರೂ ಅವಳ ಗಂಡ ದೂರದ ಊರಿನಲ್ಲಿ ದುಡಿಮೆ ಮಾಡಿ ಎಂದೋ ಒಂದು ದಿನ ಬಂದುಹೋಗುತ್ತಾನೆ. ಬಂದಾಗ ಅವನ ಕೈಯ್ಯಲ್ಲಿದ್ದಷ್ಟು ಹಣ ನೀಡಿ, ಹೆಂಡತಿಯೊಡನೆ ರಮಿಸುತ್ತಾನೆ. ಆದರೆ ಹೆಂಡತಿ ಕೈಜಮ್ಮ ಮನೆ ಸಮಸ್ಯೆಗಳನ್ನು ಅವನಿಗೆ ಹೇಳಿದಾಗ ನೀನು ಅಷ್ಟೊಂದು ಹೆಣ್ಣು ಮಕ್ಕಳನ್ನು ಹೆರಲು ಹೇಳಿದವರು ಯಾರು? ಎಂದು ಪ್ರಶ್ನಿಸಿ, ಜಗಳವಾಡಿ ಅವಳಿಗೆ ಬೈದು ಹೊರಡುತ್ತಾನೆ. ಮತ್ತೆ ವಾಪಸ್ಸಾಗುವುದು ಅವನಿಗೆ ಇಷ್ಟಬಂದಾಗ. ಆದರೆ ಬೀಡಿಕಟ್ಟಿ ಒಂದು ಗುಡಿಸಲಿನಲ್ಲಿ ವಾಸಿಸುವ ಕೈಜಮ್ಮ ಮತ್ತು ಅವಳ ಮಕ್ಕಳು ದೊಡ್ಡ ಮಗಳ ಮದುವೆಯ ಸಮಯದಲ್ಲಿ ಬೇರೆ ಮನೆ ಮಾಡಿ ಅದಕ್ಕೆ ಬಾಡಿಗೆ ನೀಡಲಾಗದೆ ಗೋಲಾಡುತ್ತಾರೆ. ಯಜಮಾನನು ಹಿಂಸಿಸಿದಾಗ ಅವನ ಅಡುಗೆ ಮನೆಯಲ್ಲಿ ವಾಸ್ತವ್ಯ ಹೂಡುವ ದುಃಸ್ಥಿತಿಯನ್ನು ತಲುಪುತ್ತಾರೆ.

ಇಲ್ಲಿ ಯಾಕೊಬ್ ಮತ್ತು ಉಸ್ಮಾನ್ ಇಬ್ಬರಿಗೂ ಶಿಕ್ಷಣವಿಲ್ಲದೆ ಯಾವುದೇ ಮಕ್ಕಳು ಹುಟ್ಟಲು ಗಂಡೇ ಕಾರಣವೆಂಬ ತಿಳಿವಳಿಕೆ ಇಲ್ಲದೆ ಹೆಂಡತಿಯರ ಮೇಲೆ ಆರೋಪ ಹೊರಿಸಿ, ತಾವು ನುಣುಚಿಕೊಳ್ಳುವ ಮತ್ತು ಹೆಂಡತಿಯರನ್ನು ದಯನೀಯ ಸ್ಥಿತಿಗೆ ತರುತ್ತಾರೆ. ಶ್ರೀಮಂತಿಕೆ ಬೇಡ ಅವರಿಗೆ ಸಾಮಾನ್ಯ ಮೂಲ ಅವಶ್ಯಕತೆಗಳನ್ನು ಪೂರೈಸದ ಹೆಂಡತಿಯರನ್ನು ಆರೋಪಕ್ಕೆ ಒಳಪಡಿಸುತ್ತಾರೆ. ಇಲ್ಲಿ ಅಶ್ರಫ್ ಮತ್ತು ಕೈಜಮ್ಮರ ಸ್ಥಿತಿಯೂ ಹಿಂದೆ ಉಳಿಯಲು ಅವರು ಮತ್ತು ಅವರಿಬ್ಬರ ಗಂಡಂದಿರ ಅಶಿಕ್ಷಣ, ವೈಜ್ಞಾನಿಕ ಯೋಚನೆ ಇಲ್ಲದಿರುವುದು ಧರ್ಮದ ಕುರುಡು ನಂಬಿಕೆಯೂ ಕಾರಣವಾಗಿತ್ತು.

ಕೈಜಮ್ಮ ಗಂಡುಮಗು ಹೊಂದಿದ್ದು ಸಾಮಾಜಿಕವಾಗಿ, ಆರ್ಥಿಕವಾಗಿ ಅರಕ್ಷಿತಳೇ ಆದಳು. ಅಲ್ಲಿ ಅಶ್ರಫ್ ಕೂಡ ಅವಳ ಗಂಡ ಬದುಕಿದ್ದು ಅರಕ್ಷಿತಳೇ ಆಗಿರುತ್ತಾಳೆ. ಇವರಿಬ್ಬರ ಬಗೆಗೆ ಎರಡೂ ಕಥೆಗಳಲ್ಲಿನ ಇತರ ಸ್ತ್ರೀ ಪಾತ್ರಗಳಿಗೆ ಇವರ ಬಗ್ಗೆ ಸಹಾನುಭೂತಿ ಇರುವಂತೆ, ಪುರುಷ ಪಾತ್ರಗಳಿಗೆ ಇಲ್ಲದಿರುವುದನ್ನು ಕಾಣಬಹುದು. ಕರಿ ನಾಗರಗಳು ಕಥೆಯಲ್ಲಿ ಯಾಕೂಬ್ ಮತ್ತು ಮುತುವಲ್ಲಿ, ಅರಕ್ಷಿತ ಕಥೆಯಲ್ಲಿ ಉಸ್ಮಾನ್ ಮತ್ತು ಮನೆಯ ಯಜಮಾನ ಅವನ ಮಕ್ಕಳು ಇವರ ಬಗ್ಗೆ ಮಾನವೀಯವಾಗಿ ವರ್ತಿಸುತ್ತಿರಲಿಲ್ಲ. ಈ ಕಥೆಗಳಲ್ಲಿ ಪುರುಷರ ದಬ್ಬಾಳಿಕೆಯೇ ಹೆಣ್ಣಿನ

---

೨೯. ಕೆ.ಷರೀಫ, ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ (ಲೇಖನ), ಪು. ೧೩೪.

ದುಃಸ್ಥಿತಿಗೆ ಕಾರಣವಾದವು ಮತ್ತು ಅವಳಲ್ಲಿ ತನ್ನ ಎಲ್ಲ ನೋವುಗಳನ್ನು ನುಂಗಿಕೊಳ್ಳುವ ಗುಣವು ಪ್ರಧಾನ ಅಂಶವೇ ಆಗುತ್ತದೆ.

ಅಶ್ರಫ್ ಮತ್ತು ಕೈಜಮ್ಮ ತಮ್ಮ ಸ್ಥಿತಿಯಿಂದ ಮೇಲೇರಲು ನ್ಯಾಯವನ್ನು ಕೇಳಿದರೂ ವಿಫಲವಾಗಿಯೇ ಉಳಿಯುತ್ತದೆ. ಇದಕ್ಕೆ ಅವರಲ್ಲಿದ್ದ ಅಜ್ಞಾನವೇ ಕಾರಣ ಇದರಿಂದ ಅವರೇ ಅನುಭವಿಸಬೇಕಾದ ಸ್ಥಿತಿಯನ್ನು ಲೇಖಕಿಯರು ಎತ್ತಿ ತೋರಿಸುತ್ತಾ ನ್ಯಾಯವನ್ನು ಕೇಳಬೇಕಾದ ಅಗತ್ಯತೆಯನ್ನು ತಿಳಿಸುತ್ತಾರೆ.

ಬಾನುಮುಷ್ತಾಕ್‌ರವರ ಹುಟ್ಟು ಮತ್ತು ಸಾರಾ ಅಬೂಬಕ್ಕರ್‌ರವರ 'ಬಲೆ' ಕಥೆಗಳು ಅಂತರ್‌ಜಾತಿ ವಿವಾಹದ ಕುರಿತಾಗಿ ಲೇಖಕಿಯರ ಸಮತಿಯನ್ನು ವ್ಯಕ್ತಪಡಿಸುವ ಕಥೆಗಳು ಹುಟ್ಟು ಕಥೆಯಲ್ಲಿ ಮನೆಯವರನ್ನು ಧಿಕ್ಕರಿಸಿ ಹೋಗುವ ನಿಶಾತ್ ಅವಳ ಗಂಡ ಜಯಶೀಲನೊಡನೆ ಸುಖವಾಗಿಯೇ ಸಂಸಾರ ಮಾಡುತ್ತಾಳೆ. ಅದೇ ರೀತಿ ಬಲೆ ಕಥೆಯಲ್ಲಿ ತಂದೆ-ತಾಯಿಗಳ ಮಾತನ್ನು ಮೀರಿ ತನ್ನನ್ನು ಪ್ರೀತಿಸಿದವಳನ್ನು ಮದುವೆಯಾಗುವ ಮಗ ಕೂಡ ಸಾಯುವ ತನಕ ಸುಖವಾದ ಸಂಸಾರವನ್ನೇ ಸಾಗಿಸುತ್ತಾನೆ. ಆದರೆ ಕಥೆಗಳ ಅಂತಿಮ ರೂಪ ಸ್ವಲ್ಪ ಬದಲಾಗಿದೆ. ಹುಟ್ಟು ಕಥೆಯಲ್ಲಿ ನಿಶಾತ್ ತಂದೆಯಿಂದ ದೂರವಾಗಿದ್ದರೂ ಕೊನೆಯಲ್ಲಿ ತನ್ನ ಮಗಳ ಮೂಲಕ ಆ ಪ್ರೀತಿ ಪಡೆಯುವ ಆಶಾಭಾವನೆ ಹೊಂದಿದ್ದಾಳೆ. ಮಗಳನ್ನು ದೂರ ಮಾಡಿದ್ದ ಅಪ್ಪ ಕರುಳ ಪ್ರೀತಿಯಿಂದ ಮೊಮ್ಮಗಳನ್ನು ಸ್ವೀಕರಿಸುತ್ತಾನೆ. ಆದರೆ ಬಲೆ ಕಥೆಯಲ್ಲಿ ಮಗ-ಸೊಸೆಯರನ್ನು ನಿರಾಕರಿಸಿದ್ದ ತಂದೆ, ಹೆಂಡತಿ ಮತ್ತು ಮಗ ಸತ್ತ ಮೇಲೆ ಸೊಸೆಯ ಆಶ್ರಯದಲ್ಲಿಯೇ ಬದುಕುತ್ತಾನೆ. ಮೊದಲ ಕಥೆ ಸುಖಾಂತವಾದರೆ ಎರಡನೇ ಕಥೆ ದುಃಖಾಂತವಾಗಿದೆ. ಈ ಇಬ್ಬರೂ ಕಥೆಗಾರ್ತಿಯರು ಪ್ರೀತಿಯೇ ಮಾನವ ಕುಲದ ನಿಜವಾದ ಧರ್ಮ ಜಾತಿಯ ತಾರತಮ್ಯ ಅಲ್ಲ. ಆದುದರಿಂದ ಕುಲವೆಂಬುದು ಒಂದೇ, ಅಲ್ಲಿ ಪ್ರೀತಿಯನ್ನು ಸ್ಥಾಪಿಸಿದರೆ ಸಕಲ ಸುಖ, ನೆಮ್ಮದಿ ಇದೆ ಎಂದು ಹೇಳುತ್ತಾರೆ.

ಒಟ್ಟಾರೆಯಾಗಿ ಸ್ತ್ರೀವಾದಿ ಸಾಹಿತ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿ-ಕೊಂಡಿರುವ ಇಬ್ಬರು ಲೇಖಕಿಯರು ಈ ಕಥೆಯಲ್ಲಿ ತಮ್ಮ ಧರ್ಮವನ್ನು ಪುರುಷ ಸಮಾಜ ಬದಲಿಸಿಕೊಂಡು ಸ್ತ್ರೀಯರ ಮೇಲೆ ಹೇರಿರುವ ನಿರ್ಬಂಧ, ಆರೋಪ, ದುಃಸ್ಥಿತಿಗಳನ್ನು ಹೇಳುತ್ತಾರೆ. ಅದರೊಡನೆ ಹೆಣ್ಣಿನ ಕತ್ತಲ ಬಾಳನ್ನು ಬೆಳಕಿನೆಡೆಗೆ ತರುವ ಪ್ರಯತ್ನ ಮಾಡಿದ್ದಾರೆ. ಈ ಕಥೆಗಳಲ್ಲಿ ಇರುವಂತೆಯೇ ಎಲ್ಲಾ ಸಮಾಜದ ಸಂಸಾರಗಳಲ್ಲೂ ಇವೆ ಎಂದಲ್ಲ. ಆದರೆ ಈ ರೀತಿ ಇರುವ ಕೆಲವು ಕುಟುಂಬದ ಜನರ ಸ್ಥಿತಿಯನ್ನು ಸುಧಾರಿಸುವ ಮತ್ತು ಶಿಕ್ಷಿತವಾಗಿರುವ ಮಹಿಳೆಯರು ಈ ಮೂಲಕ ತಮ್ಮ ಜನತೆಯಲ್ಲಿ ಜಾಗೃತಿಯನ್ನು, ಅರಿವನ್ನು ಮೂಡಿಸುವ ಪ್ರಯತ್ನ ಮಾಡಬೇಕಿದೆ.

ಬಾನುಮುಷ್ತಾಕ್‌ರ 'ಕರಿನಾಗರಗಳು', ದೇವರು, ಅಪಘಾತ ಮೊದಲಾದ ಕಥೆಗಳನ್ನು ಓದಿದಾಗ ಕೆಲವು ದಶಕಗಳ ಹಿಂದಿನ ಕಥೆಗಳಂತೆ ಕಂಡುಬರುತ್ತದೆ. ವಾಸ್ತವದಲ್ಲಿ ಮುಸ್ಲಿಂ ಸ್ತ್ರೀಯರ ಸ್ಥಿತಿ ಇಷ್ಟು ಶೋಚನೀಯವಾಗಿಲ್ಲ. ಇಂದು ಅವರಿಗೂ ಶಿಕ್ಷಣ, ಸಮಾಜ, ಆರ್ಥಿಕ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ದೊರೆತಿರುವುದನ್ನು ಕಾಣಬಹುದು. ಇಂದು ಮುಸ್ಲಿಂ ಮಹಿಳೆಯರು ಉನ್ನತ ಶಿಕ್ಷಣದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಕೆಲಸಗಳಿಗೆ ಹೋಗುತ್ತಿದ್ದಾರೆ. ವ್ಯವಹಾರಗಳಲ್ಲಿ ಪಾಲ್ಗೊಂಡಿದ್ದಾರೆ. ಮನೆಯಲ್ಲಿ ಅವಳ ಅಭಿಪ್ರಾಯಗಳಿಗೆ ಸ್ಥಾನಮಾನಗಳಿವೆ.

ಹೀಗೆ ಇಂದಿನ ಪರಿಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣಬಹುದು. ಇಲ್ಲಿನ ಕಥೆಗಳಲ್ಲಿ ಬಾನುಮುಷ್ತಾಕರು ಅನಿಷ್ಟ ಪದ್ಧತಿಗಳನ್ನು ವ್ಯಂಗ್ಯ ಮಾಡುವುದರಲ್ಲಿ ಸಮರ್ಥರಾಗಿದ್ದಾರೆ. ಆದರೂ ಹೆಣ್ಣಿನಲ್ಲಿಯೂ ಇರಬಹುದಾದ ದೌರ್ಬಲ್ಯಗಳನ್ನು ಗುರುತಿಸದೆ ದೋಷಗಳನ್ನೆಲ್ಲಾ ಪುರುಷನ ಮೇಲೆ ಮಾತ್ರ ಹೊರಿಸುವಷ್ಟು ಸ್ತ್ರೀ ಪರವಾದ ನಿಲುವು ಎನಿಸುತ್ತದೆ.

ಬೆಂಕಿಮಳೆ ಮೊದಲಾದ ಕೆಲವು ಕಥೆಗಳಲ್ಲಿ ಸ್ತ್ರೀ–ಪರವಾದ ಪ್ರಶ್ನೆ ಉಚಿತ–ವಾದುದು. ಆದರೂ "ಎಲ್ಲ ಪರಂಪರೆಯನ್ನು ಅಸಹನೆಯಿಂದ, ವೈಚಾರಿಕತೆಯಿಂದ ತಿರಸ್ಕರಿಸುವ ಕಥಾನಕ ಇದೆಯೋ ಅಲ್ಲಿ ಬರವಣಿಗೆ ಆಪ್ತವಾಗುವುದಿಲ್ಲ. ಆ ಅನುಭವಗಳು ನಮ್ಮನ್ನು ರೋಚಕವಾಗಿ ತಟ್ಟಿದರೂ ಒಂದು ಜನಾಂಗದ ಸ್ಮೃತಿ ಪಟಲವೇ ಅಜ್ಞಾನದ ಅಂಧಕಾರದಲ್ಲಿರುವಾಗ ಅದನ್ನು ಕೇವಲ ತಿರಸ್ಕರಿಸುವ ಸಂದರ್ಭದಲ್ಲಿ ನಾವು ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದು ಹೆಚ್ಚು"[೪೦] ಎಂಬ ಡಾ.ಎನ್.ಕೆ.ಕೋದಂಡರಾಮ ಅವರ ಅಭಿಪ್ರಾಯಗಳನ್ನು ಕೆಲವೊಮ್ಮೆ ಬಾನುಮುಷ್ತಾಕರ ಕಥೆಗಳಿಗೆ ಅನ್ವಯಿಸಬಹುದು ಎನಿಸುತ್ತದೆ.

ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ಸ್ತ್ರೀ–ಸಂವೇದನಾ ದೃಷ್ಟಿ ಮತ್ತು ಮುಸ್ಲಿಂ ಸಂವೇದನಾ ದೃಷ್ಟಿಗಳೆರಡು ಜೊತೆಯಲ್ಲಿಯೇ ಮೂಡುತ್ತವೆ. ಇದುವರೆಗೆ ಕತ್ತಲೆಯಲ್ಲಿದ್ದು ಹೆಣ್ಣಿನ ಬದುಕು ಮತ್ತು ಒಂದು ಜನಾಂಗದ ಬುದಕಿನ ಚಿತ್ರಣಗೊಂಡಿದೆ.

ಹೀಗೆ ಇವರು ಮುಸ್ಲಿಂ ಹಿನ್ನಲೆಯಿಂದ ಬಂದಿರುವ ಲೇಖಕಿಯರಾದರೂ ಇಬ್ಬರು ಕನ್ನಡದಲ್ಲಿ ನಿರರ್ಗಳವಾಗಿ ಬರೆಯಬಲ್ಲ ಮತ್ತು ಮಾತನಾಡಬಲ್ಲವರು. ಲಂಕೇಶ್ ಪತ್ರಿಕೆಯಲ್ಲಿ ಒಟ್ಟಿಗೆ ಹಲವು ಕಥೆಗಳನ್ನು ಪ್ರಕಟಿಸಿದರು. ಒಂದರ್ಥದಲ್ಲಿ ಲಂಕೇಶ್ ಅವರು ಈ ಇಬ್ಬರು ಲೇಖಕಿಯರ ಬೆಳವಣಿಗೆಗೆ ಆ ಮೂಲಕ ಸ್ತ್ರೀ–ಸಮುದಾಯಕ್ಕೆ ಬೆಂಬಲವಿತ್ತಿದ್ದಾರೆ.

---

೪೦. ಎನ್.ಕೆ.ಕೋದಂಡರಾಮ, ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಪು. ೪೬೮.

ಸಾರಾರವರು ತಮ್ಮ ಪ್ರತಿಭಟನೆಯನ್ನು ತಣ್ಣಗಿನ ಧ್ವನಿಯಲ್ಲಿ ಪಾತ್ರಗಳ ಮೂಲಕ ಹೇಳಿಸುತ್ತಾರೆ. ಆದರೆ ಬಾನುಮುಷ್ತಾಕ್‌ರದು ಪೂರ್ಣವಾಗಿ ಸ್ತ್ರೀಪರವಾದ ನಿಲುವು. ಅವರು ಪುರುಷನ ದೌರ್ಜನ್ಯಗಳನ್ನು ಗಂಭೀರವಾಗಿ, ತೀವ್ರವಾಗಿ ವಿರೋಧಿಸುತ್ತಾರೆ. ಇದಕ್ಕೆ ಅವರು ಅನುಭವಿಸಿದ ನೋವು ಕಾರಣವಿರಬಹುದು. ಆದರೆ ಈಗಿನ ಸ್ತ್ರೀವಾದಿ ಧೋರಣೆಯಲ್ಲಿ ಮಾನ್ಯತೆಗಾಗಿ ಧ್ವನಿ ಎತ್ತುತ್ತಲೆ ಯಶಸ್ಸನ್ನು ಸಾಧಿಸುವ ಹೊಸ ದಾರಿಯನ್ನು ಕಾಣುವ ಮುಖ್ಯ ಉದ್ದೇಶವನ್ನು ಕರ್ನಾಟಕದ ಮಹಿಳಾ ಸಾಹಿತಿಗಳು ಹೊಂದಿದ್ದಾರೆ. ಈ ಇಬ್ಬರು ಲೇಖಕಿಯರು ತಮ್ಮ ಜನಾಂಗದ ಅನಿಷ್ಟ ಪದ್ಧತಿಗಳನ್ನು ಸಮರ್ಥವಾಗಿ ಪ್ರಶ್ನಿಸುತ್ತಾರೆ.

ಇಸ್ಲಾಂ ಧರ್ಮದಲ್ಲಿ ಮಹಿಳೆಯರ ಸ್ಥಾನಮಾನ:

ಭಾರತೀಯ ಸಮಾಜ, ಸಂಸ್ಕೃತಿ ಮತ್ತು ಮಹಿಳೆ ಎನ್ನುವಾಗ ಭಾರತದಲ್ಲಿ ಎಷ್ಟೊಂದು ಸಮಾಜಗಳು ಭಿನ್ನ ಭಿನ್ನ ಸಂಸ್ಕೃತಿಗಳಿವೆ ಎಂಬುದರ ಕುರಿತು ಮೊದಲು ಯೋಚಿಸಬೇಕಾಗುತ್ತದೆ. ಈ ಎಲ್ಲ ಸಮಾಜಗಳ ಮಹಿಳೆಯರ ಸ್ಥಿತಿಗತಿಗಳ ಮೇಲೆ ಸಮನಾಗಿ ಬೆಳಕು ಚೆಲ್ಲುವ ಕಾರ್ಯ ನಡೆದಿದೆಯೇ ಎಂದು ಯೋಚಿಸಿದಾಗ ತೀರಾ ನಿರಾಶದಾಯಕವಾದ ಉತ್ತರ ನಮಗೆ ದೊರೆಕಿತು. "ಭಾರತೀಯ ಸಮಾಜದಲ್ಲಿ ದೇವಾಲಯಗಳಲ್ಲಿ ಹೆಣ್ಣು ಕಲ್ಲಿನ ಮೂರ್ತಿಯಾಗಿ, ದೇವತೆಯಾಗಿ, ಮಾತೆಯಾಗಿ ಪೂಜಿಸಲ್ಪಡುತ್ತಾಳೆ. ದುರ್ಗ-ಕಾಳಿ, ಚಂಡಿ ಮುಂತಾದ ದೇವತೆಗಳಿಗೆ ವಿಶಿಷ್ಟ ಸ್ಥಾನಗಳಿವೆ. ಗಂಡು ದೇವರ ಬಳಿ ಹೆಂಡತಿಯು ಪ್ರತಿಷ್ಠಾಪಿಸಲ್ಪಟ್ಟಾಗ ಗಂಡು ದೇವರುಗಳು ಹೆಚ್ಚು ಮನ್ನಣೆ ಪಡೆಯುತ್ತಾರೆ. ಆದರೆ ಹೆಣ್ಣು ದೇವತೆಗಳು ಗಂಡನಿಲ್ಲದೆ ಸ್ವಯಂ ಪ್ರತಿಭೆಯಿಂದಲೇ ಮಿಂಚುತ್ತಾಳೆ. ಅಮ್ಮನವರಿಗೂ ಪೂಜೆ ಸಲ್ಲುವುದು ಸರ್ವೆ ಸಾಮಾನ್ಯ"[೪೧] ಎಂದು ಕೆ.ಆರ್.ಕೃಷ್ಣಮೂರ್ತಿಯವರು ತಮ್ಮದೊಂದು ಕೃತಿಯಲ್ಲಿ ನಿರೂಪಿಸಿದ್ದಾರೆ.

ಅದೇ ಹೆಣ್ಣು ಜೀವಂತವಾಗಿ ಮೈತಳೆದು ಬಂದಾಗ ಮಾತ್ರ ಈ ದೇವಿ ದೇವತೆಗಳೆಂಬ ಕಲ್ಪನೆ ಮಾಯವಾಗುತ್ತದೆ. ಆಗ ಆಕೆ ಮೂರನೇ ದರ್ಜೆಯ ಪ್ರಜೆಯಾಗಿ ಕಾಮದ ವಸ್ತುವಾಗಿ, ಹೇರುವ ಯಂತ್ರವಾಗಿ ನಾಲ್ಕು ಗೋಡೆಗಳೊಳಗೆ ಬಂಧಿಯಾಗಿ ಆರ್ಥಿಕ ಪರವಾಲಂಬನೆಯಿಂದಾಗಿ ದಾಸ್ಯ ಮನೋಭಾವವನ್ನು ಮೈಗೂಡಿಸಿಕೊಂಡು ಅಬಲೆಯೆಂದು ವರ್ಣಿಸಲ್ಪಟ್ಟಿದ್ದಾಳೆ ಹೊರತು ಸ್ವತಂತ್ರ ವ್ಯಕ್ತಿತ್ವ. ಸ್ವತಂತ್ರ ಆಸೆ, ಆಕಾಂಕ್ಷೆ ಗಳಿರುವ, ಕೌಟುಂಬಿಕ ಬದುಕಿನಲ್ಲಿ ತಮ್ಮಷ್ಟೆ ಪ್ರಾಮುಖ್ಯತೆಯಿರುವ ಮನುಷ್ಯಳೆಂದು ಗೌರವಿಸಲ್ಪಟ್ಟ ಸಂದರ್ಭ ಅಪರೂಪವೆಂದೇ ಹೇಳಬಹುದು.

---

೪೧. ಸಾರಾ ಅಬೂಬಕ್ಕರ್, ಅನಾವರಣ, ಪು. ೧.

ವೇದಕಾಲದಿಂದಲೂ ಮಹಿಳೆಯುರು ಒಂದಲ್ಲ ಒಂದು ವಿಧದ ದೌರ್ಜನ್ಯಕ್ಕೆ ತುತ್ತಾಗಿದ್ದಾರೆ ಎಂಬುದಕ್ಕೆ ಸೀತೆ–ದ್ರೌಪದಿಯರ ಕತೆಗಳೇ ಸಾಕ್ಷಿ. ಸೀತೆ ರಾವಣನ ಬಂಧನದಲ್ಲಿದ್ದು ಬಿಡುಗಡೆಗೊಂಡಾಗ ಆಕೆ ಇನ್ನು ಪರಿಶುದ್ಧಳಾಗಿಯೇ ಇದ್ದಾಳೆಯೇ ಎಂದು ತಿಳಿಯಲು ಆಕೆಯನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಲಾಯಿತು. ಅಂದರೆ ಹೆಣ್ಣಿನ ಶೀಲ ಮತ್ತು ಪಾವಿತ್ರ್ಯತೆ ಎಂಬುದು ಪ್ರಾಣಕ್ಕಿಂತಲೂ ಮಿಗಿಲಾದುದು ಎಂಬ ಕಲ್ಪನೆಯನ್ನು ರಾಮಾಯಣ ಕೃತಿ ರಚನೆಯಾದಂದಿನಿಂದಲೂ ಜನಮನದಲ್ಲಿ ಬೇರೂರಿಸ–ಲಾಯಿತು. ಬಲಾತ್ಕಾರದಿಂದ ಮಹಿಳೆಯೋರ್ವಳ ಮಾನ ಭಂಗವಾಗಿದ್ದರೂ ಅದು ಬಹಿರಂಗಗೊಂಡರೆ ಆಕೆ ಜಾತಿ ಭ್ರಷ್ಟಳಾಗಬೇಕಾಗುತ್ತದೆ! ಆಕೆ ಅವಿವಾಹಿತೆ ಹೆಣ್ಣಾಗಿದ್ದರೆ ಮುಂದೆ ಆಕೆಯ ಮದುವೆ ಕನಸಿನ ಮಾತೇ ಸರಿ. ವಿವಾಹಿತೆಯೋರ್ವಳು ಅತ್ಯಾಚಾರಕ್ಕೆ ಗುರಿಯಾದರೆ ಆಕೆ ಪತಿಯ ಮನೆಯಿಂದ ಹೊರದೂಡಲ್ಪಡುತ್ತಾಳೆ. ಇಂತಹ ಪ್ರಸಂಗಗಳಲ್ಲಿ ದೊಡ್ಡ ಮನಸ್ಸಿನಿಂದ ಆಕೆಯನ್ನು ಕ್ಷಮಿಸಬಲ್ಲ ಗಂಡಂದಿರು ಭಾರತೀಯ ಸಮಾಜಗಳಲ್ಲಿ ದೊರೆಯುವುದು ದುರ್ಲಬವೆಂದೇ ಹೇಳಬಹುದು. ಆ ಮಹಿಳೆ ಮಾತ್ರ ನಾಯಿಮುಟ್ಟಿದ ಮಡಕೆಯಾಗುತ್ತಾಳೆಯೇ ಹೊರತು ಅತ್ಯಾಚಾರವೆಸತಿದ ಪುರುಷನಿಗೆ ಯಾವ ಕಳಂಕವು ತಟ್ಟುವುದಿಲ್ಲ. ಹೆಣ್ಣು ತನ್ನ ಮೇಲಾದ ಈ ದೌರ್ಜನ್ಯವನ್ನು ಬಹಿರಂಗಗೊಳಿಸದೆ ಮುಚ್ಚಿಡುತ್ತಾಳೆ. ಇಂತಹ ಸಂದರ್ಭಗಳಲ್ಲಿ ಅಪರೂಪಕ್ಕೆ ಮಹಿಳೆಯರು ನ್ಯಾಯಾಲಯಕ್ಕೆ ಹೋದರೂ ಅಲ್ಲಿ ಅಪರಾಧಿಪರ ವಕೀಲರು ಕೇಳುವ ಅಸಹ್ಯವಾದ ಅಶ್ಲೀಲವಾದ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ತಲೆತಗ್ಗಿಸಿ ನಿಂತಾಗ ಅತ್ಯಾಚಾರವಾಗಿಯೇ ಇಲ್ಲ ಎಂಬುದನ್ನು ಅಪರಾಧಿಪರ ವಕೀಲರು ಸಾಬೀತುಪಡಿಸುತ್ತಾರೆ. ಕೊನೆಗೂ ಮಹಿಳೆಯರು ನ್ಯಾಯಾಲಯದಿಂದ ವಂಚಿಸಲ್ಪಡುತ್ತಾಳೆ. ಹೀಗಾಗಿಯೇ ಅಪರಾಧವೆಸಗಿದ ಪುರುಷರು ಶಿಕ್ಷೆಗೆ ಒಳಪಡದೆ ಹಾಯಾಗಿ ತಿರುಗುತ್ತಿದ್ದು ಮತ್ತಷ್ಟು ದೌರ್ಜನ್ಯಗಳನ್ನು ಮಾಡತೊಡಗುತ್ತಾರೆ.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆ ಎಂದಿಗೂ ಸ್ವತಂತ್ರಳಲ್ಲ 'ನಸ್ತ್ರೀ ಸ್ವತಂತ್ರ್ಯಮರ್ಹತಿ' ಎಂದು ಪುರುಷ ಪ್ರಧಾನ ಸಮಾಜವು ಹೆಣ್ಣಿಗೆ ಸ್ವತಂತ್ರ ನಿರಾಕರಿಸಲಾಗಿದೆ.ಹೆಣ್ಣು ವಿದ್ಯಾಭ್ಯಾಸ ಪಡೆಯಬಾರದೆಂದು ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಹುಟ್ಟಿದ ಮನೆ ಎಂದಿಗೂ ಆಕೆಗೆ ತನ್ನ ಮನೆ ಎನ್ನಿಸದಂತೆ ಮನೆಯಲ್ಲಿ ವಾತಾವರಣ ಸೃಷ್ಟಿಸುತ್ತಾರೆ. ಹೆಣ್ಣುಮಗಳು ಎಂದಿದ್ದರೂ ಪರರ ಮನೆಗೆ–ಹೋಗುವವಳೂ. ಪರರ ಸ್ವತ್ತು ಎನ್ನುತ್ತ ಹುಟ್ಟಿದಂದಿನಿಂದಲೂ ಗಂಡನ ಮನೆಯಲ್ಲಿ ಹೇಗೆ ಬದುಕಿ ಬಾಳಬೇಕೆಂಬುದನ್ನು ಕುರಿತು ಬುದ್ಧಿವಾದವನ್ನೇ ಆಕೆಗೆ ಅರೆದು ಕುಡಿಸಲಾಗುತ್ತದೆ. "ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನೂ ನಿಮ್ಮ

ಮಡಿಲೊಳಗಿಡಲು ತಂದಿರುವೆವು"[೪೨] ಎಂಬ ಈ ಸಾಲಿನ ಹಾಡುಗಳು ನೆನಪಾದೊಡನೆ ನಮ್ಮ ಮಳೆಯಂಗಳದ ಮೊಗ್ಗುಪೂರ್ಣ ಬಿರಿಯುವ ಮೊದಲೇ ಇನ್ನೊಬ್ಬರ ಮಡಿಲಿಗೆ ಎಸೆಯಲ್ಪಡುವಂತಹ ಈ ಸಾಮಾಜಿಕ ವ್ಯವಸ್ಥೆ ಹೇಗೆ ಪ್ರಾರಂಭವಾಯಿತು ಎಂಬ ಪ್ರಶ್ನೆಯು ನಮಗೆದುರಾಗುತ್ತದೆ.

ಭಾರತೀಯ ಸಂಸ್ಕೃತಿ ಎಂದರೇನೆ ಮಹಿಳೆಯರ ಮೇಲೆ ಹಲವು ವಿಧದ ನಿಯಂತ್ರಣ ಹೇರುವುದೇ ಆಗಿದೆ. ಮೈನೆರೆಯುವ ಮೊದಲೇ ಹೆಣ್ಣುಮಕ್ಕಳಿಗೆ ಮದುವೆ ಮಾಡಬೇಕೆಂಬ ನಿಯಮದಂತೆ ಇಂದಿಗೂ ಬಾಲ್ಯವಿವಾಹ ಪದ್ಧತಿ ದೇಶದ ಹಲವೆಡೆಗಳಲ್ಲಿ ಜಾರಿಯಲ್ಲಿದೆ. ಸತಿ–ಸಹಗಮನದ ಹೆಸರಿನಲ್ಲಿ ಗಂಡ ಸತ್ತರೆ ಹೆಂಡತಿಯನ್ನು ಗಂಡನ ಚಿತೆಗೆ ತಳ್ಳಿ ಆಕೆಯ ಕೊಲೆ ಮಾಡುವಂತಹ ಕ್ರೂರ ಪದ್ಧತಿಯು ಈ ಸಮಾಜದಲ್ಲಿ ಜಾರಿಯಲ್ಲಿದ್ದಿತು. ಹಲವು ಮಹಾನ್ ವ್ಯಕ್ತಿಗಳ ಹೋರಾಟದಿಂದ ಅದು ನಿಂತುಹೋಗಿದ್ದರೂ ಹೀಗೆ ನಾವು ೨೨ನೇ ಶತಮಾನದ ಹೊಸ್ತಿಲಲ್ಲಿ ನಿಂತಿರುವ ಈ ಸಂದರ್ಭದಲ್ಲಿ ಕೂಡ ಈ ಪದ್ಧತಿಗೆ ಪುನಃ ಜೀವದಾನ ಮಾಡುವ ಪ್ರಯತ್ನವು ಕಾಣಬಹುದು.

ಹೆಣ್ಣಿಗೆ ಸತಿ–ಸಹಗಮನದಿಂದ ಮುಕ್ತಿ ದೊರೆತರೂ ವಿಧವಾ ಪಟ್ಟದಿಂದ ಮುಕ್ತಿ ದೊರೆತಿಲ್ಲ. ಗಂಡ ಸತ್ತೊಡನೆ ಆಕೆ ಎಲ್ಲ ಸುಖ–ಸಂತೋಷಗಳನ್ನು ಕೈಬಿಡಬೇಕಾಗುತ್ತದೆ. ವಿಧವೆಯರು ಇಂದಿಗೂ ಅಪಶಕುನದ ಆಗರ ಎಂಬ ಕಲ್ಪನೆ ಭಾರತೀಯ ಸಮಾಜಗಳಲ್ಲಿ ಬೇರೂರಿ ನಿಂತಿದೆ. ಆಕೆಗೆ ಬಂಜೆಯರ ಮುಖದರ್ಶನ ಕೂಡ ಅಮಂಗಲದ ಅಪಶಕುನದ ದ್ಯೋತಕವೆಂದೇ ಪರಿಗಣಿಸಲಾಗುತ್ತದೆ. "ಗರ್ಭಿಣಿಯರ ಬಯಕೆಶಾಸ್ತ್ರ, ಮಗುವಿನ ತೊಟ್ಟಿಲುಶಾಸ್ತ್ರ ಮುಂತಾದ ಸಮಾರಂಭಗಳಲ್ಲಿ ಬಂಜೆಯರಿಗೆ ಆಹ್ವಾನವಿಲ್ಲ. ಗಂಡಿಗೂ ಬಂಜೆತನವಿದೆ"[೪೩] ಎಂಬುದು ಇನ್ನು ಕೂಡ ಸಮಾಜದ ಅರಿವಿಗೆ ಬಂದಿಲ್ಲ.

ಪ್ರಕೃತಿ ನಿಯಮವನ್ನು ಹೆಣ್ಣಿನ ಶೋಷಣೆಗೆ ಬಳಸಿಕೊಂಡ ಸಂಸ್ಕೃತಿ ನಮ್ಮದು. ಮುಟ್ಟಿನ ೩ ದಿನಗಳು ಆಕೆ ಅಸ್ಪೃಶ್ಯಳು. ಹೆಣ್ಣು ಶಿಶುಹತ್ಯೆ ಕೂಡ ಇಂದು ನೆನ್ನೆಯ ವಿಷಯವಲ್ಲ. ನವಜಾತ ಹೆಣ್ಣು ಶಿಶುಗಳನ್ನು ಕೊಲೆಮಾಡುವ ಕ್ರೂರ ಸಂಪ್ರದಾಯ ನಮ್ಮ ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ರಾಜಸ್ತಾನದ ಕೆಲವು ಹಳ್ಳಿಗಳಲ್ಲಿ ಇಂದಿಗೂ ಜೀವಂತವಾಗಿದೆ. ಹಾಗೆಯೇ ಮುಸ್ಲಿಂ ಸಂಸ್ಕೃತಿಯಲ್ಲಿ ಕೂಡ ಇಂತಹ ಸಂಪ್ರದಾಯವನ್ನು ಇಂದಿಗೂ ಕಾಣುತ್ತೇವೆ. ಹೈದರಾಬಾದಿನ ನಿಜಾಮರು ಮುಸ್ಲಿಂ ಪುರುಷರ ಬಹುಪತ್ನಿತ್ವ ವನ್ನು ಪ್ರೋತ್ಸಾಹಿಸುತ್ತಿದ್ದರು. ಓರ್ವನಿಗೆ ಹೆಚ್ಚು ಜನ ಹೆಂಡತಿಯರಿದ್ದರೆ ಪತ್ನಿಯರ

---

೪೨. ಅನಾವರಣ ಸಾರಾಅಬೂಬಕ್ಕರ್ (ಭಾರತೀಯ ಸಮಾಜ, ಸಂಸ್ಕೃತಿ, ಮಹಿಳೆ/ಲೇಖನ), ಪು. ೩

೪೩. ಸಾರಾ ಅಬೂಬಕ್ಕರ್, ಅನಾವರಣ, ಪು. ೭.

ಸಂಖ್ಯೆಯನ್ನನುಸರಿಸಿ ಭತ್ಯೆ ನೀಡುತ್ತಿದ್ದರು. ಮುಸ್ಲಿಮರ ಬಹುಪತ್ನಿತ್ವವನ್ನು 'ದಲಿತ್ ವಾಯ್ಸ್' ಎಂಬ ಪತ್ರಿಕೆ ಈ ರೀತಿ ವರ್ಣಿಸಿದೆ. "ಮುಸ್ಲಿಮರಿಗೆ ತಮ್ಮ ಹೊಲದಲ್ಲಿ ಕೆಲಸಮಾಡಲು ಕೂಲಿಯಾಳುಗಳ ಅವಶ್ಯಕತೆಯಿದೆ. ಕೆಲಸಕ್ಕೆ ಆಳುಗಳನ್ನು ಇಟ್ಟುಕೊಂಡರೆ ಅವರಿಗೆ ಸಂಬಳ ಕೊಡಬೇಕಾಗುತ್ತದೆ. ಹೆಂಡತಿಯರೇ ಆದರೆ ಅವರು ಬಿಟ್ಟಿಯಾಗಿ ದುಡಿಯುತ್ತಾರೆ. ಹೀಗಾಗಿ ಅವರು ೪ ಜನ ಪತ್ನಿಯನ್ನು ಇಟ್ಟುಕೊಂಡರೆ ತಪ್ಪೇನು?"[೪೪] ಎಂಬ ವಾದ ಈ ಪತ್ರಿಕೆಯದು. ಇಸ್ಲಾಂ ಧರ್ಮದಲ್ಲಿ ಬಹುಪತ್ನಿತ್ವಕ್ಕೆ ಬೇರೆಯೇ ವ್ಯಾಖ್ಯಾನವಿದೆ. ಹಾಗಾಗಿ ಯುದ್ಧಗಳಾಗಿ ಬಹಳ ಪುರುಷರು ಮರಣ–ಹೊಂದಿ ವಿಧವೆಯರು ಅವರ ಅನಾಥ ಮಕ್ಕಳು ನಿರ್ಗತಿಕರಾದಾಗ ಈ ಮಕ್ಕಳ ಪೋಷಣೆಗಾಗಿ ಆ ವಿಧವೆಯನ್ನು ವಿವಾಹವಾಗಲು ಪೈಗಂಬರರು ತಮ್ಮ ಅನುಯಾಯಿಗಳಿಗೆ ಬೋಧಿಸಿದರು ಎಂದು ಹೇಳಲಾಗಿದೆ.

ಇಂತಹ ನಿಯಮಗಳೆಲ್ಲವೂ ಸಮಯ ಸಾಧಕರ ಕೈಯಲ್ಲಿ ದೊರೆತಾಗ ಅದು ಯಾವ ರೀತಿ ತಿರುಚಲ್ಪಟ್ಟು ಮಹಿಳೆಯರ ಶೋಷಣೆಗೆ ಹಾದಿ ಮಾಡಿಕೊಡುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ. ಭಾರತದ ಸಮಾಜ ವ್ಯವಸ್ಥೆಯಲ್ಲಿ ಎಲ್ಲಾ ಧರ್ಮಗಳಲ್ಲಿಯೂ ಕೌಟುಂಬಿಕ ನಿರ್ಧಾರಗಳೆಲ್ಲವೂ ಪುರುಷರದ್ದೇ ಆಗಿರುತ್ತದೆ. ಆಸ್ತಿ ಮಾರಾಟದ ವಿಷಯದಲ್ಲಾಗಲೀ, ಮಕ್ಕಳ ಮದುವೆಯ ವಿಷಯದಲ್ಲಿ, ಹೆಂಡತಿಯೊಡನೆ ಸಮಾಲೋಚಿಸುವ ಪುರುಷರು ಅಪರೂಪವೆಂದೇ ಹೇಳಬಹುದು. ಅಷ್ಟೇ ಏಕೆ ಕುಟುಂಬಯೋಜನೆಯ ಶಸ್ತ್ರ ಚಿಕಿತ್ಸೆಯನ್ನಾದರೂ ಗಂಡನ ಅನುಮತಿಯಿಲ್ಲದೆ ಮಾಡಲು ಮುಂದಾಗುವುದಿಲ್ಲ. ಮುಸ್ಲಿಂ ಮಹಿಳೆಯೋರ್ವಳು ಎಂಟನೇ ಹೆರಿಗೆಯಲ್ಲಿ ಬಹಳಷ್ಟು ರಕ್ತಸ್ರಾವವಾಗಿ ಡಾಕ್ಟರರ ಸಲಹೆಯಂತೆ ಗಂಡನ ಅನುಪಸ್ಥಿತಿಯಲ್ಲಿ ಗರ್ಭನಿರೋಧಕ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡದ್ದಕ್ಕಾಗಿ ಆಕೆಯ ಗಂಡ ಮತ್ತು ಅತ್ತೆ. ಆಕೆಗೂ ಛೀಮಾರಿ ಹಾಕಿ ತಲಾಖ್ ನೀಡಿದ ಘಟನೆ ಕೆಲವು ವರ್ಷಗಳ ಹಿಂದೆ ರಾಯಚೂರಿನಲ್ಲಿ ನಡೆಯಿತು.

ವರದಕ್ಷಿಣೆ ಎಂಬ ದುಷ್ಟಪದ್ಧತಿಯು ಯಾರಿಂದ ಪ್ರಾರಂಭವಾಯಿತು ಎಂಬ ಪ್ರಶ್ನೆಗಳಿಗೆಲ್ಲ ಉತ್ತರ ದೊರೆಯಲಾರವು. ಆದರೆ ಇಂದು ಈ ದುಷ್ಟಪದ್ಧತಿಯು ಹಿಂದೂ–ಮುಸ್ಲಿಂ, ಕ್ರೈಸ್ತ ಎಂಬ ಬೇಧವಿಲ್ಲದೆ. ಎಲ್ಲಾ ಸಮಾಜದ ಹೆಣ್ಣುಮಕ್ಕಳಲ್ಲಿ ಪೆಡಂಭೂತವಾಗಿ ನುಂಗಹೊರಟಿದೆ. ಗಂಡು ಮಕ್ಕಳಿಗೆ ಹೆಣ್ಣುತರುವಾಗ ಆಕೆಯ ತಂದೆತಾಯಿಂದ ಎಷ್ಟು ಸಾಧ್ಯವೋ ಅಷ್ಟು ಸುಲಿಗೆ ಮಾಡುತ್ತಾರೆ. ಈ ಪದ್ಧತಿ ಹೇಗೆ ಪ್ರಾರಂಭವಾಯಿತೂ ತಿಳಿಯದು. ಬಹುಶಃ ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ತಂದೆತಾಯಿಗಳ ಆಸ್ತಿಯಲ್ಲಿ ಪಾಲಿರಲಿಲ್ಲವಾದ ಕಾರಣ ತಂದೆ–ತಾಯಿಗಳಿಂದ ತಮ್ಮ

೪೪. ಅನಾವರಣ, ಸಾರಾಅಬೂಬಕ್ಕರ್, ಪು. ೭

ಹೆಣ್ಣು ಮಕ್ಕಳಿಗೆ ಅಷ್ಟಾದರೂ ದಕ್ಕಲಿ ಎಂದು ಯಾರಾದರೂ ಈ ಪದ್ಧತಿಯನ್ನು ಪ್ರಾರಂಭಿಸಿರಬಹುದು.

ಆದರೆ ಇಸ್ಲಾಂ ಧರ್ಮದಲ್ಲಿ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಗಂಡುಮಕ್ಕಳ ಅರ್ಧಪಾಲಿದೆ. ಈ ಧರ್ಮದಲ್ಲಿ ವರದಕ್ಷಿಣೆ ಎಂಬ ಪದವೇ ಇಲ್ಲ. ಅಲ್ಲಿರುವುದು ಗಂಡು–ಹೆಣ್ಣಿಗೆ ಕೊಡಬೇಕಾಗಿರುವ ಕನ್ಯಾ ಶುಲ್ಕ (ಮೆಹರ್) ಮಾತ್ರ. ಇದನ್ನು ಹೆಣ್ಣಿಗೆ ನೀಡದೆ ಆಕೆಯ ಮೈ ಮುಟ್ಟಬಾರದು ಎಂಬುದು 'ಖುರಾನ್' ನ ವಾಕ್ಯ ವಿವಾಹವಾದಂದಿನಿಂದಲೂ ಆಕೆಯ ಎಲ್ಲಾ ಖರ್ಚುವೆಚ್ಚಗಳನ್ನು ಆ ಗಂಡನೇ ವಹಿಸಬೇಕೆಂದು ಮೊಹಮ್ಮದ್ ಪೈಗಂಬರರು ಬೋಧಿಸಿದ್ದಾರೆ. ಆದರೆ ಪುರುಷರಿಗೆ ಲಾಭವಾಗುವಂತಹ ಪದ್ಧತಿಗಳಿದ್ದರೆ ಆಗ ಖುರಾನ್ ವಾಕ್ಯಗಳೆಲ್ಲ ಗೌಣವಾಗುತ್ತವೆ. ಹಿಂದೂಗಳಲ್ಲಿರುವ ಈ ವರದಕ್ಷಿಣೆಯ ಪದ್ಧತಿಯನ್ನು ಸುಲಭವಾಗಿ ತಮ್ಮ ಸಮಾಜ–ಗಳಲ್ಲೂ ಅಳವಡಿಸಿಕೊಂಡರು ಇಲ್ಲಿನ ಮುಸ್ಲಿಮರು.

ಮುಸ್ಲಿಮರಲ್ಲಿ ಇನ್ನೂ ಸುಲಭದ ಪದ್ಧತಿ ಇದೆ. ವರದಕ್ಷಿಣೆ ತರದ ಹೆಣ್ಣನ್ನು ತವರು ಮನೆಗಟ್ಟಿ ಮೂರು ಬಾರಿ "ತಲಾಖ್" ಎಂದು ಬಿಟ್ಟರೆ ಆ ಗಂಡ–ಹೆಂಡಿರ ಸಂಬಂಧ ಕೊನೆಗೊಂಡಂತೆ. ಆತನಿಗೆ ಮರುದಿನವೇ ಬೇರೊಬ್ಬಳೊಡನೆ ಮದುವೆ. ವಿವಾಹ ವಿಚ್ಛೇದನದ ಹಕ್ಕು ಸ್ತ್ರೀಯರಿಗೂ ಇದೆ ಎಂದು ಮುಸ್ಲಿಂ ಪುರುಷರು ವಾದಿಸುತ್ತಾರೆ. ಪುರುಷನು ತನ್ನ ಸ್ವಂತ ಇಚ್ಛೆಯಿಂದಲೂ ಅಥವಾ ಇನ್ಯಾರ ಮಾತನ್ನಾದರೂ ಕೇಳಿಕೊಂಡೂ ಮೂರು ಬಾರಿ ತಲಾಖ್ ಎಂದು ಬಿಟ್ಟು ತನ್ನ ಪತ್ನಿಯನ್ನು ಬೀದಿಗಟ್ಟಬಹುದು. ಅದಕ್ಕೆ ಕಾರಣವನ್ನೇನೂ ಕೊಡಬೇಕಾಗಿಲ್ಲ. ಆದರೆ ಓರ್ವ ಸ್ತ್ರೀ ತನ್ನ ಪತಿಯಿಂದ ವಿಚ್ಛೇದನ ಪಡೆಯಬೇಕಾದರೂ ಸಮಾನದ ಕಾರಣ ಕೊಟ್ಟು ನ್ಯಾಯಾಲಯದ ಕಟ್ಟೆ ಹತ್ತಬೇಕು. ಆ ಕಾರಣಗಳಾವುವೆಂದರೆ ತನ್ನ ಪತಿಯೂ ತನಗೆ ಕ್ರೂರವಾದ ದೈಹಿಕ ಹಿಂಸೆ ನೀಡುತ್ತಾನೆಂದು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕು ಅಥವಾ ಆತನು ನಪುಂಸಕನಾಗಿರಬೇಕು ಅಥವಾ ಆತನು ಕುಷ್ಠರೋಗಿಯಾಗಿರಬೇಕು ಅಥವಾ ಎರಡೂ ಮೂರು ವರ್ಷಗಳವರೆಗೆ ಆತನಿಂದ ಯಾವುದೇ ಸಮಾಚಾರವಿಲ್ಲದೆ ಆತನಿಂದ ಜೀವನೋಪಾಯಕ್ಕೆ ಏನೂ ದೊರೆಯದಿದ್ದರೆ ಅಂತಹ ಸಂದರ್ಭದಲ್ಲಿ ಮಾತ್ರ ಆಕೆ ಪತಿಯಿಂದ ವಿಚ್ಛೇದನ ಪಡೆಯಬಹುದು.

ಇನ್ನೂ ಆಸ್ತಿಯ ಹಕ್ಕಿನಲ್ಲಿ ಸ್ತ್ರೀಯೂ ಯಾವ ರೀತಿ ವಂಚಿಸಲ್ಪಡುತ್ತಾಳೆ ಎಂಬುದನ್ನು ನಾವು ಇಲ್ಲಿ ನೋಡಬಹುದು. ಗಂಡ ಸತ್ತಾಗ ಆತನ ಆಸ್ತಿಯಲ್ಲಿ ಕೇವಲ ಎಂಟನೇ ಒಂದು ಭಾಗ ಮಾತ್ರ ಹೆಂಡತಿಗೆ ದೊರಕಿದರೆ, ಹೆಂಡತಿ ಸತ್ತಾಗ ಆಕೆಯ ಆಸ್ತಿಯ ನಾಲ್ಕನೇ ಒಂದು ಭಾಗಕ್ಕೆ ಆತನು ಒಡೆಯನಾಗುತ್ತಾನೆ. ಮುಸ್ಲಿಮ್ ಹೆಣ್ಣು ಹೊರಹೋಗಿ ಸಂಪಾದಿಸಲಾರಳು. ವಿಧವಾ ವಿವಾಹ ಧರ್ಮ ಸಮ್ಮತವಾದರೂ

ಮಕ್ಕಳಿರುವಾಕೆಯನ್ನು ಇನ್ನೋರ್ವನು ವಿವಾಹವಾಗುವುದು ಅಪರೂಪವಾಗಿರುವಾಗ ಆಕೆಗೆ ಆಸ್ತಿಯಲ್ಲಿ ಚಿಕ್ಕ ಭಾಗ, ಹೊರಹೋಗಿ ಸಂಪಾದಿಸಬಲ್ಲ ಪುರುಷನಿಗೆ ಆಸ್ತಿಯಲ್ಲಿ ದೊಡ್ಡ ಭಾಗ. ಎಂಬತ್ತು ವರ್ಷದ ಮುದುಕನಾಗಿ, ಮಕ್ಕಳ ತಂದೆಯಾದರೂ ಪತ್ನಿ ಸತ್ತೊಡನೆ ಆತನು ಇನ್ನೋರ್ವಳನ್ನು ವಿವಾಹವಾಗಿ ಹೊಸ ಮಕ್ಕಳನ್ನು ಹುಟ್ಟಿಸ–ತೊಡಗುತ್ತಾನೆ. ಆದರೆ ಹೆಣ್ಣು ಈ ಅವಕಾಶದಿಂದ ವಂಚಿತಳಾಗಿದ್ದಾಳೆ.

ಇತಿಹಾಸದುದ್ದಕ್ಕೂ ಮಹಿಳೆಯರ ಸ್ಥಾನಮಾನ ಅನೇಕ ಏಳುಬೀಳುಗಳಿಂದ ಕೂಡಿದೆ. ಮುಸ್ಲಿಂ ಸಂಪ್ರದಾಯದಲ್ಲಿ ಹೆಣ್ಣಿಗೆ ಅಷ್ಟೊಂದು ಸ್ವಾತಂತ್ರ್ಯವಿಲ್ಲ. ಆಕೆಯನ್ನು ಶಿಕ್ಷಣದಿಂದ ವಂಚಿತಳಾಗಿ ಮಾಡಿ, ಧರ್ಮವನ್ನು ತನ್ನಿಚ್ಛೆಯಂತೆ ಮಾಡಿಕೊಂಡು, ಹೆಣ್ಣನ್ನು ಅಧೀನಳನ್ನಾಗಿ ಮಾಡಿಕೊಳ್ಳಲಾಗಿದೆ. ಇಲ್ಲಿ ಬಹುಪತ್ನಿತ್ವ, ಬುರ್ಖಾ ಪದ್ಧತಿ, ಮತ್ತು ತಲಾಖ್ ಪದ್ಧತಿಗಳು ಇಂದಿಗೂ ಜಾರಿಯಲ್ಲಿವೆ.

ಇಸ್ಲಾಂ ಧರ್ಮದಲ್ಲಿ ವಿಧವೆಯರಿಗೆ ಅತ್ಯುತ್ತಮ ಸ್ಥಾನವನ್ನು ನೀಡಲಾಗಿದೆ. ಪ್ರವಾದಿ ಮಹಮ್ಮದರೇ ವಿಧವೆಯಾದ ಖತೀಜಾರವರನ್ನು ವಿವಾಹವಾಗಿದ್ದರು. ಹೆಣ್ಣಿನ ಶಿಕ್ಷಣ ಕುರಿತು ಖುರಾನ್‌ನಲ್ಲಿ ಹೀಗೆ ಹೇಳಲಾಗಿದೆ. "ಯಾವುದೇ ಒಂದು ಜನಾಂಗದಲ್ಲಿ ಹರಡಿರುವ ಮೂಢನಂಬಿಕೆ, ಅನಾಚಾರಗಳನ್ನು ಹೊಡೆದೊಡಿಸಿ, ಅವರನ್ನು ಸುಸಂಸ್ಕೃತರಾಗಿಸಲು ಶಿಕ್ಷಣ ಅಗತ್ಯ". ಹಾಗಾಗಿ ಪೈಗಂಬರ್‌ರವರು ಹೆಣ್ಣು ಗಂಡು ಇಬ್ಬರೂ ಶಿಕ್ಷಣ ಪಡೆಯಬೇಕೆಂದು ಬೋಧಿಸಿದರು. ಆದರೆ ಪುರುಷರು ತಮ್ಮ ಸ್ವಾರ್ಥಕ್ಕಾಗಿ ಹೆಣ್ಣನ್ನು ಶಿಕ್ಷಣದಿಂದ ವಂಚಿತಳನ್ನಾಗಿಸಿ, ಆಕೆಯನ್ನು ಕೇವಲ ಮಕ್ಕಳನ್ನು ಹೆರಲು ಮತ್ತು ಸಾಕಲು ಯೋಗ್ಯಳು ಎಂದು ತೀರ್ಮಾನಿಸಿರುವುದು ವಿಷಾದನೀಯ.

ಇಂದು ಕಾಲ ಬದಲಾದಂತೆ ೧೪೦೦ ವರ್ಷಗಳ ಹಿಂದಿನ ಸೌದಿ ಅರೇಬಿಯಾದ ಸಾಮಾಜಿಕ ಸ್ಥಿತಿಗೂ, ಭಾರತದ ಇಂದಿನ ಸಾಮಾಜಿಕ ಸ್ಥಿತಿಗೂ ಬಹಳ ವ್ಯತ್ಯಾಸಗಳಾಗಿವೆ. ಕಾಲ ಬದಲಾದಂತೆ, ವಿಜ್ಞಾನದ ಪ್ರಗತಿ ಸಾಧಿಸಿದಂತೆ ಸಮಾಜದ ನಿಯಮಗಳೆಲ್ಲಾ ಬದಲಾವಣೆಯಾಗುತ್ತಿವೆ. ೧೯೮೬ರ ಮುಸ್ಲಿಂ ಮಹಿಳಾ ಮಸೂದೆ'ಯಲ್ಲಿ ವಿಚ್ಛೇದಿತ ಮಹಿಳೆಗೆ ಮೂರು ತಿಂಗಳು ಮಾತ್ರ ಜೀವನಾಂಶ ನೀಡಬೇಕೆಂದು ಉಲ್ಲೇಖಿಸಿರುವುದು ಪುರುಷರ ಸ್ವಾರ್ಥ ಮತ್ತು ದಬ್ಬಾಳಿಕೆಯ ಮತ್ತೊಂದು ಮುಖವಾಗಿದೆ.

ಮಹಿಳೆಯರು ನಮ್ಮಂತೆಯೇ ಅವರನ್ನು ದಬ್ಬಾಳಿಕೆ ಮಾಡುವುದು ಸರಿಯಲ್ಲ ಎಂಬ ವಿವೇಕ ಈ ಸಮಾಜಕ್ಕೆ ಎಂದು ಬಂದೀತೂ? ಮಹಿಳೆಯರನ್ನು ಹೂವಿನಂತೆ ನೋಡಿಕೊಂಡು, ವಜ್ರಗಳಂತೆ ರಕ್ಷಿಸುತ್ತೇವೆ ಎಂದು ಹೇಳುತ್ತಾ, ಅವರನ್ನು ಏಳನೇ ಶತಮಾನದಲ್ಲಿ ಇಡಬಯಸುವ ಈ ಕ್ರೂರ ಪದ್ಧತಿ ಇರುವತನಕ ಮಹಿಳೆಯರ ಉದ್ಧಾರ ಸಾಧ್ಯವಾಗದು.

ಹೆಣ್ಣು ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ, ಮಗಳಾಗಿ, ಪುರುಷನ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾಳೆ. ಆದರೂ ಅವಳು ಅನೇಕ ನಿರ್ಬಂಧ-ಗಳ ನಡುವೆಯೇ ಬೆಳೆಯಬೇಕಾದ ಪರಿಸ್ಥಿತಿಯನ್ನು ಸಮಾಜ ಅವಳ ಮೇಲೆ ಹೇರಿ, ಅವಳು ಶೋಷಣೆಗೆ ಒಳಗಾಗುವಂತೆ ಮಾಡಿದೆ.

'ಹೆಣ್ಣು ಭ್ರೂಣದಿಂದ ಹಿಡಿದು, ಘೋರಿಯವರೆಗೆ ಶೋಷಣೆಗೆ ಒಳಗಾಗುತ್ತಾಳೆ'. ಇಂಥ ಶೋಷಣೆಯನ್ನು ಇಡೀ ಮಾನವ ಕುಲ ತನ್ನ ಸಂಕುಚಿತ ಭಾವನೆಯನ್ನು ಬಿಟ್ಟು ಮಾನವೀಯತೆಯ ನೆಲೆಯಲ್ಲಿ ಸಹಾಯಹಸ್ತ ನೀಡಬೇಕು. ಅಲ್ಲದೆ "ಮಹಿಳೆಯರು ತಮ್ಮ ಮೇಲೆ ನಡೆಯುವ ದಬ್ಬಾಳಿಕೆಯ ವಿರುದ್ಧ, ತಮ್ಮ ಹಕ್ಕುಗಳ ವಿರುದ್ಧ, ದನಿ ಎತ್ತಬೇಕು. "ಹೆಣ್ಣಿಗೆ ಹೆಣ್ಣೇ ಶತ್ರು" ಎಂಬುದನ್ನು ಸುಳ್ಳಾಗಿಸಬೇಕು. ತಮ್ಮಲ್ಲಿ ತಮಗೆ ಆತ್ಮವಿಶ್ವಾಸ ಮೂಡಿಸಿ, ಸ್ತ್ರೀ ಶಕ್ತಿ ಒಟ್ಟಾಗಿ ನಿಂತಾಗ ಮಾತ್ರ ಮಹಿಳಾ ವಿಮೋಚನೆ ಸಾಧ್ಯ"[೪೫] ಎಂಬುದು 'ಸಾರಾ'ರವರ ಕಥೆಗಳಲ್ಲಿ ಕಾಣಬರುತ್ತದೆ.

'ಹೆಣ್ಣು ಅಬಲೆಯಲ್ಲ' ಎನ್ನುವ ರಾಗದೊಳಗೆ ಗಂಡಿನ ದೌರ್ಬಲ್ಯ ಮಾನಸಿಕ ದೌರ್ಬಲ್ಯ ಅಡಗಿದೆ. ತನ್ನ ಮನೋದೌರ್ಬಲ್ಯವನ್ನು ಒಪ್ಪಿಕೊಳ್ಳಲಾಗದೆ ಸ್ತ್ರೀಯನ್ನು ಅಸಹಾಯಕಿ ಎಂದು ಭಾವಿಸುವುದು ಉಚಿತವಲ್ಲ. ಒಂದು ದೇಶದ ಉದ್ಧಾರ, ಪ್ರತಿಯೊಂದು ಕುಟುಂಬದ ದಾಂಪತ್ಯದ ಸಾಮರಸ್ಯದಲ್ಲಿ ಅಡಗಿದೆ ಎಂಬುದರ ಅರಿವು ಪ್ರತಿಯೊಬ್ಬರಿಗೂ ಮನವರಿಕೆಯಾದರೆ ಆಗ ಮಾತ್ರ ಪ್ರತಿಯೊಬ್ಬರೂ ಗೌರವಾದಾರಗಳಿಗೆ ಅರ್ಹರಾಗುತ್ತಾರೆ.

ಮಹಿಳೆಯರೆಲ್ಲರೂ ಜಾತಿ, ಧರ್ಮಗಳ ಬಲೆಯಿಂದ ಹೊರಬಂದು, ಒಟ್ಟಾದಾಗ, ಸಹೋದರಿ ಭಾವದಿಂದ ಪರಸ್ಪರ ಕೈಹಿಡಿದು ಮುನ್ನಡೆದು ಎಲ್ಲ ಅಸಮಾನತೆಗಳ ವಿರುದ್ಧ ಒಕ್ಕೊರಲಿನಲ್ಲಿ ಧ್ವನಿ ಎತ್ತಿದಾಗ ಈ ಪರಿಸ್ಥಿತಿ ಬದಲಾದರೂ ಆಗಬಹುದು. ಅಂತಹ ಒಂದು ನವೋದಯಕ್ಕಾಗಿ ನಾವೆಲ್ಲರೂ ಕಾಯುವುದೇ ಇಂದು ನಮ್ಮೆದುರಿಗಿರುವ ಹಾದಿಯಾಗಿದೆ.

---

೪೫. ಡಾ. ಹೆಚ್.ಎಸ್.ಪಾರ್ವತಿ (ಸಂ.), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ.

ಸಮಾರೋಪ

"ಸಾಹಿತ್ಯ ನಿಂತ ನೀರಲ್ಲ, ಅದು ನಿತ್ಯವು ಪ್ರವಹಿಸುವಂಥಹದು. ಅದು ಯಾವಾಗಲೂ ನಿತ್ಯ ಪರಿವರ್ತನಾಶೀಲವಾದುದು. ಆಯಾ ಕಾಲದ ಜೀವನ ಪರಿಸರಕ್ಕೆ ತಕ್ಕಂತೆ ಸಾಹಿತ್ಯವಾದರೂ "ನವನವೋನ್ಮೇಶಶಾಲಿನಿ"ಯಾಗಿ ಹೊಸ ರೂಪವನ್ನು ಧರಿಸಿ ನಿಲ್ಲುತ್ತದೆ. ಸಾಹಿತ್ಯ ಆಯಾಕಾಲದ ಪರಿಸರದ ಕೂಸು. ಅದು ಆಯಾ ಕಾಲಕ್ಕೆ ಸ್ಪಂದಿಸಬೇಕು. ಒಂದು ವೇಳೆ ಅದು ಆ ರೀತಿ ಸ್ಪಂದಿಸದೆ ಹೋದರೆ ಅದು ನಿಷ್ಪ್ರಯೋಜಕವೆನಿಸುತ್ತದೆ."[೪೬] ಹಳಗನ್ನಡದಿಂದ ಹೊಸಗನ್ನಡಕ್ಕೆ ಬರುವಾಗ ಆ ಸಾಹಿತ್ಯವು ಕ್ರಮಿಸಿದ ಘಟ್ಟಗಳು ದಾಟಿಕೊಂಡು ಬಂದು ಕನ್ನಡ ಸಾಹಿತ್ಯವು ದಿನೇ ದಿನೇ ಬೆಳೆಯುತ್ತಿರುವುದನ್ನು ಕಾಣಬಹುದು.

ಪುರುಷ ಪ್ರಧಾನ ಸಮಾಜದಲ್ಲಿ ಶೋಷಣೆಗೆ ಒಳಗಾಗಿ ಕಣರೆಯಾಗಿದ್ದ ಹೆಣ್ಣು ತನ್ನ ಅಸ್ತಿತ್ವವನ್ನು ತಾನೇ ಕಂಡುಕೊಳ್ಳಲು ಸಾಹಿತ್ಯದ ಮೂಲಕ ನಡೆಸಿದ ಹೋರಾಟವೇ "ಸ್ತ್ರೀವಾದಿ ಸಾಹಿತ್ಯ". ಒಳಗೆ ಜೀವಿಸುತ್ತಿದ್ದ ಹೆಣ್ಣಿನ ಸ್ಪಂದನೆಯೂ, ಆಲೋಚನೆಯು, ಗ್ರಹಿಕೆಯ ರೀತಿಗಳು ಪುರುಷನ ಆಲೋಚನೆಗಿಂತ ಬೇರೆಯಾಗಿದ್ದವು. ಈ ಭಿನ್ನತೆ ಬದುಕನ್ನು ನೋಡುವ ದೃಷ್ಟಿಕೋನಕ್ಕೂ ಒಂದು ವಿಶೇಷತೆಯನ್ನು ತಂದಿತು. ಹೆಣ್ಣು ತನ್ನ ನೋವಿಗೆ ಅಭಿವ್ಯಕ್ತಿ ನೀಡಿದುದು ತನ್ನಂತಹವರ ಬಾಳನ್ನು ಬೆಳಕಾಗಿಸಲು ಸಿದ್ಧವಾದುದೇ ಸ್ತ್ರೀ ಸಂವೇದನೆಯಾಗಿದೆ.

ಭಾರತ ಮತ್ತು ಕರ್ನಾಟಕದಲ್ಲಿ ಸ್ತ್ರೀವಾದಿ ಸಾಹಿತ್ಯ ತನ್ನ ಪ್ರತ್ಯೇಕತೆಯನ್ನು ತೋರಿಸಿದಾಗ ಇದು "ಪಾಶ್ಚಾತ್ಯ ಸರಕು", "ಅಡುಗೆಮನೆ ಸಾಹಿತ್ಯ" ಎಂಬ ವಿಡಂಬನೆಯ ಮಾತುಗಳು ಹೊರಬಂದವು. ಆದರೂ ಸ್ತ್ರೀವಾದಿಗಳು ಪಾಶ್ಚಾತ್ಯ ವಿಚಾರಗಳನ್ನು ಇಲ್ಲಿನ ಸ್ಥಿತಿಗತಿಗಳಿಗೆ ತಕ್ಕಂತೆ ತಮ್ಮ ಧ್ಯೇಯೋದ್ದೇಶಗಳನ್ನು ಬದಲಾಯಿಸಿಕೊಂಡಿದ್ದಾರೆ. ಇದು ನಮ್ಮ ಸ್ತ್ರೀವಾದಿಗಳ ಚಿಂತನಾಶಕ್ತಿಯನ್ನು ತೋರಿಸುತ್ತದೆ.

ಇಂದು ಕರ್ನಾಟಕದಲ್ಲಿ "ಸ್ತ್ರೀಸಂವೇದನೆ" ಮತ್ತು "ಮುಸ್ಲಿಂ ಸಂವೇದನೆ" ಯೊಂದಿಗೆ ಬರೆಯುತ್ತಿರುವ ಸಾಹಿತಿಗಳು ಪ್ರಮುಖರೆನಿಸುತ್ತಾರೆ. ಅವರಲ್ಲಿ ಬೋಳುವಾರು, ಕಟ್ಪಾಡಿ, ಅಬ್ದುಲ್ ರಷೀದ್, ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್ ಮುಖ್ಯರಾದವರು. ಮುಸ್ಲಿಂ ಸಂವೇದನೆ ಮತ್ತು ಸ್ತ್ರೀಸಂವೇದನೆಯೊಂದಿಗೆ ಬರೆಯುತ್ತಿರು ವವರು ಸಾರಾ ಅಬೂಬಕ್ಕರ್ ಇವರಿಗಿಂತ ಹಾಸನದ "ಬಾನು ಮುಷ್ತಾಕ್" ಭಿನ್ನ ವಾಗಿರುವುದು ಅವರ ಬರಹಗಳಲ್ಲಿ ಗುರುತಿಸಬಹುದಾಗಿದೆ. ಸಾರಾರವರ ಬರಹಗಳಲ್ಲಿ ಕೇರಳದ 'ಮಲೆಯಾಳಿ' ಪ್ರಭಾವವಿದ್ದರೆ, ಕರ್ನಾಟಕದ ಪ್ರಾದೇಶಿಕ ಸೊಗಡು, ಹೆಸರು,

---

೪೬. ಭಾಷೆ ಮತ್ತು ಕನ್ನಡ ಬೋಧನೆ – ಡಾ.ಎನ್.ಬಿ.ಕೊಂಗವಾಡ, ಪು. ೨೬೮

ಸಂಸ್ಕೃತಿ ಉತ್ತರ ಕರ್ನಾಟಕವನ್ನು ಹೋಲುತ್ತವೆ. ಆದುದರಿಂದ ನಿಬಂಧದ ರಚನೆಗೆ ಈ ಇಬ್ಬರು ಲೇಖಕಿಯರ ಕಥಾಸಂಕಲನಗಳನ್ನು ಆಯ್ದುಕೊಂಡಿದ್ದೇನೆ.

ಮೊದಲಿಗೆ ಅಧ್ಯಯನದ ಉದ್ದೇಶ, ವ್ಯಾಪ್ತಿಯನ್ನು ತಿಳಿಸಿದ್ದೇನೆ. ಮೊದಲನೆ ಅಧ್ಯಾಯದಲ್ಲಿ ಆಧುನಿಕ ಸಣ್ಣಕಥೆಯ ಸ್ವರೂಪ, ಇತಿಹಾಸ ಮತ್ತು ತಾತ್ವಿಕತೆಯ ಬಗ್ಗೆ ಎರಡನೇ ಅಧ್ಯಾಯದಲ್ಲಿ 'ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ. ಮೂರನೇ ಅಧ್ಯಾಯದಲ್ಲಿ ಸಣ್ಣ ಕಥೆಯ ಪ್ರಕಾರದಲ್ಲಿ ಮಹಿಳಾ ಸಂವೇದನೆ, ನಾಲ್ಕನೆ ಅಧ್ಯಾಯದಲ್ಲಿ 'ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್'ರವರ ಜೀವನ ಮತ್ತು ಸಾಧನೆ'ಯ ಬಗ್ಗೆ, ಐದನೆ ಅಧ್ಯಾಯದಲ್ಲಿ ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಮತ್ತು ಬೆಂಕಿಮಳೆ ಕಥಾಸಂಕಲನಗಳ ವಿಶ್ಲೇಷಣೆ, ಆರನೆ ಅಧ್ಯಾಯದಲ್ಲಿ 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು' ಮತ್ತು 'ಬೆಂಕಿಮಳೆ' ಕಥಾಸಂಕಲನಗಳ ತೌಲನಿಕ ಅಧ್ಯಯನ. ಹಾಗೆಯೇ ಕೊನೆಗೆ ಸಮಾರೂಪವನ್ನು ಕುರಿತು ಪ್ರಸ್ತಾಪಿಸಿರುತ್ತೇನೆ. ಹೀಗೆ ೬ ಅಧ್ಯಾಯಗಳನ್ನೊಳಗೊಂಡ ನನ್ನ ನಿಬಂಧದ ಪರಿವಿಡಿಯ ಚಿತ್ರಣವನ್ನು ಕಾಣಬಹುದುದಾಗಿದೆ.

ಸಮಕಾಲೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬರೆಯುತ್ತಿರುವ ಬೆರಳೆಣಿಕೆಯ ಮುಸ್ಲಿಂ ಲೇಖಕಿಯರಲ್ಲಿ ಮುಖ್ಯರಾಗಿರುವ 'ಸಾರಾ ಅಬೂಬಕ್ಕರ್' ಮತ್ತು ಬಾನು ಮುಷ್ತಾಕ್ ಕೆಲವೇ ವರ್ಷಗಳ ಅಂತರದಲ್ಲಿ ತಮ್ಮ ಬರವಣಿಗೆಯನ್ನು ಆರಂಭಿಸಿದರು. ಮೊದಲಿಗೆ ಲಂಕೇಶ್ ಪತ್ರಿಕೆಯಲ್ಲಿ ಬರೆಯಲಾರಂಭಿಸಿ, ಹಲವು ಪತ್ರಿಕೆಗಳಲ್ಲಿ ತಮ್ಮ ಕಥೆಗಳನ್ನು ಪ್ರಕಟಿಸಿದ್ದಾರೆ. ಸಮಾಜದ ಅನಿಷ್ಠ ಪದ್ಧತಿಗಳನ್ನು ವಿಡಂಬಿಸಿ, ಅವುಗಳಿಂದ ಹೊರಬರಲು ಮಾನವೀಯ ಸಮಾಜ ನಿರ್ಮಿಸಲು ಪ್ರಯತ್ನಿಸುತ್ತಿರುವ ಬಿ.ಟಿ.ಲಲಿತಾ ನಾಯಕ್, ವೈದೇಹಿ, ಮಾಲತಿ ಪಟ್ಟಣಶೆಟ್ಟಿ, ನೇಮಿಚಂದ್ರ ಮೊದಲಾದವರೊಡನೆ ಇವರಿಬ್ಬರೂ ಲೇಖಕಿಯರು ಕೈಜೋಡಿಸಿದ್ದಾರೆ.

ಈ ಸಂಕಲನಗಳ ಹಲವು ಕಥೆಗಳಲ್ಲಿ ತಮ್ಮ ಸಮಾಜದಲ್ಲಿ ಹೆಣ್ಣಿಗೆ ಆಯ್ಕೆಯ ಸ್ವಾತಂತ್ರ್ಯ ಇಲ್ಲದಿರುವುದನ್ನು ಖಂಡಿಸಿದ್ದಾರೆ. ಮಾನವ ಪ್ರೀತಿಗಾಗಿ ಧರ್ಮದ ನಿಯಮಗಳನ್ನು ಮುರಿದು, ಪ್ರೀತಿಗೆ, ಮಾನವೀಯತೆಗೆ ಸ್ಥಾನ ದೊರಕಿಸಿ, ನಿಜವಾದ ಮಾನವ ಧರ್ಮ ಎಂದರೆ ಪ್ರೀತಿ ಎಂಬುದನ್ನು ಸಾರಿದ್ದಾರೆ. 'ಬೆಂಕಿಮಳೆ' ಕಥಾಸಂಕಲನದಲ್ಲಿ ಸಮಾನತೆಗಾಗಿ ಪ್ರಶ್ನೆ ಎತ್ತಿದ್ದಾರೆ. ಕರಿನಾಗರಗಳು, ಅರಕ್ಷಿತ ಕಥೆಗಳಲ್ಲಿ ತಮ್ಮ ಹಕ್ಕುಗಳಿಗಾಗಿ ಬೇಡಿದರೂ ವಿಫಲವಾಗುವ ಸ್ಥಿತಿಯನ್ನು ಹೇಳುತ್ತಾರೆ. ಅಸ್ತಿತ್ವ, ಉಳಿವಿಗಾಗಿ ನಡೆಸುತ್ತಿರುವ ಪ್ರಯತ್ನಗಳು ಇಲ್ಲಿ ಮುಖ್ಯವಾಗುತ್ತವೆ. ಜೀವನಕ್ರಮದ ಬದಲಾವಣೆಗೆ ಶಿಕ್ಷಣದ ಅವಶ್ಯಕತೆ ಇದೆ ಎಂಬುದನ್ನು ಹೇಳುತ್ತಾರೆ.

ಸಾರಾ ಮತ್ತು ಬಾನು ಮುಷ್ತಾಕ್‌ರವರು ಪರಂಪರೆಯಲ್ಲಿ ಶೋಷಣೆಯನ್ನು ಒಪ್ಪಿ, ಬದುಕುತ್ತಿರುವ ನಮ್ಮ ಮಹಿಳಾ ಪ್ರಪಂಚದಲ್ಲಿ ಬಂಡಾಯದ ದನಿ ಎತ್ತಿರುವ ಹೊಸ

ಆಲೋಚನೆಗಳೊಂದಿಗೆ ಬದುಕುತ್ತಿರುವ ಸ್ತ್ರೀಸಂವೇದನೆಯ ಲೇಖಕಿಯರಾಗಿದ್ದಾರೆ. ಹೆಣ್ಣು ಇವರ ಮುಖ್ಯ ಕಾಳಜಿ, ಮುಸ್ಲಿಂ ಜನಾಂಗದ ಹಿನ್ನೆಲೆಯಿಂದ ಬಂದಿರುವ ಇವರು ಕನ್ನಡದಲ್ಲಿ ಒಂದು ಗಟ್ಟಿತನದಿಂದ ಬರೆಯುತ್ತಿದ್ದಾರೆ. ಬಾನು ಮುಷ್ತಾಕರ ಕಥೆಗಳಂತೂ ನಮ್ಮನ್ನು ಬೇಗನೆ ಸ್ಪಂದಿಸುತ್ತದೆ. ಆದರೆ ದಲಿತ ಸಾಹಿತ್ಯದ ಆರಂಭದಲ್ಲಿನ ಆಕ್ರೋಶದಂತೆ ಇವರ ಕಥೆಗಳಲ್ಲಿ ಕೋಪ ಕಂಡುಬರುತ್ತದೆ. ಆದರೆ ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ತಣ್ಣನೆಯ ಧ್ವನಿಯಲ್ಲಿ ತೀವ್ರ ಪರಿಣಾಮಗಳನ್ನು ಕಾಣಬಹುದು. ಇವರದು ಒಂದು ರೀತಿಯ ಪ್ರಬುದ್ಧ ಮನಸ್ಸಿನ ಬರವಣಿಗೆ. ಆದುದರಿಂದ ಇವರ ಕೃತಿಗಳು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಿಮರ್ಶೆಯಲ್ಲಿ ಪ್ರಮುಖ ಸ್ಥಾನ ಪಡೆದಿವೆ.

ಇವರಿಬ್ಬರ ವಿಚಾರಗಳು ಕೇವಲ ಕಥೆಗಳಲ್ಲಿ ಮಾತ್ರವಲ್ಲದೆ ಕಾದಂಬರಿಗಳಲ್ಲಿ ವಿಸ್ತಾರವಾಗಿದೆ. ಇವರ ಒಟ್ಟು ಸಾಹಿತ್ಯ ಒಂದು ಸಂಶೋಧನ ಬರವಣಿಗೆಗೆ ಸಲ್ಲಬಲ್ಲಂತಹವು. ಆದರೆ ನಿಬಂಧಕ್ಕಾಗಿ ಸಾರಾ ಹಾಗೂ ಬಾನುಮುಷ್ತಾಕ್‌ರ ಒಂದೊಂದು ಕಥಾಸಂಕಲನಗಳನ್ನು ಸೀಮಿತಗೊಳಿಸಿಕೊಳ್ಳಲಾಗಿದೆ. ಮುಸ್ಲಿಂ ಸಾಹಿತ್ಯ ಜನಾಂಗಗಳ ಬಗೆಗೆ ಆಳವಾಗಿ ಅಧ್ಯಯನ ಮಾಡಿದವರಿಗೆ ಈ ನಿಬಂಧದಲ್ಲಿ ಹಲವು ಮಿತಿಗಳು ಕಾಣಬಹುದು.

ಈ ನಿಬಂಧದಿಂದ ನಾವು ತಿಳಿದುಕೊಳ್ಳುವುದೇನೆಂದರೆ ಒಂದೇ ಸಮಾಜದಲ್ಲಿ ಬದುಕುತ್ತಿದ್ದೂ ಮುಸ್ಲಿಂ ಸಂಸ್ಕೃತಿಯ ಆಚರಣೆಗಳನ್ನು ತಿಳಿಯದ ನಮಗೆ ಅವುಗಳ ಪರಿಚಯವಾಗುತ್ತದೆ. ಇಲ್ಲಿ ಹೇಳಿರುವುದೇ ಅಂತಿಮವಲ್ಲ. ಇದು ಇನ್ನೂ ಹಲವು ಚರ್ಚೆಗಳಿಗೆ ಅವಕಾಶವೀಯುವ ವಸ್ತುವಾಗಿದ್ದು, ಇಲ್ಲಿ ಸೀಮಿತತೆಗೆ ತಕ್ಕಂತೆ ಪರಿಶೀಲನೆ ಮಾಡಲಾಗಿದೆ. ಮಹಿಳೆಯರ ಉದ್ಧರಕ್ಕಾಗಿ ಈ ಲೇಖಕಿಯರು ಹಲವು ಪ್ರತಿಭಟನೆ, ಬಹಿಷ್ಕಾರ, ವಿರೋಧಗಳ ನಡುವೆಯೂ ಸಾಹಿತ್ಯ ಕೃಷಿ ಮಾಡಿರುವುದು ಮೆಚ್ಚಬೇಕಾದ ವಿಚಾರ, ಹಾಗೂ ಇವರ ಬರವಣಿಗೆಯಲ್ಲಿ ಸ್ತ್ರೀಸಂವೇದನೆ ಮತ್ತು ಅಭಿವೃದ್ಧಿಯೇ ಇವರ ಮುಖ್ಯ ಕಾಳಜಿ. ಆದುದರಿಂದ ಈ ನಿಬಂಧ ಈ ಇಬ್ಬರು ಲೇಖಕಿಯರ ಸಂವೇದನೆಯನ್ನು ಅನನ್ಯವಾಗಿಸುವ ಕಾಣ್ಕೆ ಇಲ್ಲಿದೆ.

ಪರಾಮರ್ಶನ ಗ್ರಂಥಗಳು

೧. ಸಾರಾ ಅಬೂಬಕ್ಕರ್, **'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು'**, ಕಥಾಸಂಕಲನ, ಚಂದ್ರಗಿರಿ ಪ್ರಕಾಶನ, ಮಂಗಳೂರು, ೧೯೯೬.

೨. ಬಾನು ಮುಷ್ತಾಕ್, **'ಬೆಂಕಿಮಳೆ'** ಕಥಾಸಂಕಲನ, ನೆಲಮನೆ ಪ್ರಕಾಶನ, ೧೯೯೯.

೩. ಡಾ. ಶಕುಂತಲ ಸಿದ್ದರಾಮ ದುರಗಿ, **'ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ'**, ಸ್ನೇಹ ಪ್ರಿಂಟರ್ಸ್, ೧೯೯೯.

೪. ಬರಗೂರು ರಾಮಚಂದ್ರಪ್ಪ, **'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ'** (ಸಂ.), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೫. ಕೆ.ಷರೀಫಾ, **'ಬಂಡಾಯ ಮುಸ್ಲಿಂ ಸಂವೇದನೆ'**, ೧೯೯೮.

೬. ಡಾ. ಸಿ.ಆರ್.ಯರವಿನ ತೆಲಿಮಠ, **ಪಾಶ್ಚಾತ್ಯ ಸಾಹಿತ್ಯವಾದಗಳೂ,** ಕನ್ನಡ ವಿ.ವಿ., ಹಂಪಿ, ೨೦೦೦.

೭. **'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೮. ಸಾರಾ ಅಬೂಬಕ್ಕರ್, **'ಅನಾವರಣ'**, ಚಂದ್ರಗಿರಿ ಪ್ರಕಾಶನ, ಮಂಗಳೂರು.

೯. ಡಾ. ಜಿ.ಹೆಚ್.ನಾಯಕ್, **'ನಿಜದನಿ'**, ಅಕ್ಷರ ಪ್ರಕಾಶನ, ೧೯೮೮.

೧೦. ಡಾ. ಪುರುಷೋತ್ತಮ ಬಿಳಿಮಲೆ, **'ದಲಿತ ಬಂಡಾಯ ಸಾಹಿತ್ಯ'**, ಕ.ಸಾ.ಅ, ೧೯೯೦.

೧೧. **'ಭಾಷೆ ಮತ್ತು ಕನ್ನಡ ಬೋಧನೆ'**, ಡಾ. ಎನ್.ಬಿ.ಕೊಂಗವಾಡ, ವಿದ್ಯಾನಿಧಿ ಪ್ರಕಾಶನ, ಗದಗ.

೧೨. ಜಿ.ಹೆಚ್.ನಾಯಕ್, **ಕನ್ನಡ ಸಣ್ಣ ಕಥೆಗಳು,**

೧೩. ಪಿ.ವ್ಹಿ.ಶಾಸ್ತ್ರಿ, **ಸಾಹಿತ್ಯದ ಪ್ರಕಾರಗಳು** – ಸಮಾಜ ಪುಸ್ತಕಾಲಯ, ಧಾರಾವಾಡ.

೧೪. ಡಾ. ಸತ್ಯನಾರಾಯಣ ಮಲ್ಲಿಪಟ್ಟಣ, **ಕನ್ನಡ ಸಣ್ಣಕಥೆ : ಹೆಜ್ಜೆ ಮತ್ತು ಹಾದಿ**

೧೫. ಎಲ್.ಎಸ್.ಶೇಷಗಿರಿರಾವ್, **ಹೊಸಗನ್ನಡ ಸಾಹಿತ್ಯ**

೧೬. ರಂಗರಾಜ ವನದುರ್ಗ, **ಬಂಡಾಯ ಸಾಹಿತ್ಯ ಸಂವೇದನೆ (ಸಂ)**

೧೭. ಎನ್.ಗಾಯತ್ರಿ, **ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ,** ನವೋದಯ ಸಾಹಿತ್ಯದಲ್ಲಿ ಸಾಂಸ್ಕೃತಿಕ ವಿಕಾಸ.

೧೮. ಡಾ. ಹೆಚ್.ಎಸ್.ಪಾರ್ವತಿ, **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ (ಸಂ)**

೧೯. **ಸಾಹಿತ್ಯ ವಿಮರ್ಶೆ, ೧೯೯೩, ಆಧುನಿಕ ಸಣ್ಣ ಕಥೆಗಳಲ್ಲಿ ಮಹಿಳಾ ಸಮಸ್ಯೆ** ಡಾ. ಕೆ.ಕೇಶವಮೂರ್ತಿ

೨೦. ಡಾ. ಎನ್.ಕೆ.ಕೋದಂಡರಾಮ, **ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ.**

೨೧. ಸಾರಾ ಅಬೂಬಕ್ಕರ್, **ಚಪ್ಪಲಿಗಳು,** ನವಕರ್ನಾಟಕ ಪ್ರಕಾಶನ, ೧೯೮೯.

೨೨. **ಸ್ತ್ರೀವಾದಿ ಸಾಹಿತ್ಯ ವಿಮರ್ಶೆ,** ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಕನ್ನಡ ಸಂಘ, ಬೆಂಗಳೂರು, ೧೯೯೪.

೨೩. **ಸ್ತ್ರೀವಾದ,** ಡಾ.ಬಿ.ಎನ್.ಸುಮಿತ್ರಾಬಾಯಿ, ಕನ್ನಡ ಸಾಹಿತ್ಯ ಅಕಾಡೆಮಿ, ೧೯೯೯.

೨೪. ಭಾಷಾವಿಶ್ವಕೋಶ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೫. ಕನ್ನಡ ವಿಷಯ ವಿಶ್ವಕೋಶ(ಸಂ.), ಹಾ.ಮಾ.ನಾಯಕ್.

೨೬. **ಲೇಖನಗುಚ್ಛ,** ಸಾರಾ ಅಬೂಬಕ್ಕರ್, ಚಂದ್ರಗಿರಿ ಪ್ರಕಾಶನ, ಮಂಗಳೂರು.

****